ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 21 ಮೇ 19-25, 1997 ಬೆಲೆ ರೂ. 2.00

"ಬಂಡವಾಳಿಗರನ್ನು ಮೆಚ್ಚಿಸುವ ನೀತಿಗಳನ್ನು ನಿಲ್ಲಿಸಿ"

ರಾಷ್ಟ್ರವ್ಯಾಪಿ ಪ್ರಚಾರಾಂದೋಲನ ನಡೆಸಲು ಸಿಪಿಐ(ಎಂ) ಕರೆ

ಸಿರಿವಂತರನ್ನು, ವ್ಯಾಪಾರಸ್ಥರನ್ನು, ವಿದೇಶೀ ಹೂಡಿಕೆದಾರರನ್ನು ಮೆಚ್ಚಿಸುವ ಆರ್ಥಿಕ ನೀತಿಗಳನ್ನು ಬಿಟ್ಟು ಸಂಯುಕ್ತ ರಂಗ ತನ್ನ 'ಸಮಾನ ಕನಿಷ್ಠ ಕಾರ್ಯಕ್ರಮ' ದಲ್ಲಿ ಜನಸಾಮಾನ್ಯರಿಗೆ ನೀಡಿದ ವಚನಗಳನ್ನು ಈಡೇರಿಸುವಂತೆ ಒತ್ತಾಯಿಸಿ ದೇಶಾದ್ಯಂತ ಪ್ರಚಾರಾಂದೋಲನ ನಡೆಸಲು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದೆ. ಜುಲೈ 15 ರಿಂದ ಈ ಪ್ರಚಾರಾಂದೋಲನ ಎರಡು ವಾರಗಳ ಕಾಲ ನಡೆಯುವುದು. ನವದೆಹಲಿಯಲ್ಲಿ ಮೇ 12 ರಿಂದ 14 ರ ವರೆಗೆ ನಡೆದ ಕೇಂದ್ರ ಸಮಿತಿಯ ಸಭೆ ಈ ಕರೆ ನೀಡಿದೆ. ವಿಶೇಷವಾಗಿ ದುಡಿಯುವ ಜನಗಳನ್ನು ತಟ್ಟುವ ಪ್ರಶ್ನೆಗಳು ಹಾಗೂ ದೇಶದ ಆರ್ಥಿಕ ಸ್ವಾವಲಂಬನೆಯ ಪ್ರಶ್ನೆಗಳ ಮೇಲೆ ಈ ಪ್ರಚಾರಾಂದೋಲನ ನಡೆಯುತ್ತದೆ.

ಕೇವಲ ಸಂಯುಕ್ತ ರಂಗ ಸರಕಾರವನ್ನು ಉಳಿಸಲು ಸಿಪಿಐ(ಎಂ) ಆದರ ಹಣಕಾಸು ಮಸೂದೆಯ ಅಂಗೀಕಾರಕ್ಕೆ ಬೆಂಬಲ ನೀಡಿತು. ಆದರೆ ಬಜೆಟ್‌ನ ಅಂಶಗಳ ಬಗ್ಗೆ ತನ್ನ ವಿರೋಧವನ್ನು ಸಿಪಿಐ(ಎಂ) ಬಹಿರಂಗವಾಗಿ ವ್ಯಕ್ತಪಡಿಸುವುದಾಗಿ ಕೇಂದ್ರ ಸಮಿತಿಯು ಮೂರು ದಿನಗಳ ಸಭೆಯ ನಂತರ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಸ್ಪಷ್ಟೀಕರಣ ನೀಡಿದರು.

ದೊಡ್ಡ ವ್ಯಾಪಾರಸ್ಥರು, ವಿದೇಶೀ ಬಂಡವಾಳಿಗರು ಹಾಡಿ ಹೊಗಳಿದ ಈ ಬಜೆಟ್ ಬಡ ಮತ್ತು ಶ್ರೀಮಂತರ ನಡುವಿನ ಕಂದಕವನ್ನು, ಅಸಮಾನತೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ಸಂಪನ್ಮೂಲಗಳನ್ನು ಬಡವರಿಂದ ಸಿರಿವಂತರತ್ತ ವರ್ಗಾಯಿಸುತ್ತದೆ. ದೇಶೀ ಉದ್ದಿಮೆಗಳನ್ನು, ವಿಶೇಷವಾಗಿ ಬಹಳಷ್ಟು ಉದ್ಯೋಗಾವಕಾಶ ನಿರ್ಮಿಸುತ್ತಿರುವ ಸಣ್ಣ ಕೈಗಾರಿಕೆಗಳನ್ನು ನಾಶ ಮಾಡುತ್ತದೆ ಎಂದು ಸುರ್ಜಿತ್ ಹೇಳಿದರು.

ಬಡತನದ ರೇಖೆಯ ಕೆಳಗಿರುವ ಜನಗಳಿಗೆ ಪ್ರಯೋಜನವಾಗುವಂತೆ ರೇಶನ್ ವ್ಯವಸ್ಥೆಯನ್ನು ಬಲಪಡಿಸ ಬೇಕು, ಲಾಭಗಳಿಸುತ್ತಿರುವ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳ ಮಾರಾಟದ ಕ್ರಮವನ್ನು ನಿಲ್ಲಿಸಬೇಕು, ವಿಮಾ ವಲಯವನ್ನು ಖಾಸಗಿಯವರಿಗೆ ತೆರೆಯುವುದನ್ನು ನಿಲ್ಲಿಸಬೇಕು ಹಾಗೂ ವಿಮಾ ನಿಯಂತ್ರಣಾ ಪ್ರಾಧಿಕಾರ ಮಸೂದೆಯನ್ನು ಹಿಂತೆಗದುಕೊಳ್ಳಬೇಕು ಎಂದು ಕೂಡಾ ಒತ್ತಾಯಿಸಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಈ ಎಲ್ಲಾ ಅಂಶಗಳ ಬಗ್ಗೆ ದೇಶವ್ಯಾಪಿ ಪ್ರಚಾರಾಂದೋಲನ ನಡೆಸುವುದಾಗಿ ಎಚ್ಚರಿಸಿದೆ. ಸಂಯುಕ್ತ ರಂಗದ ಪಕ್ಷಗಳು ಜನರ ವಿಶ್ವಾಸ ಗಳಿಸಬೇಕಾದರೆ ಪರ್ಯಾಯ ಆರ್ಥಿಕಗಳನ್ನು ರೂಪಿಸಿ ಜಾರಿಗೊಳಿಸಬೇಕು. ಮನಮೋಹನ್ ಸಿಂಗ್‌ರವರ ನೀತಿಗಳನ್ನು ಮುಂದುವರಿಸ ಬಾರದು ಎಂದು ಸುರ್ಜಿತ್ ಹೇಳಿದರು.

ಸಿಬಿಐ ಬಗ್ಗೆ ಈ ಬೊಬ್ಬೆ ಏಕೆ?

ಕಾಂಗ್ರೆಸ್(ಐ), ಬಿಜೆಪಿ, ಜನತಾದಳಗಳು ಸಿಬಿಐಗೆ ಗುರಿಯಿಟ್ಟು ಮಾಡಿರುವ ಟೀಕೆಗಳ ಬಗ್ಗೆ ಪತ್ರಕರ್ತರು ಕೇಳಿದಾಗ ಸುರ್ಜಿತ್ "ಸಿಬಿಐಯನ್ನೇಕೆ ಗುರಿಮಾಡಬೇಕು? ನಿಮಗೆ ಸಂದೇಹಗಳಿದ್ದರೆ ಸಿಬಿಐ ನಿರ್ದೇಶಕರನ್ನು ಕೇಳಬಹುದಲ್ಲ" ಎಂದರು. ಭ್ರಷ್ಟಾಚಾರ ನಿರ್ಮೂಲನದ ವಿರುದ್ಧ ಮಾತನಾಡುವ ಪಕ್ಷಗಳೂ ಇದರಲ್ಲಿ ಸೇರಿಕೊಂಡಿರುವುದು ತಂತಮ್ಮ ಪಕ್ಷಗಳ ಮುಖಂಡರ ಮೇಲೆ ಇರುವ ಕೇಸುಗಳಿಂದ ಭಯಗ್ರಸ್ತರಾಗಿರುವುದರಿಂದ ಎಂದ ಸುರ್ಜಿತ್ ಮೇವು ಹಗರಣ, ಬೋಫೋರ್ಸ್ ವರದಿಹಾಗೂ ಬಿಜೆಪಿ ಮುಖಂಡ ಅಡ್ವಾಣಿಯವರ ವಿರುದ್ಧ ಹವಾಲಾ ಕೇಸನ್ನು ವಜಾ ಮಾಡಿದ ತೀರ್ಪಿನ ಪರಾಮರ್ಶೆಯಾಗಬೇಕು ಎಂದು ಸಿಬಿಐ ಕೇಳಿರುವುದೇ ಈ ಭಯಗ್ರಸ್ತತೆಗೆ ಕಾರಣ ಎಂದು ಅಭಿಪ್ರಾಯಪಟ್ಟರು.

ಮೇವು ಹಗರಣದ ಬಗ್ಗೆ ಕೇಳಿದಾಗ ಸುರ್ಜಿತ್‌ರವರು ಲಾಲೂ ಪ್ರಸಾದ್ ಯಾದವ್‌ರವರು ರಾಜೀನಾಮೆ ನೀಡಬೇಕೆಂಬ ಒತ್ತಾಯವನ್ನು ಪುನರುಚ್ಚರಿಸಿದರು. ಲಾಲೂರವರು ತನ್ನನ್ನು ಸಂಪರ್ಕಿಸಿದಾಗ "ಸಾರ್ವಜನಿಕ ಜವಾಬ್ದಾರಿಯನ್ನು ಗಮನದಲ್ಲಿಟ್ಟುಕೊಂಡು ಅಧಿಕಾರದಿಂದ ಕೆಳಗಿಳಿಯಲು" ತಾನು ಹೇಳಿರುವುದಾಗಿ ಸುರ್ಜಿತ್ ಪ್ರತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ ಹೇಳಿದರು. ಈ ಹಗರಣದಲ್ಲಿ ಆರೋಪ ಪಟ್ಟಿಗೊಳಗಾಗಿರುವ ಎಲ್ಲರೂ ರಾಜೀನಾಮೆ ನೀಡಬೇಕು, ಇದು ಬಿಹಾರದಲ್ಲಿ ಹಾಗೂ ಇಡೀ ದೇಶದಲ್ಲಿ ಜನತಾದಳದ ಹೆಸರಿಗೆ ಕಳಂಕ ತಟ್ಟುವುದನ್ನು ತಪ್ಪಿಸುತ್ತದೆ ಎಂದು ಅವರು ಹೇಳಿದರು. ಬಿಹಾರದಲ್ಲಿ ಎಡಪಕ್ಷಗಳು ಈ ಬಗ್ಗೆ ನಡೆಸಿರುವ ಆಂದೋಲನಕ್ಕೆ ಜನಗಳಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ ಎಂದೂ ಅವರು ತಿಳಿಸಿದರು.

ಜನತಾದಳದ ನಾಯಕತ್ವದಲ್ಲಿ ಬದಲಾವಣೆ - ಧೋರಣೆಯಲ್ಲೂ ಬದಲಾವಣೆ ಕಂಡೀತೆ?

ರಾಜ್ಯದ ಜನತಾದಳದ ಅಧ್ಯಕ್ಷರಾಗಿ ಬಿ.ಎಸ್.ಶಂಕರ್ ಆರಿಸಿ ಬಂದಿದ್ದಾರೆ. ಬಂಡವಾಳಶಾಹಿ ಪಕ್ಷಗಳಿಗೆ ಜಾತಿ-ಉಪಜಾತಿಗಳೇ-ಪ್ರಾದೇಶಿಕವಾರು ಚಿಂತನೆಯೇ ಆಧಾರ ಸ್ತಂಭವಾಗಿರುವಾಗ ಲಿಂಗಾಯತ ಕೋಮಿನವರು ಮುಖ್ಯಮಂತ್ರಿಯಾಗಿರುವಾಗ ಒಕ್ಕಲಿಗನೊಬ್ಬ ದಳದ ಅಧ್ಯಕ್ಷನಾಗಬೇಕೆಂಬ ತತ್ವ ದಳದ ಮುಖಂಡರದ್ದಾಗಿತ್ತು. ಅದಕ್ಕಿಂತಲೂ ಮುಖ್ಯವಾಗಿ ತಮ್ಮ ಹಿಡಿತ ಭದ್ರ ಗೊಳಿಸುವ ಉದ್ದೇಶದಿಂದ ದೇವೇಗೌಡರು ತಮ್ಮ ನಿಕಟವರ್ತಿ ಬಿ.ಎಲ್.ಶಂಕರ್ ದಳದ ಅಭ್ಯರ್ಥಿಯನ್ನಾಗಿ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ತನ್ನ ಸ್ಥಾನ ಭದ್ರಗೊಳಿಸುವ ಉದ್ದೇಶದಿಂದ ಜೆ.ಎಚ್.ಪಟೇಲರು ಕೂಡಾ ದೇವೇಗೌಡರ ಅಭಿಪ್ರಾಯಗಳಿಗೆ ಹೂಂಗುಟ್ಟುವ, ವಿಧೇಯರಾಗುಳಿಯಲು ಇಚ್ಚಿಸಿದ್ದಾರೆ. ಹಾಗಾಗಿ ಕೆ.ಎಂ.ಇಬ್ರಾಹಿಂ ಅವರು ಕೇಂದ್ರದಲ್ಲಿ ಮಂತ್ರಿಯಾದ ನಂತರ ರಾಜ್ಯದ ಜನತಾದಳದ ಅಧ್ಯಕ್ಷರನ್ನಾಗಿ ಬೇರೊಬ್ಬರನ್ನು ನೇಮಿಸಬೇಕೆಂಬ ಒತ್ತಡ ಬರುತ್ತಿದ್ದರೂ ರಾಜ್ಯ ಮಟ್ಟದ ಜನತಾದಳದಲ್ಲಿದ್ದ ಭಿನ್ನಾಭಿಪ್ರಾಯಗಳಿಂದಾಗಿ ಮತ್ತು ಹೊರಗಿನ ಪರಿಸ್ಥಿತಿ ಒಮ್ಮತದ ಅಭ್ಯರ್ಥಿಯನ್ನು ಆರಿಸಲಿಕ್ಕೆ ಸುಗಮವಾಗಿರಲಿಲ್ಲ. ದೇವೇಗೌಡರು ಪ್ರಧಾನಿ ಪಟ್ಟ ಬಿಟ್ಟುಕೊಟ್ಟನಂತರ, ದೇಶದಲ್ಲಿ ಹಾಗೂ ರಾಜ್ಯದ ರಾಜಕೀಯದ ಹಿನ್ನೆಲೆಯಲ್ಲಿ ಈ ಚುನಾವಣೆ ನಡೆಯಿತು.

ಜನತಾದಳದ ಅಧ್ಯಕ್ಷರ ಚುನಾವಣೆ ಆ ಪಕ್ಷದ ಆಂತರಿಕ ಸಮಸ್ಯೆ ಅಲ್ಲವೇ? ಅದರ ಕುರಿತು ನೀವು ಯಾಕೆ ತಲೆ ಕೆಡಿಸಿಕೊಳ್ಳಬೇಕೆಂದು ನೀವು ಕೇಳಬಹುದು. ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಜನತಾದಳದ ಮುಖಂಡತ್ವದ ಕುರಿತು ಚಿಂತನೆ ಅಗತ್ಯ. ಎಡ ಮತ್ತು ಜಾತ್ಯಾತೀತ ಪಕ್ಷಗಳು, ಗುಂಪುಗಳು ಅದರತ್ತ ಹೆಚ್ಚಿನ ಗಮನ ಹರಿಸುವ ಅವಶ್ಯಕತೆಯಿದೆ. ಅಖಿಲ ಭಾರತ ಮಟ್ಟದಲ್ಲಿ ಕಾಂಗ್ರೆಸ್ ಅಧ್ಯಕ್ಷ ಪದವಿಯಲ್ಲಾದ ಬದಲಾವಣೆ ಇಡೀ ದೇಶ ಮತ್ತು ಜಗತ್ತಿನಲ್ಲಿ ಎಂಥ ಗೊಂದಲ, ಅಸ್ಥಿರತೆ ಉಂಟುಮಾಡಿತ್ತು ಎಂಬುದನ್ನು ಜನಸಾಮಾನ್ಯರು ಚೆನ್ನಾಗಿಯೇ ಗಮನಿಸಿದ್ದಾರೆ. ಸಂಯುಕ್ತ ರಂಗದ ದೇವೇಗೌಡರ ಸರಕಾರಕ್ಕೆ ಕಾಂಗ್ರೆಸ್ ಹೊರಗಿನಿಂದಲೇ ಬೆಂಬಲ ನೀಡುವ ನಿರ್ಣಯವನ್ನು ನರಸಿಂಹರಾವ್ ಅವರು ಅಧ್ಯಕ್ಷರಾಗಿದ್ದಾಗಲೇ ತೆಗೆದುಕೊಳ್ಳಲಾಗಿತ್ತು. ಯಾವ ಭಯಭೀತಿ ಇಲ್ಲದೆ ದೇವೇಗೌಡರು ಅಧಿಕಾರ ನಡೆಸಲು ಸಾಧ್ಯವಾಯಿತು. ಆರೇಳು ತಿಂಗಳ ಆಡಳಿತೆಯ ನಂತರ ಸೀತಾರಾಂ ಕೇಸರಿಯವರು ಕಾಂಗ್ರೆಸ್ ಅಧ್ಯಕ್ಷರಾದ ನಂತರ ದೇವೇಗೌಡರ ಸರಕಾರದ ಕುರಿತು ಸೀತಾರಾಂ ಕೇಸರಿಯವರ ಧೋರಣೆಯಲ್ಲಿ ಬದಲಾವಣೆಯಾಗಿ, ತಾನೇ ದೇವೇಗೌಡರ ಸ್ಥಾನವನ್ನು ಅಲಂಕರಿಸಬೇಕೆಂಬ ದುರಾಸೆಯಿಂದ ಸಂಯುಕ್ತ ರಂಗ ಸರಕಾರಕ್ಕೆ ನೀಡುತ್ತಿದ್ದ ತನ್ನ ಪಕ್ಷದ ಬೆಂಬಲವನ್ನು ಹಿಂದೆ ಪಡೆದು ಪ್ರಧಾನ ಮಂತ್ರಿ ಸ್ಥಾನಕ್ಕೆ ತನ್ನ ಹೆಸರನ್ನೇ ಸೂಚಿಸುವ ಮೂಲಕ ಗಂಭೀರ ಪರಿಸ್ಥಿತಿ ಉಂಟಾಗಲಿಕ್ಕೆ ಅವಕಾಶ ಮಾಡಿಕೊಟ್ಟರು. ದೇವೇಗೌಡರು ಪ್ರಧಾನಿ ಸ್ಥಾನ ಬಿಟ್ಟುಕೊಡಬೇಕಾಯಿತು.

ಪಕ್ಷದ ಸಂವಿಧಾನದ ಪ್ರಕಾರ ಕಾಲಕಾಲಕ್ಕೆ ಸರಿಯಾಗಿ ತಳದಿಂದ ಮೇಲ್ಮಟ್ಟದವರೆಗೆ ಚುನಾವಣೆ ಮಾಡದೆ, ಅಧ್ಯಕ್ಷ ಸ್ಥಾನದಲ್ಲಿದ್ದ ವ್ಯಕ್ತಿ ತನಗೆ ಬೇಕಾದವರನ್ನು ನೇಮಿಸಿಕೊಳ್ಳುತ್ತ ಇಡೀ ಸಂಘಟನೆಯನ್ನು ತನ್ನ ಕಪಿ ಮುಷ್ಠಿಯಲ್ಲಿಟ್ಟುಕೊಂಡು ತನಗೆ, ತನ್ನ ಬೆಂಬಲಿಗರಿಗೆ ಅನುಕೂಲವಾಗುವ ರೀತಿಯಲ್ಲಿ ನೀತಿನಿರೂಪಣೆಗಳನ್ನು ಹೇರುವ ಪ್ರವೃತ್ತಿ ಕಾಂಗ್ರೆಸ್, ಜನತಾದಳ ಮುಂತಾದ ಬಂಡವಾಳಶಾಹಿ ಪಕ್ಷದಲ್ಲಿರುವುದನ್ನು ಕಾಣುತ್ತಲಿದ್ದೇವೆ. ಈ ಪಕ್ಷಗಳಲ್ಲಿ ಅಧಿಕಾರದಲ್ಲಿರುವ ಗುಂಪು ತಮ್ಮದೇ ಆದ ಕಾರಣಗಳಿಂದಾಗಿ ಪಕ್ಷದ ಘಟಕಗಳ ಚುನಾವಣೆ ನಡೆಸಲು ಹಿಂದೇಟು ಹಾಕುತ್ತಿರುವುದನ್ನು ಕಂಡ ಚುನಾವಣಾ ಆಯೋಗ ಕಾಂಗ್ರೆಸ್, ಜನತಾದಳ, ಅಸ್ಸಾಂ ಗಣ ಪರಿಷತ್ ಮೊದಲಾದ ಪಕ್ಷಗಳು ಜೂನ್ 15 ರೊಳಗೆ ತಮ್ಮ ಪಕ್ಷದ ಸಾಂಸ್ಥಾಪಿಕ ಚುನಾವಣೆಗಳನ್ನು ಮುಗಿಸಬೇಕೆಂಬ ಆದೇಶ ಕೊಡಬೇಕಾದಂಥ ಪರಿಸ್ಥಿತಿ ನಮ್ಮ ದೇಶದಲ್ಲಿ ಉಂಟಾಗಿದೆಂದರೆ ಅರ್ಥವೇನು? ಬಂಡವಾಳ ಶಾಹಿ ಪಕ್ಷಗಳಲ್ಲಿ ಪ್ರಜಾಪ್ರಭುತ್ವವೆಂಬುದಿಲ್ಲ. ವ್ಯಕ್ತಿಗಳ ಸರ್ವಾಧಿಕಾರತ್ವವನ್ನು ಕಾಣಬಹುದಾಗಿದೆ.

ಹೋದ ವರ್ಷ ನಡೆದ ಲೋಕಸಭೆಯ ಚುನಾವಣೆಯಲ್ಲಿ ಹಾಗೂ ಚುನಾವಣೆಯ ನಂತರ ಕಾಂಗ್ರೆಸ್, ಬಿಜೆಪಿಗಳಿಗೆ ಸರಕಾರ ರಚಿಸಲು ಸಾಧ್ಯವಾಗಲಾರದಾದಾಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಿರಂತರ ಪ್ರಯತ್ನದಿಂದಾಗಿ ನಾಲ್ಕು ಎಡಪಕ್ಷಗಳೆಲ್ಲ ಸೇರಿ ಸಂಯುಕ್ತ ರಂಗ ರಚಿಸಿ, ಸರಕಾರ ರಚಿಸಿರುವಾಗ, ದೇಶದಲ್ಲಿ ಕಾಂಗ್ರೆಸ್, ಬಿಜೆಪಿಗಳ ವಿರುದ್ಧ ಎಡ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಗೊಳಿಸಿ ಅವುಗಳ ಪ್ರಭಾವ

ಪುಟ 2 ನೋಡಿ

ಪೆಟ್ರೋಲಿಯಂ ಬೆಲೆಯೇರಿಕೆ ಅನಿವಾರ್ಯವೇ!

ಹೌದೆನ್ನುತ್ತಾರೆ ಪ್ರಧಾನಿಗಳು, ಹಣಕಾಸು ಮಂತ್ರಿಗಳು ಹಾಗೂ ಎಲ್ಲಾ ದೊಡ್ಡ ಬಂಡವಾಳಶಾಹಿ ಪತ್ರಿಕೆಗಳು. ಆದರೆ ಇದು ಎಷ್ಟು ನಿಜ?

ತೈಲ ನಿಧಿಯ ಕೊರತೆ 15000 ಕೋಟಿ ರೂ. ದಾಟಿದೆಯಾದ್ದರಿಂದ ಇದು ಅನಿವಾರ್ಯ ಎನ್ನಲಾಗುತ್ತಿದೆ. ಈ ಕೊರತೆ ಇಷ್ಟು ಬೃಹತ್ ಪ್ರಮಾಣದಲ್ಲಿದೆ ಎಂಬುದು ನಿಜ. ಆದರೆ ಅದಕ್ಕಾಗಿ ಒಂದು ವರ್ಷದೊಳಗೇ ಮತ್ತೊಮ್ಮೆ ಬೆಲೆಯೇರಿಕೆ ಏಕೈಕ ದಾರಿಯೇ? ಈ ಲೆಕ್ಕಾಚಾರ ನೋಡಿ-

- 1990ರ ದಶಕದ ಆರಂಭದಲ್ಲಿ ಬಜೆಟ್ ಕೊರತೆಯನ್ನು ಕಮ್ಮಿ ಮಾಡಲು 4429 ಕೋಟಿ ರೂ.ಗಳನ್ನು ತೈಲ ನಿಧಿಯಿಂದ ಪಡೆಯಲಾಯಿತು. 1993ರಲ್ಲಿ ಅದನ್ನು ಈಗ ತೈಲ ಕಂಪನಿಗಳು ನೀಡುತ್ತಿರುವ ಬಡ್ಡಿ ದರ(15-18 ಶೇ.)ದಲ್ಲಿ ತೈಲ ನಿಧಿಗೆ ವಾಪಾಸು ಮಾಡಿದರೆ 6000 ಕೋಟಿ ರೂ.ಗಳಾಗುತ್ತದೆ.
- 1996-97ರ ಬಜೆಟ್‌ನಲ್ಲಿ ತೈಲ ಆಮದಿನ ಮೇಲೆ ಕಸ್ಟಮ್ಸ್ ಸುಂಕದಿಂದ 1000 ಕೋಟಿ ರೂ. ಬರುವುದಾಗಿ ಅಂದಾಜು ಮಾಡಲಾಗಿತ್ತು. ನಿಜವಾಗಿ ಬಂದದ್ದು 5360 ಕೋಟಿ ರೂ. ಆದ್ದರಿಂದ ಈ ಹೆಚ್ಚಿನ 4360 ಕೋಟಿ ರೂ. ತೈಲ ನಿಧಿಗೆ ವರ್ಗಾಯಿಸಬೇಕು.
- ಸರಕಾರ ಈಗ ತೈಲ ಅಭಿವೃದ್ಧಿ ತೆರಿಗೆ ವಸೂಲು ಮಾಡುತ್ತಿದೆ. ಮಾರ್ಚ್ 1996ರ ವೇಳೆಗೆ ಇದರಲ್ಲಿ 26000 ಕೋಟಿ ರೂ. ವಸೂಲಿಯಾಗಿದೆ. ಆದರೆ ಇದುವರೆಗೆ ಸರಕಾರ ತೈಲ ಅಭಿವೃದ್ಧಿಗೆಂದು ಕೊಟ್ಟದ್ದು ಕೇವಲ 902 ಕೋಟಿ ರೂ. ಉಳಿದದ್ದು ಎಲ್ಲಿಗೆ ಹೋಯಿತು?

ಈ ಲೆಕ್ಕಾಚಾರ ನೋಡಿದರೆ 15000 ಕೋಟಿ ರೂ. ಕೊರತೆಯನ್ನು ನೀಗಿಸಲು ಜನಸಾಮಾನ್ಯರ ತಲೆಯ ಮೇಲೆ ಹೊರೆ ಹಾಕುವುದು ಅನಿವಾರ್ಯ ಎನಿಸುತ್ತಿದೆಯೇ? ಹಣಕಾಸು ಇಲಾಖೆಯ ದುಂದುಕೋರತನಕ್ಕೆ ಜನಸಾಮಾನ್ಯರು ಬೆಲೆ ತೆರಬೇಕೇ?

ಇದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು ಒಂದು ಅಧ್ಯಯನ ಲೇಖನದಲ್ಲಿ ಕೇಳಿರುವ ಪ್ರಶ್ನೆ. 'ಐಕ್ಯರಂಗ'ದ ಮುಂದಿನ ವಾರದ ಸಂಚಿಕೆಯಲ್ಲಿ ಈ ಲೇಖನವನ್ನು ನಿರೀಕ್ಷಿಸಿ.

ತಮಿಳುನಾಡಿನ ಮಧುರೈನ ನಗರಸಭಾ ಸದಸ್ಯೆಯಾಗಿದ್ದು ಜನಗಳ ಪರವಾದ ದನಿಯೆತ್ತಿದ್ದಕ್ಕೆ ತನ್ನ ಪ್ರಾಣವನ್ನೇ ಅರ್ಪಿಸಬೇಕಾಗಿ ಬಂದ ಲೀಲಾವತಿಯವರನ್ನು ಕೊಂದ ಕೊಲೆಗಡುಕರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿ ಬೆಂಗಳೂರಿನ ಜನವಾದಿ ಮಹಿಳಾ ಸಂಘಟನೆಯ ಸದಸ್ಯೆಯರು ಮೇ 5ರಂದು ಪ್ರತಿಭಟನೆ ನಡೆಸಿದರು



ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆ ಖಂಡನೆ

ಚಿತ್ರದುರ್ಗ ವಾರ್ತಾಪತ್ರ - ಕೆ.ಮಹಾಂತೇಶ್

ಧರ್ಮಕಾರಣ ಕೃತಿಯ ಮುಟ್ಟುಗೋಲು, ಡಾ|| ಪಿ.ವಿ.ನಾರಾಯಣ ಅವರಿಗೆ ಒಡ್ಡಿರುವ ಜೀವ ಬೆದರಿಕೆ ಹಾಗೂ ಕ್ರಾಂತಿಕಾರಿ ಕಲಾವಿದ 'ಗದ್ದರ್' ಮೇಲಿನ ಮರಣಾಂತಿಕ ಹಲ್ಲೆಯನ್ನು ಪ್ರತಿಭಟಿಸಿ ದಾವಣಗೆರೆಯಲ್ಲಿ ಏಪ್ರಿಲ್ 20 ರಂದು ವಿಚಾರಗೋಷ್ಠಿ ಹಾಗೂ ಮೌನ ಮೆರವಣಿಗೆಯನ್ನು ನಡೆಸಿ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು.

ಸಮುದಾಯ, ಎಸ್.ಎಫ್.ಐ, ಡಿವೈಎಫ್ಐ ಹಾಗೂ ಬಂಡಾಯ ಸಾಹಿತ್ಯ ಸಂಘಟನೆ-ರೈತ ಸಂಘಟನೆ ಮತ್ತು ಪ್ರಗತಿಪರರ ಆಶ್ರಯದಲ್ಲಿ ಏಪ್ರಿಲ್ 20 ರಂದು ಭಾನುವಾರ ಬೆಳಗ್ಗೆ 10.30 ಗಂಟೆಗೆ ಆರಂಭಗೊಂಡ ವಿಚಾರಗೋಷ್ಠಿಯಲ್ಲಿ 'ಸೃಜನಶೀಲತೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ' ಕುರಿತಂತೆ -ವಿಚಾರವಾದಿ ಬರಹಗಾರರಾದ ಪ್ರೊ|| ಬಿ.ವಿ.ವೀರಭದ್ರಪ್ಪನವರು ತಮ್ಮ ವಾದ ಮಂಡಿಸಿ 'ಧರ್ಮಕಾರಣ' ಸಾಹಿತ್ಯಕವಾಗಿ ಒಳ್ಳೆಯ ಕೃತಿಯಲ್ಲದಿದ್ದರೂ ಕೂಡ, ಅದರಲ್ಲಿನ ತಪ್ಪುಗಳನ್ನು ಸರಿಪಡಿಸಲು ಅನೇಕ ಕ್ರಮಗಳಿವೆ. ಆದರೆ ಸರಕಾರ ವೀರಶೈವ ಸಮಾಜದವರ ಒತ್ತಡಕ್ಕೆ ಮಣಿದು ಕೃತಿಯನ್ನು 'ಮುಟ್ಟುಗೋಲು' ಮಾಡಿದ ಕ್ರಮ ಸರಿಯಾದುದಲ್ಲ ಅಲ್ಲದೆ ಪ್ರಜಾಪ್ರಭುತ್ವ ವಿರೋಧಿ ಬೆದರಿಕೆಗಳನ್ನು ಬರಹಗಾರರ ಮೇಲೆ ಹಾಕುವಂತಹುದು, ಜೀವ ಬೆದರಿಕೆ ಹಾಕುವಂತ ಕ್ರಮಗಳನ್ನು ಮೂಲಭೂತವಾದಿಗಳು ಹಾಗೂ ಪಟ್ಟಭದ್ರ ಹಿತಾಸಕ್ತಿಗಳು ಬಳಸಿಕೊಳ್ಳುತ್ತಿರುವುದು ತೀರ ಖಂಡನೀಯವೆಂದರು. ಅಭಿವ್ಯಕ್ತಿ ಸ್ವಾತಂತ್ರ್ಯ ವೆಂದರೆ - ಅದೊಂದು ಸಾಮಾಜಿಕ ಹೊಣೆಗಾರಿಕೆ ಕೂಡ ಎಂದು ವಿವರಿಸಿದ ಪ್ರೊ|ಬಿ.ವಿ.ವಿ. ಬರಹಗಾರರಿಗೆ ತನ್ನದೇ ಆದ ವಿವೇಚನೆ ಇದೆ. ಅವನಿಗೆ ತಿಳಿದದ್ದನ್ನು ಹೇಳುವ ಸ್ವಾತಂತ್ರ್ಯ ಇದೆ. ಭಿನ್ನಮತಕ್ಕೂ ಅವಕಾಶ ಇದ್ದೇ ಇದೆ. ಆದರೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ನಾವು ವಿವೇಚನೆಯುಳ್ಳವರಾಗಬೇಕು. ಎಲ್ಲರ ಸ್ವಾತಂತ್ರ್ಯವನ್ನು ನಾವು ಗೌರವಿಸಬೇಕು ಎಂದರು. ಫ್ರೆಂಚ್ ವಿಜ್ಞಾನಿ ವಾಲ್ಟೇರ್ ಹೇಳಿದ ಹಾಗೆ "ನಾನು ನಿನ್ನ ವಿಚಾರವನ್ನು ಸ್ವಲ್ಪವೂ ಒಪ್ಪುವುದಿಲ್ಲ ಆದರೆ ನಿನ್ನ ವಿಚಾರ ಅಭಿವ್ಯಕ್ತಿಯನ್ನು ನನ್ನ ಪ್ರಾಣ ಕೊಟ್ಟಾದರೂ ರಕ್ಷಿಸುತ್ತೇನೆ" ಎಂಬ ಮಾತನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕೆಂದರು.

ಮತ್ತೊಬ್ಬ ವಿಚಾರವಾದಿ ಡಾ|| ಪಿ.ಎ.ಲೋಕಾಪುರ ಅವರು ಮಾತನಾಡಿ ಸರಕಾರಕ್ಕೆ ಅಭಿವ್ಯಕ್ತಿ ಸ್ವಾತಂತ್ರ್ಯ ಕಲವೊಮ್ಮೆ ಮುಖ್ಯ ಆಗೋಲ್ಲ. ಬದಲಾಗಿ ಪ್ರತಿಭಟಿಸುವ ಸಮಾಜದ ಓಟು ಮುಖ್ಯ ಆಗುತ್ತದೆ. ಸ್ಪಷ್ಟ ಸೈದ್ಧಾಂತಿಕ ಹಿನ್ನೆಲೆ ಇಲ್ಲದಿದ್ದರೆ 'ಧರ್ಮಕಾರಣ'ಕ್ಕೆ ಆದ ಸ್ಥಿತಿಯೇ ಎಲ್ಲಾ ಕೃತಿಗಳಿಗೂ ಬರಬಹುದು ಎಂದರು. ಅಲ್ಲದೆ ಯಾರದೇ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಗೂಂಡಾಗಿರಿ ಮೂಲಕ ಹತ್ತಿಕ್ಕುತ್ತೇವೆ ಎನ್ನುವುದು ಸರಿಯಲ್ಲ. 21 ನೇ ಶತಮಾನದಲ್ಲೂ ನಾವು ಭಯ ಭೀತಿಯಿಂದ ಬದುಕಬೇಕಾಗಿರುವುದು ವಿಪರ್ಯಾಸ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ|| ಎಂ.ಜಿ.ಈಶ್ವರಪ್ಪನವರು ಮಾತನಾಡಿ, ಕಲವೊಂದು ಕೃತಿಗಳಲ್ಲಿ ಬರುವ ಶಬ್ದಗಳನ್ನು ಸಾಂಧರ್ಬಿಕ ಸೂಚಕವಾಗಿ ನೋಡಬೇಕೆ ಹೊರತು ಜಾತಿಸೂಚಕವಾಗಿ ಅಲ್ಲ. ಹಾಗೆ ಪ್ರತಿಯೊಂದು ಶಬ್ದಕ್ಕೂ ಜಾತಿ ಸೇರಿಸ ಹೊರಟರೆ ಅಥವಾ ಆ ದೃಷ್ಟಿಯಲ್ಲಿ ನೋಡಿದರೆ ಯಾವುದೊಂದು ಸಾಹಿತ್ಯವನ್ನು ನಾವು ಉತ್ತಮ ಸಾಹಿತ್ಯವೆಂದು ಅಭಿಪ್ರಾಯ ಪಡಲು ಸಾಧ್ಯವಾಗಲಿಕ್ಕಿಲ್ಲ ಎಂದು ವಿವರಿಸಿ ಇತ್ತೀಚೆಗೆ ಸಾಹಿತ್ಯಕವಾಗಿ ಹಾಗೂ ಶರಣ ಚಳುವಳಿಯ ಆಶಾದಾಯಕ ಕೃತಿ ಮಹಾಚೈತ್ರವನ್ನು ಕೂಡಾ ವಾಪಸ್ ಪಡೆದಿದ್ದುದರ ಬಗ್ಗೆ ತೀವ್ರ ವಿಷಾದ ವ್ಯಕ್ತಪಡಿಸಿದರು.

ನಂತರ ಚರ್ಚೆಯಲ್ಲಿ ಭಾಗವಹಿಸಿದ ರಾಣೆಬೆನ್ನೂರಿನ ಪ್ರೊ|| ಸಂಗಮದ ಮತ್ತಿತರ ಬಸವ ಅನುಯಾಯಿಗಳು 'ಬರಹಗಾರರಿಗೆ ಮಾರ್ಗಸೂಚಿಗಳು ಇರಬೇಕು. ಬರೆದಿದ್ದೆಲ್ಲವನ್ನೂ ಬರಹ ಎನ್ನಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ ಭಾಗವಹಿಸಿದ್ದ ಪ್ರಗತಿಪರರೆಲ್ಲರೂ ಅವರ ಅಭಿಪ್ರಾಯವನ್ನು ಒಕ್ಕೊರಲಿನಿಂದ ಪ್ರತಿಭಟಿಸಿ ಇದು ಸರ್ವಾಧಿಕಾರಿ ರಾಜ್ಯವಲ್ಲ - ಇದು ಪ್ರಜಾಪ್ರಭುತ್ವ ರಾಜ್ಯ, ಬರಹಗಾರರಿಗೆ - ಮಾರ್ಗಸೂಚಿ ವಿಧಿಸೋದೆ ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದು ಯಾಕಿರಬೇಕು ಎಂದು ಪ್ರಶ್ನಿಸಿದರು. ಚರ್ಚೆಯಲ್ಲಿ - ಕಾದಂಬರಿಕಾರ್ತಿ ಶ್ರೀಮತಿ ಟಿ.ಗಿರಿಜಾ, ಶ್ರೀಮತಿ ಶರೀಫಾ, ಪ್ರೊ. ಸಿ.ವಿ.ಪಾಟೀಲ್, ಪತ್ರಕರ್ತ ಬಿ.ಎನ್. ಮಲ್ಲೇಶ್, ಬಿ.ಎಂ.ಹನುಮಂತಪ್ಪ,ಕುನಾದಿಗ, ಆರುಂಡಿರಪಿ ಮುಂತಾದವರು ಪಾಲ್ಗೊಂಡರು. ವಿಚಾರ ಗೋಷ್ಠಿಯ ಅಧ್ಯಕ್ಷತೆಯನ್ನು ಕಾನೂನು ಕಾಲೇಜಿನ ನಿವೃತ್ತ ಪ್ರಾಂಶುಪಾಲರು ಹಾಗೂ ವಿಚಾರವಾದಿಗಳೂ ಆದ ಪ್ರೊ. ಎಸ್.ಹೆಚ್. ಪಟೇಲ್ ವಹಿಸಿದ್ದರು. 'ಸಮುದಾಯದ ಹಾಡು' ನಂತರ ದಾವಣಗೆರೆ ಸಮುದಾಯದ ಅಧ್ಯಕ್ಷರಾದ ಎಂ.ಆರ್.ಹಿರೇಮಠ್ ಸ್ವಾಗತ. ಕೆ.ಮಹಾಂತೇಷ್ ಪ್ರಾಸ್ತವಿಕ ಮಾತುಗಳನ್ನಾಡಿದರು. ಸಮುದಾಯ ಕಾರ್ಯದರ್ಶಿ ಡಿ.ಯಾಕೂಬ್ ವಂದಿಸಿದರು. ಬ್ರಹ್ಮದೇವ ಹದಳಗಿ ಕಾರ್ಯಕ್ರಮ ನಿರೂಪಣೆ ಮಾಡಿದರು.

ಮೌನ ಮೆರವಣಿಗೆ: ಸುಮಾರು ಎರಡೂವರೆ ಗಂಟೆಗಳ ಕಾಲ ನಡೆದ ಅರ್ಥಪೂರ್ಣ ವಿಚಾರಗೋಷ್ಠಿ ನಂತರದಲ್ಲಿ ವಿಚಾರವಾದಿಗಳು, ಕಲಾವಿದರು, ನೌಕರರು, ವಿದ್ಯಾರ್ಥಿ-ಯುವಜನ, ಮಹಿಳೆಯರು ಕಾನೂನ ಕಾಲೇಜಿನಿಂದ-ಉಪ ವಿಭಾಗಾಧಿಕಾರಿಗಳ ಕಚೇರಿಯವರೆಗೂ ಮೌನ ಮೆರವಣಿಗೆ ನಡೆಸಿ ಧರ್ಮಕಾರಣ ಕೃತಿ ಮುಟ್ಟುಗೋಲು ಹಿಂತೆಗೆದುಕೊಳ್ಳಬೇಕು, ಡಾ|| ಪಿ.ವಿ.ನಾರಾಯಣ್ ಜೀವಕ್ಕೆ ಬೆದರಿಕೆ ಹಾಕಿರುವ ಶಕ್ತಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಹಾಗೂ ಕ್ರಾಂತಿಕಾರಿ ಕಲಾವಿದ 'ಗದ್ದರ್' ಅವರಿಗೆ ಸರಕಾರ ಸೂಕ್ತ ರಕ್ಷಣೆ ನೀಡಬೇಕು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ರಕ್ಷಣೆಗೆ ಸರಕಾರ ಬದ್ಧವಾಗಬೇಕು ಎಂಬಿತ್ಯಾದಿ ಬೇಡಿಕೆಗಳುಳ್ಳ ಮನವಿ ಪತ್ರವನ್ನು ಸರಕಾರಕ್ಕೆ ಸಲ್ಲಿಸಲಾಯಿತು.

ಚಿತ್ರದುರ್ಗದಲ್ಲಿ ಗ್ರಾಮ ಪಂಚಾಯ್ತಿ ನೌಕರರ ಸಭೆ

ಚಿತ್ರದುರ್ಗ ಜಿಲ್ಲಾ ಪಂಚಾಯ್ತಿ ಕಚೇರಿ ಮುಂಭಾಗದಲ್ಲಿ ಚಿತ್ರದುರ್ಗ ತಾಲ್ಲೂಕು ಗ್ರಾಮ ಪಂಚಾಯ್ತಿ ನೌಕರರ ಸಭೆಯು ಯಶಸ್ವಿಯಾಗಿ ನಡೆಯಿತು. ಸಭೆಯಲ್ಲಿ ಸುಮಾರು 40 ಜನ ನೌಕರರು ಭಾಗವಹಿಸಿ ತಮ್ಮ ವಿವಿಧ ಸಂಘಟನೆಗಳ ಅನುಭವವನ್ನು ಹಂಚಿಕೊಂಡರು. ಜಿಲ್ಲಾ ಅಧ್ಯಕ್ಷರಾದ ಕಾಂ.ಎ.ಎಸ್.ಮೂರ್ತಿ, ಕಾಂ.ಕೆ.ಎಲ್. ಭಟ್ ಹಾಗೂ ಕಾರ್ಯದರ್ಶಿ ಮೃತ್ಯುಂಜಯಪ್ಪ ಮುಂತಾದವರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಮತ ಪ್ರದರ್ಶನ ನಡೆದು ಮನವಿ ಪತ್ರ ಸಲ್ಲಿಸಲಾಯ್ತು. ಅಲ್ಲದೆ, ಗ್ರಾಮ ಪಂಚಾಯ್ತಿ ನೌಕರರ ಹೋರಾಟವನ್ನು ಯಶಸ್ವಿಗೊಳಿಸಲು ಕರಪತ್ರಗಳನ್ನು ಕಪ್ಪು ಪಟ್ಟಿ ಬ್ಯಾಡ್ಜ್ ಗಳನ್ನು ವಿತರಿಸಲಾಯಿತು. ಅಲ್ಲದೆ ಸಂಘಟನೆಯನ್ನು ಬಲಿಷ್ಠಗೊಳಿಸಲು ಹಾಗೂ ನೌಕರರ ಪರವಾಗಿ ಕೆಲಸ ಮಾಡುತ್ತೇವೆಂದು ನೌಕರರಿಂದ ಕಾನೂನು ಬಾಹಿರವಾಗಿ ಹಣ ಸಂಗ್ರಹಿಸುತ್ತಿರುವ ಚನ್ನಬಸಪ್ಪ ಎಂಬಾತನ ಸಂಘದ ಬಗ್ಗೆ ಎಲ್ಲಾ ನೌಕರರು ಎಚ್ಚರ ವಿರುವಂತೆ ಮಾಡಿ ನೌಕರರನ್ನು ಜಾಗ್ರತ ಮಾಡಿ, ಹೋರಾಟಕ್ಕೆ ಅಣಿನೆರಸಲು ಹೊಸದುರ್ಗದಲ್ಲಿ ಮೇ 8ರಂದು ಹಾಗೂ ಚಿತ್ರದುರ್ಗದಲ್ಲಿ ಪುನಃ ಮೇ 10ರಂದು ಗ್ರಾಮ ಪಂಚಾಯ್ತಿ ನೌಕರರ ಬೃಹತ್ ಸಭೆಗಳನ್ನು ನಡೆಸಲು ತೀರ್ಮಾನಿಸಲಾಯಿತು.

ನೂತನ ಜಿಲ್ಲಾ ಸಮಿತಿ: ಕಾಂ.ಎ.ಎಸ್. ಮೂರ್ತಿ ಅಧ್ಯಕ್ಷರು ಮತ್ತು ಮೃತ್ಯುಂಜಯಪ್ಪ ಕಾರ್ಯದರ್ಶಿ ಹಾಗೂ ಕಾಂ.ಕೆ.ಎಲ್.ಭಟ್ ಖಜಾಂಚಿಯಾಗಿ ಒಳಗೊಂಡ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು.

ದಾವಣಗೆರೆಯಲ್ಲಿ ಸಮುದಾಯ ಪುನಃಶ್ಚೇತನ ಸಭೆ

ಏಪ್ರಿಲ್ 12ರಂದು ಸಫ್ದರ್‌ಹಷ್ಮಿಯವರ ಜನ್ಮ ದಿನದಂದು ದಾವಣಗೆರೆ-ಹರಿಹರ ಸಮುದಾಯದ ಪುನಃಶ್ಚೇತನ ಸಭೆಯು ದಾವಣಗೆರೆಯ ನಗರಸಭಾ ಆವರಣದಲ್ಲಿರುವ ಪುಟ್ಟಣ್ಣ ಕಣಗಾಲ್ ವಾದ್ಯ ಮಂಟಪದಲ್ಲಿ ಯಶಸ್ವಿಯಾಗಿ ನಡೆಯಿತು.

ಸುಮಾರು 6-7 ವರ್ಷಗಳಿಂದಲೂ 'ಸಮುದಾಯ'ದ ಚಟುವಟಿಕೆಗಳು ಈ ನಗರಗಳಲ್ಲಿ ಸಂಪೂರ್ಣ ಸ್ತಬ್ಧವಾಗಿರುವುದಕ್ಕೆ ಹಲವಾರು ಭಾಗವಹಿಸಿದ್ದ ಗೆಳೆಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಹಳೆಯ ಸಮುದಾಯದ ದಿನಗಳನ್ನು ಮತ್ತ ಜನರಿಗೆ ನೆನಪಿಸೋಣ, ಧಾರ್ಮಿಕ ಮೂಲಭೂತವಾದಿಗಳು, ಸಾಂಸ್ಕೃತಿಕ ರಂಗದ ಮೇಲೆ ಎಸೆಯುತ್ತಿರುವ ಹೊಸ ಸವಾಲುಗಳನ್ನು ಸಮುದಾಯದಂತಹ ಪ್ರಗತಿಪರ ಸಂಘಟನೆಗಳು ಮಾತ್ರ ಸಮರ್ಥವಾಗಿ ಎದುರಿಸಬಲ್ಲವು, ಆದ್ದರಿಂದ ಸಮುದಾಯ ಸಂಘಟನೆಯನ್ನು ನಾವೆಲ್ಲಾ ಪುನರ್ ಸಂಘಟಿಸೋಣ, ಜನರ ಮಧ್ಯ ಹೋಗೋಣ ಎಂಬ ಆಶಯವನ್ನು ಭಾಗವಹಿಸಿದ ಎಲ್ಲಾ ಗೆಳೆಯರು ವ್ಯಕ್ತಪಡಿಸಿದರು.

ಸಭೆಯಲ್ಲಿ ಪ್ರೊ. ಸಿ.ವಿ.ಪಾಟೀಲ್, ಜಯಣ್ಣ ಜಾಧವ್, ಬ್ರಹ್ಮದೇವ ಹದಳಗ, ಶಿವಾನಂದ, ಕೆ.ಎಲ್.ಭಟ್, ಶರ್ಮಾ, ಡಿ.ಯಾದವ್, ಶೇಕ್ ಹುಸೇನ್ ಮುಂತಾದವರು ಮಾತನಾಡಿದರು.

ಸಭೆಯು ಡಾ|ಪಿ.ವಿ.ನಾರಾಯಣರಿಗೆ ಜೀವ ಬೆದರಿಕೆ, ಗದ್ದರ್ ಮೇಲಿನ ಮರಣಾಂತಿಕ ಹಲ್ಲೆ ಹಾಗೂ ಧರ್ಮಕಾರಣ ಕೃತಿ ಮುಟ್ಟುಗೋಲನ್ನು ಖಂಡಿಸಿತು ಮಾತ್ರವಲ್ಲ, ಏಪ್ರಿಲ್ 20ರಂದು ವಿಚಾರಗೋಷ್ಠಿ ಹಾಗೂ ಮೌನ ಮೆರವಣಿಗೆ ನಡೆಸಲು ತೀರ್ಮಾನಿಸಿತು. ಸಮುದಾಯದ ಅಧ್ಯಕ್ಷ ಎನ್.ಆರ್. ಹಿರೇಮಠ ಸ್ವಾಗತ ಮಾಡಿದರು, ಕೆ.ಮಹಾಂತೇಶ್ ವಂದಿಸಿದರು.

ಯಶಸ್ವಿ ಮೇ ದಿನಾಚರಣೆ

ಮೇ ದಿನಾಚರಣೆ ಅಂಗವಾಗಿ ಬ್ಯಾಂಕ್ ನೌಕರರ ಸಂಘಟನೆ, ವಿಮಾ ನೌಕರರ ಸಂಘಟನೆ, ಔಷಧಿ ಮಾರಾಟ ಪ್ರತಿನಿಧಿಗಳ ಸಂಘ ಹಾಗೂ ಎಸ್‌ಎಫ್‌ಐ, ಡಿವೈಎಫ್‌ಐ ಸಂಘಟನೆಗಳ ಕಾರ್ಯಕರ್ತರು ದಾವಣಗೆರೆಯಲ್ಲಿ ಯಶಸ್ವಿಯಾಗಿ ಮೇ ದಿನಾಚರಣೆಯನ್ನು ಆಚರಿಸಿದರು.

ಅಂದು ಬೆಳಗ್ಗೆ 10.30 ಗಂಟೆಗೆ, ಮೈಸೂರು ಬ್ಯಾಂಕ್‌ನಿಂದ ಆರಂಭವಾದ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪುನಃ ಮೈಸೂರು ಬ್ಯಾಂಕ್‌ಗೆ ಬಂದು ತಲುಪಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಡಿವೈಎಫ್‌ಐ ಜಿಲ್ಲಾ ಸಂಚಾಲಕ ಕೆ.ಮಹಾಂತೇಶ್, ಎಸ್‌ಎಫ್‌ಐ ಉಪಾಧ್ಯಕ್ಷ ಟಿ.ಮಂಜುನಾಥ, ಎಐಟಿಯುಸಿಯ ರಂಗಪ್ಪ, ಎನ್.ಸಿ.ಬಿ.ಇ.ಯು. ಪ್ರಸಾದರಾವ್, ಸಾಮಾನ್ಯ ವಿಮಾ ನೌಕರರ ಸಂಘದ ವೆಂಕಟೇಶ್ ಮೂರ್ತಿ, ವಿಮಾ ನೌಕರರ ಸಂಘಟನೆಯ ವಿಭಾಗೀಯ ಕಾರ್ಯದರ್ಶಿ ಡಿ.ಯಾಕೂಬ್, ಬ್ಯಾಂಕ್ ನೌಕರರ ಸಂಘಟನೆಯ ಎಂ.ಆರ್.ಹಿರೇಮಠ ಮುಂತಾದವರು ಮಾತನಾಡಿ, ಕಾರ್ಮಿಕ ವರ್ಗದ ಐಕ್ಯತೆಗಾಗಿ ಎಲ್ಲಾ ನೌಕರರು ಶ್ರಮಿಸಬೇಕು. ಮಾತ್ರವಲ್ಲ ಕೋಟ್ಯಾಂತರ ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರ ಸಂಘಟನೆಯತ್ತ ತೀವ್ರ ಗಮನ ಹರಿಸಲು ಕರೆ ನೀಡಿದರು.

ಮೇ ದಿನದ ಮೆರವಣಿಗೆಯ ನೇತೃತ್ವವನ್ನು ಎಐಬಿಇಎ ಶೇಕ್ ಹುಸೇನ್, ಹನುಮಂತರಾವ್, ಬಿಇಎಫ್‌ಐನ ವೆಂಕಟೇಶಮೂರ್ತಿ, ಎಫ್‌ಎಂಆರ್‌ಎಐನ ಸನತ್ ಕುಮಾರ್, ತಿಪ್ಪೇಶ್ ಶಾಸ್ತ್ರಿ, ಸತೀಶ್, ಶಿವಾನಂದ, ಎಸ್‌ಎಫ್‌ಐ ಶ್ರೀನಿವಾಸ್, ಬಿ.ಟಿ.ಶ್, ಡಿವೈಎಫ್‌ಐನ ಶಿವಶಂಕರ್, ಲೋಕೇಶ್ವರಪ್ಪ, ತಿಂಮಪ್ಪ, ಮಹಬೂಬ್ ಬಾಷಾ ಎಐಟಿಯುಸಿಯ ಕೆ.ಎಲ್.ಭಟ್, ನಾಗರಾಜ್ ವಹಿಸಿದ್ದರು.

ಹರಿಹರ: ಮೇ 1ರ ಬೆಳಗ್ಗೆ ಕಿರ್ಲೋಸ್ಕರ್ ಕೆಲಸಗಾರರ ಸಂಘದ ಕಚೇರಿಯಲ್ಲಿ ಮೇ ದಿನಾಚರಣೆ ಆಚರಿಸಲಾಯ್ತು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ.ಎಂ.ಎಸ್.ಮೂರ್ತಿ ಕೆಂಬಾವುಟ ಹಾರಿಸಿ ಮಾತನಾಡಿ ಕಾರ್ಮಿಕ ವರ್ಗದ ಐಕ್ಯ ಹೋರಾಟಕ್ಕೆ ಕರೆ ನೀಡಿದರು. ಸಭೆಯಲ್ಲಿ ವಿವಿಧ ಕಾರ್ಖಾನೆಗಳ ಮುಖಂಡರು ಮಾತನಾಡಿ ವಿಶ್ವದ ಕಾರ್ಮಿಕ ವರ್ಗದ ಒಳಿತಿಗಾಗಿ ತ್ಯಾಗ ಮಾಡಿದ ಹುತಾತ್ಮರನ್ನು ನೆನೆದು ಅವರ ತ್ಯಾಗ ಬಲಿದಾನಗಳನ್ನು ಎತ್ತಿ ಹಿಡಿಯಲು ಕರೆ ನೀಡಿದರು.

ಹರಿಹರದ ಹಾಲಿಫ್ಲೆಕ್ಸ್ ಕಾರ್ಖಾನೆಯ ಸಂಘದ ಕೆಲಸಗಾರರ ಕಚೇರಿ ಆವರಣದಲ್ಲಿ ಧ್ವಜಾರೋಹಣ ಮಾಡುವುದರ ಮೂಲಕ ಮೇ ದಿನಾಚರಣೆ ಆಚರಿಸಲಾಯಿತು. ಸಭೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನಸ್ವಾಮಿ ಹಾಗೂ ಬೇಗೆರಿ ಸೇರಿದಂತೆ ಕಾರ್ಮಿಕ ಮುಖಂಡರು ಮಾತನಾಡಿ ಇಡೀ ವಿಶ್ವದ್ಯಂತ ಆಚರಿಸುತ್ತಿರುವ ಮೇ ದಿನದ ಮಹತ್ವವನ್ನು ವಿವರಿಸಿದರು.

ಧೋರಣೆಯಲ್ಲೂ ಬದಲಾವಣೆ ಕಂಡೀತೇ?

ಪುಟ 1ರಿಂದ

ವಿಸ್ತರಿಸಿ, ಬಿಜೆಪಿ, ಕಾಂಗ್ರೆಸ್‌ಗಳನ್ನು ಹಿಡಿತದಲ್ಲಿಡುವಂತೆ ಅವುಗಳ ಪ್ರಭಾವ ಕುಂಠಿತಗೊಳ್ಳುವಂತೆ ಮಾಡಬೇಕಾದ ಈ ಸಂದಿಕಾಲದಲ್ಲಿ ಜನತಾದಳದ ಅಧ್ಯಕ್ಷರ ಚುನಾವಣೆಗೆ ಬಹಳ ಮಹತ್ವವಿದೆಯೆಂಬುದನ್ನು ತಿಳಿಯಬೇಕು. ಸೈದ್ಧಾಂತಿಕವಾಗಿ ಬಿಜೆಪಿ, ಕಾಂಗ್ರೆಸ್‌ಗಳನ್ನು ವಿರೋಧಿಸುವ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಬಾಂಧವ್ಯ ಬೆಳೆಸಿಕೊಂಡು ಜನಪರ ನೀತಿಯನ್ನು ಸರಕಾರ ಅನುಷ್ಠಾನಗೊಳಿಸುವಂತೆ ಚಳುವಳಿ ನಡೆಸಬೇಕೆಂಬ ವಿಚಾರಧಾರೆಯ ಅಧ್ಯಕ್ಷರು ಆರಿಸಿಬರುವುದು ಅಗತ್ಯ. ಇಲ್ಲವಾದರೆ ಜನರ ಪರವಾಗಿ ಹೋರಾಡುವ ಜವಾಬ್ದಾರಿ ಬರೀ ಎಡಪಕ್ಷಗಳ ಮೇಲೆ ಮಾತ್ರ ಬೀಳುತ್ತದೆ. ಎಡ ಪಕ್ಷಗಳ ಜೊತೆಯಲ್ಲಿ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನೂ ಹೊಂದಿಸಿಕೊಂಡು ಹೋಗಬೇಕೆಂಬ ಸಿಪಿಐ(ಎಂ) ಪಕ್ಷದ ಧೋರಣೆಗೆ ಬೇರೆ ವಿಚಾರಧಾರೆಯ ಅಧ್ಯಕ್ಷರು ಆರಿಸಿಬಂದರೆ ಸಹಾಯವಾಗುವುದಿಲ್ಲ. ಆ ದೃಷ್ಟಿಯಿಂದ ಕರ್ನಾಟಕ ಜನತಾದಳದ ಅಧ್ಯಕ್ಷರಾಗಿ ಬಿ.ಎಲ್. ಶಂಕರ್ ಆರಿಸಿ ಬಂದಿರುವುದನ್ನು ವಿಶ್ಲೇಷಿಸುವುದು ಅಗತ್ಯವಾಗಿದೆ.

ಕರ್ನಾಟಕದಲ್ಲಿ ಜನತಾದಳವಾಗಲೀ, ಜನತಾದಳ ಸರಕಾರವಾಗಲೀ ಹೋದ ಚುನಾವಣೆಯ ನಂತರದ ದಿನಗಳಲ್ಲಿ ಜನರ ಮಧ್ಯೆ ಪ್ರೇಮ ವಿಶ್ವಾಸಗಳನ್ನುಳಿಸಿಕೊಳ್ಳುವಲ್ಲಿ ಸಫಲವಾಗಿಲ್ಲ. ರಾಮಕೃಷ್ಣ ಹೆಗಡೆಯವರನ್ನು ದಳದಿಂದ ಹೊರಹಾಕಿದ ನಂತರ ದಳದಲ್ಲಿ ಗೊಂದಲ ಇನ್ನೂ ಮುಂದುವರಿದಿದೆ. ಜಾತಿ-ಮತಗಳು ಸೇರಿದಂತೆ ಅದು ಗುಂಪುಗಾರಿಕೆಯ ತಾಣವಾಗಿದೆ. ಜನತೆ ಅವರಿಗೆ ಅಧಿಕಾರ ಕೊಟ್ಟರೂ, ದಕ್ಷ ಆಡಳಿತ ನೀಡುವಲ್ಲಿ, ಜನರ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ಒದಗಿಸುವುದರಲ್ಲಿ ಅದು ವಿಫಲವಾಗಿದೆ.

ಲಾಕಪ್ ಸಾವು, ವರದಕ್ಷಿಣೆ ಸಾವು, ಕಾರ್ಮಿಕರ ಮೇಲಿನ ದಬ್ಬಾಳಿಕೆ, ಲಾಠಿ ಚಾರ್ಜ್, ಗೋಳೀಬಾರ್, ಮಹಿಳೆಯರ ಮೇಲಿನ ಅತ್ಯಾಚಾರ, ರೈತ-ಕೃಷಿ ಕಾರ್ಮಿಕರ ಮೇಲಿನ ದಬ್ಬಾಳಿಕೆಗಳೆಲ್ಲ ಮುಂದುವರಿದಿದೆ. ಹರಿಜನ-ಗಿರಿಜನರ ಮೇಲೆ ಅತ್ಯಾಚಾರ ನಿಂತಿಲ್ಲ. ಪ್ರತಿಯೊಂದು ರಂಗದಲ್ಲಿಯೂ ಅಸಮಾಧಾನ ಹೊಗೆಯಾಡುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ತಮ್ಮ ಪಕ್ಷಕ್ಕೆ ಕಾಯಕಲ್ಪ ನೀಡುವ, ಹಾಗೆಯೇ ತಮ್ಮ ಪಕ್ಷದ ಸರಕಾರಿ ಆಡಳಿತೆಯಲ್ಲಿ ದಕ್ಷತೆ ತಂದು, ಅದು ಜನಪ್ರಿಯವಾಗಿ ಕೆಲಸ ಮಾಡುವಂತ ಜವಾಬ್ದಾರಿ ಹೊರುವ ಅಧ್ಯಕ್ಷರು ಅಗತ್ಯ. ಅದರ ಜೊತೆಯಲ್ಲಿಯೇ ಕಳೆದ ಒಂದು ವರ್ಷದ ದೇಶದ ರಾಜಕಾರಣದ ಬೆಳವಣಿಗೆಯ ನಿಜವಾದ ಅರ್ಥದಲ್ಲಿ ಕರ್ನಾಟಕದಲ್ಲಿಯೂ ತಮ್ಮ ಮುಂದಾಳತ್ವದಲ್ಲಿ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗೂಡುವಿಕೆ, ಐಕ್ಯ ಹೋರಾಟಕ್ಕೆ ನಾಂದಿ ಹಾಕಿ, ನಮ್ಮ ರಾಜ್ಯವನ್ನು ಎಡ ಜಾತ್ಯಾತೀತ ಪ್ರಜಾಪ್ರಭುತ್ವ ಪಕ್ಷಗಳ ಭದ್ರಕೋಟೆಯನ್ನಾಗಿ ಮಾರ್ಪಡಿಸುವ ಪ್ರಯತ್ನ ಅಗತ್ಯ. ಈ ಪ್ರಯತ್ನದಲ್ಲಿ ಬಿ.ಎಲ್.ಶಂಕರ್ ಅವರು ಎಷ್ಟು ಯಶಸ್ವಿಯಾಗುತ್ತಾರೆಂಬುದನ್ನು ಕಾದು ನೋಡಬೇಕಾಗಿದೆ. ಜನತಾದಳದ ಅಧ್ಯಕ್ಷರಾದ ನಂತರ ಅವರಾಡಿದ ಮಾತುಗಳಲ್ಲಿ ದೇಶದ ರಾಜಕೀಯ ವಿಶ್ಲೇಷಣೆಯಾಗಲೀ, ಜನತಾದಳ, ಎಡ ಪಕ್ಷಗಳ, ಪ್ರಾದೇಶಿಕ ಪಕ್ಷಗಳ ಸಾಧನೆಯ ಕುರಿತಾಗಲೀ, ಕೇಂದ್ರದಲ್ಲಿ ಸಂಯುಕ್ತ ರಂಗ ಸರಕಾರ ಸ್ಥಾಪನೆಯ ಹಿನ್ನಲೆಯಲ್ಲಿ ತಾನು ಅಧ್ಯಕ್ಷನಾಗಿ ಮಾಡಬೇಕಾದ ರಾಜಕೀಯ ಜವಾಬ್ದಾರಿ ಕುರಿತಾಗಲೀ ಚಕಾರವೆತ್ತಲಿಲ್ಲ. ಆದ್ದರಿಂದ ಕರ್ನಾಟಕ ಜನತಾದಳ ಎಡ ಪ್ರಜಾಪ್ರಭುತ್ವ ಪಕ್ಷಗಳ ನೆಲೆಯಾಗಿ ಉಳಿಯುವಂತೆ ಮಾಡು ವುದರಲ್ಲಿ ಹೊಸ ಅಧ್ಯಕ್ಷರ ಸಾಧನೆಯನ್ನು ನಾವು ಆತುರದಿಂದ ನಿರೀಕ್ಷಿಸುತ್ತಿದ್ದೇವೆ.

ಕುರುಡು ಕಮ್ಯುನಿಸ್ಟ್ ವಿರೋಧದ ಮತ್ತೊಂದು ಪ್ರದರ್ಶನ

ಮಾಜಿ ಸಮಾಜವಾದಿ ಹಾಗೂ ಈಗ ತಾನು ಹಿಂದೊಮ್ಮೆ ವಿರೋಧಿಸಿದ್ದ ಕೋಮುವಾದಿಗಳೊಂದಿಗೆ ಚುನಾವಣಾ ದೃಷ್ಟಿಯಿಂದ ಕೈ ಜೋಡಿಸಿದ ಜಾರ್ಜ್ ಫರ್ನಾಂಡಿಸ್‌ರು ಈಗ ತಮ್ಮ ನಾಡು ಬಿಟ್ಟೋಡಿ ಬಂದ ಟಿಬೇಟಿಯನ್ನರ ನೆರವಿಗೆ ಧಾವಿಸಿದ್ದಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಭಾರತ-ಟಿಬೇಟ್ ಸೌಹಾರ್ದ ಸಮಿತಿಯ ದಕ್ಷಿಣ ವಲಯದ ಸಮಾವೇಶವೊಂದನ್ನು ಅವರು ಏರ್ಪಡಿಸಿದ್ದರು. ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪನವರು ಇದರ ಉದ್ಘಾಟನೆ ಮಾಡಿದ್ದಾರೆ. ದೇಶದ ಅತ್ಯುನ್ನತ ನ್ಯಾಯಾಲಯಕ್ಕೆ ನೀಡಿದ ವಚನವನ್ನು ಮುರಿದು, ಪ್ರಜಾಪ್ರಭುತ್ವದ ವಿಧಿ ವಿಧಾನಗಳನ್ನು ಗಾಳಿಗೆ ತೂರಿ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿ ದೇಶದಲ್ಲಿ ಸಾವಿರಾರು ಮುಗ್ಧರ ರಕ್ತ ಹರಿಸಲು ಕಾರಣವಾದ ಕೋಮುವಾದಿಗಳೊಡನೆ 'ಅಖಂಡ ಭಾರತವಾದಿ'ಗಳೊಡನೆ ಚುನಾವಣಾ ಲಾಭಕ್ಕಾಗಿ ಕೈ ಮಿಲಾಯಿಸಲೂ ಹೇಸದ ಫರ್ನಾಂಡಿಸ್‌ರವರು ಈಗ ಚೀಣಾದ ಆಂತರಿಕ ವ್ಯವಹಾರಗಳಲ್ಲಿ ಮೂಗು ತೂರಿಸಲು, ಜನಗಳನ್ನು ತಪ್ಪು ದಾರಿಗೆಳೆಯಲು ಮುಂದಾಗಿದ್ದಾರೆ. ಫರ್ನಾಂಡೀಸರು ಹಾಗೂ ಸಮಾವೇಶವನ್ನು ಉದ್ಘಾಟಿಸಿದ ನಿಜಲಿಂಗಪ್ಪನವರು ಇದಕ್ಕೆ ಮುಂದಾದದ್ದು ಟಿಬೆಟ್ ಜನಸಾಮಾನ್ಯರ ಬಗ್ಗೆ ಸಹಾನುಭೂತಿಯಿಂದ, ಸ್ವಾತಂತ್ರ್ಯ ಪ್ರೇಮ ಅಥವಾ ಪ್ರಜಾಪ್ರಭುತ್ವ ಪ್ರೇಮದಿಂದ ಅಲ್ಲ, ಕೇವಲ ಕುರುಡು ಕಮ್ಯುನಿಸ್ಟ್ ದ್ವೇಷದಿಂದ ಎಂಬುದು ಈ ಸಮಾವೇಶದಲ್ಲಿ ಮಾಡಿದ ಭಾಷಣಗಳಿಂದಲೇ ಯಾರಿಗಾದರೂ ಸ್ಪಷ್ಟವಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಭಾರತ ಮತ್ತು ಚೀಣಾಗಳ ನಡುವೆ ಮಾತ್ರವಲ್ಲ ಚೀಣಾ-ರಶ್ಯಾ ಹಾಗೂ ಭಾರತ-ರಶ್ಯಾದ ನಡುವೆ ಹೆಚ್ಚುತ್ತಿರುವ, ಉತ್ತಮಗೊಳ್ಳುತ್ತಿರುವ ಬಾಂಧವ್ಯದಿಂದ ಸಾಮ್ರಾಜ್ಯಶಾಹಿಗಳು ಕಂಗಾಲಾಗಿರುವ ಹಿನ್ನೆಲೆಯಲ್ಲಿ ಫರ್ನಾಂಡೀಸ್‌ರವರು ಉತ್ತಮಗೊಳ್ಳುತ್ತಿರುವ ಭಾರತ-ಚೀಣಾ ಮೈತ್ರಿಯನ್ನು ಮುರಿಯಬೇಕೆಂಬ ಸಾಮ್ರಾಜ್ಯಶಾಹಿಗಳ ಅಭಿಲಾಷೆಗೆ ಇಂತಹ ವರ್ತನೆಗಳ ಮೂಲಕ ನೆರವಾಗುತ್ತಾರೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಖೇದ ವ್ಯಕ್ತಪಡಿಸಿದೆ.

ಉತ್ತರ ಕನ್ನಡದ ದುಡಿಯುವವರ ಹೋರಾಟಕ್ಕೆ ಹೊಸ ಅಧ್ಯಾಯದ ಸೇರ್ಪಡೆ

ಅನಂತವಾಡಿ ಹಂಚು ಕಾರ್ಮಿಕರ ಮೇಲೆ ಪೋಲೀಸ್ ದೌರ್ಜನ್ಯ

ಐಕ್ಯರಂಗ ವಿಶೇಷ ವರದಿ: ವಿಶ್ವ ಕುಂದಾಪುರ, ಹೊನ್ನಾವರ

ಪಜ್ವಾಲ ದುರಂತದ ಕಪಿ ಇನ್ನೂ ಹಸಿಯಾಗಿಯೇ ಇದೆ.... ಅಷ್ಟರೊಳಗೆ ಮಾಲೀಕ-ಪೋಲೀಸ್ ಕೂಟ ಇನ್ನೊಮ್ಮೆ ದುಡಿಯುವ ಜನರ ಮೇಲೆ ಎರಗಿದೆ. ಈ ಬಾರಿ ಅದು ಉತ್ತರ ಕನ್ನಡ ಜಿಲ್ಲೆಯಲ್ಲಿ......

ಉತ್ತರ ಕನ್ನಡ ಜಿಲ್ಲೆಯ ಹೆದ್ದಾರಿ 17 ರಲ್ಲಿರುವ ಅನಂತವಾಡಿ ಒಂದು ಪುಟ್ಟ ಊರು. ಈ ಸಣ್ಣ ಊರು ಈಗ ದೊಡ್ಡ ಸುದ್ದಿಯಲ್ಲಿದೆ. ಇಲ್ಲಿನ ಹಂಚು ಕಾರ್ಖಾನೆಯೊಂದರ ಕಾರ್ಮಿಕರು ಹೋರಾಟದ ಕಣಕ್ಕಿಳಿದಿರುವುದು, ಚಳುವಳಿಯನ್ನು ಬಗ್ಗುಬಡಿಯಲು ಮಾಲೀಕ-ಪೋಲೀಸ್ ಹಾಗೂ ಸ್ಥಾಪಿತ ಹಿತಾಸಕ್ತಿ ರಾಜಕಾರಣಿಗಳು ಮುಂದಾಗಿದ್ದು ಸುದ್ದಿಗೆ ಗ್ರಾಸವಾಗಿದೆ.

ಭಟ್ಕಳ-ಹೊನ್ನಾವರ ಗಡಿಯಲ್ಲಿರುವ ಪೃಥ್ವಿ ಹಂಚಿನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕೆಲವು ಕಾರ್ಮಿಕರನ್ನು ತೆಗೆದು ಹಾಕಿದ್ದನ್ನು ಪ್ರತಿಭಟಿಸಿ ಚಳುವಳಿ ನಡೆಸುತ್ತಿದ್ದ ಸಾವಿರಾರು ಕಾರ್ಮಿಕರು ಹಾಗೂ ಅವರ ಕುಟುಂಬ ವರ್ಗದ ಜನರ ಮೇಲೆ ಮೇ 5 ರಂದು ಪೋಲೀಸರು ಲಾಠಿ ಪ್ರಹಾರ ಮಾಡಿದರು, ಅಶ್ರುವಾಯು ಸಿಡಿಸಿದರು, ಗಾಳಿಯಲ್ಲಿ ಗುಂಡನ್ನು ಹಾರಿಸಿದರು. ಹಲವು ನಾಯಕರನ್ನು ಬಂಧಿಸಲಾಯಿತು.

ಪೋಲೀಸರ ಈ ಕ್ರೂರ ಕೃತ್ಯದಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಲಿಲ್ಲ ಎನ್ನುವುದು ಮಾತ್ರ ಒಂದು ಸಮಾಧಾನದ ಸಂಗತಿ. ಆದರೆ ಲಾಠಿ ಪ್ರಹಾರದಲ್ಲಿ ಕಾರ್ಮಿಕ ಮುಖಂಡರು ಗಾಯಗೊಂಡಿದ್ದಾರೆ.

ಆರ್.ಎಸ್.ಶೆಟ್ಟಿ ಎಂಬುವರು ಮಾಲೀಕರಾಗಿರುವ ಪೃಥ್ವಿ ಹಂಚು ಕಾರ್ಖಾನೆಯಲ್ಲಿ ಕಳೆದ ಒಂದು ತಿಂಗಳಿಂದ ಮುಷ್ಕರ ನಡೆಯುತ್ತಿದೆ. ತೆಗೆದುಹಾಕಲಾದ ಕಾರ್ಮಿಕರನ್ನು ಕೆಲಸಕ್ಕೆ ವಾಪಸು ತೆಗೆದುಕೊಳ್ಳಬೇಕು ಎಂಬುದು ಹೋರಾಟಗಾರರ ಮುಖ್ಯ ಬೇಡಿಕೆ. ಸಿಐಟಿಯು ನೇತೃತ್ವದಲ್ಲಿ ಚಳುವಳಿ ನಡೆದಿದೆ.

ಕಾರ್ಖಾನೆಯ ಎಲ್ಲಾ 185 ಕಾರ್ಮಿಕರು ವಜಾ ಆದ 28 ಕಾರ್ಮಿಕರ ಪರವಾಗಿ ಹೋರಾಟದಲ್ಲಿ ತೊಡಗಿದ್ದು, ಅದೂ ಒಂದು ತಿಂಗಳಷ್ಟು ದೀರ್ಘಕಾಲದ ಮುಷ್ಕರನಿರತರಾಗಿದ್ದು ವಿಶೇಷ ಅಂಶವಾಗಿತ್ತು. ಒಂದು ತಿಂಗಳಿಂದ ಮುಷ್ಕರ ನಡೆಸುತ್ತಿದ್ದರೂ ಜಿಲ್ಲೆಯ ಕಾರ್ಮಿಕ ಇಲಾಖೆ ಕಣ್ಣು - ಕಿವಿಗಳನ್ನು ಮುಚ್ಚಿಕೊಂಡಿತ್ತು.

ಸಿಐಟಿಯು ನೇತೃತ್ವದ ಸಂಘಕ್ಕೆ ಮಾನ್ಯತೆ ನೀಡಬೇಕೆಂದು ಕೂಡಾ ಕಾರ್ಮಿಕರು ಆಡಳಿತ ವರ್ಗವನ್ನು ಒತ್ತಾಯಿಸುತ್ತಲೇ ಇದ್ದರು. ವಜಾ ಮಾಡಿದ ಕಾರ್ಮಿಕರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದಾಗಲಂತೂ ಕಾರ್ಖಾನೆಯನ್ನೇ ಮುಚ್ಚುವ ಧೂರ್ತತನಕ್ಕೆ ಮಾಲೀಕ ಇಳಿದಿದ್ದರು. ಆದರೆ ದುಡಿಮೆಗಾರರು ಇದಕ್ಕೆ ಜಗ್ಗಿರಲಿಲ್ಲ.

ಈ ನಡುವೆ, ಬಂಡವಾಳಶಾಹಿ ವರ್ಗಗುಣಕ್ಕೆ ಅನುಗುಣವಾಗಿ ಎನ್ನುವಂತೆ ಬೇರೆಯವ[illegible]ತಂದು ಕಾರ್ಖಾನೆಯಲ್ಲಿ ಕೆಲಸವ[illegible]ರಂಭಿಸಲು ಮಾಲೀಕರು ಯೋಜನೆಯನ್ನು ರೂಪಿಸಿದ್ದರು. ಈ ತಂತ್ರಕ್ಕೆ ಭಟ್ಕಳ ಶಾಸಕ ಶಿವಾನಂದ ಕಳವೆ ಮತ್ತು ಉ.ಕ.ಜಿಲ್ಲಾ ಪಂಚಾಯತಿಯ ಮಾಜಿ ಉಪಾಧ್ಯಕ್ಷೆ ವನಿತಾ ನಾಯ್ಕ ಅವರ ಸಹಾಯವನ್ನು ಇದಕ್ಕೆ ಪಡೆಯಲಾಗಿತ್ತು.

ಈ ಯೋಜನೆಯ ಮೇರೆಗೆ ಮೇ 5 ರಂದು ಸಮೀಪದ ಮಂಕಿ ಗ್ರಾಮದ ಕೆಲವರನ್ನು ಕರೆ ತಂದು ಕಾರ್ಖಾನೆಯನ್ನು ಪುನರಾರಂಭಿಸಲು ಮುಂದಾದಾಗ ಮುಷ್ಕರ ನಿರತ ಕಾರ್ಮಿಕರು ಪ್ರತಿಭಟಿಸಿದರು.

ಅಪೂರ್ವ ಸೌಹಾರ್ದತೆ

ಅನಂತವಾಡಿ ಕಾರ್ಖಾನೆಯ ಕಾರ್ಮಿಕರ ಹೋರಾಟಕ್ಕೆ ಇಷ್ಟರವರೆಗೆ ನೈತಿಕ ಬೆಂಬಲ ಸೂಚಿಸಿದ್ದ ಜಿಲ್ಲೆಯ ದುಡಿಮೆಗಾರ ವರ್ಗ ಐದರಂದು ಖುದ್ದು ಹಾಜರಿದ್ದು ಬೆಂಬಲವನ್ನು ವ್ಯಕ್ತಪಡಿಸಲು ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದರು. ಮಾವಿನ ಕುರ್ವೆ, ಕಾಸರಗೋಡು, ಚಿತ್ರಾಪುರ, ಮುರ್ಡೇಶ್ವರ ಮತ್ತು ವೆಂಕಟಾಪುರಗಳ ಎಂಟು ಕಾರ್ಖಾನೆಗಳ ಸಾವಿರಾರು ಕಾರ್ಮಿಕರು ಅನ್ಯಾಯಕ್ಕೊಳಗಾದ ಪೃಥ್ವಿ ಕಾರ್ಖಾನೆಯ ಕಾರ್ಮಿಕರ ಬಂಧುಗಳ ಹೋರಾಟಕ್ಕೆ ಬಲ ತುಂಬಲು ಸೇರಿದ್ದರು.

ಬಾಡಿಗೆಕಾರ್ಮಿಕರನ್ನು ಬಳಸಿಕೊಂಡು ಹೋರಾಟವನ್ನು ಮುರಿಯುವ ಆಡಳಿತ ವರ್ಗದ ತಂತ್ರವನ್ನು ಪ್ರತಿಭಟಿಸಲು ಇಳಿದಾಗ ಗಲಭೆ ಆರಂಭವಾಯಿತು. ಆಗ ಪೋಲೀಸರು ದೌರ್ಜನ್ಯಕ್ಕೆ ಇಳಿದರು. ಕಾರ್ಮಿಕರು ಹಿಂಸೆಗೆ ಇಳಿದಿದ್ದರಿಂದ ನಿಯಂತ್ರಿಸಲು ಹೀಗೆಲ್ಲ ಮಾಡಬೇಕಾಯಿತು ಎಂಬುದು ಪೋಲೀಸರ ಮಾಮೂಲಿ ವಿವರಣೆ. ಆದರೆ ಸಿಐಟಿಯು ಎಂದಿಗೂ ಅನಗತ್ಯವಾಗಿ ಹಿಂಸೆಗೆ ಇಳಿಯುವುದಿಲ್ಲ ಎನ್ನುವುದು ಇಡೀ ಜಗತ್ತಿಗೇ ಗೊತ್ತು. ಮಾಲೀಕರ ಪರವಾಗಿ ಜನತಾದಳ ಶಾಸಕ ಕಳವೆ ಕಳಿಸಿದ ಚೇಲಾಗಳು ಪೋಲೀಸರತ್ತ ಕಲ್ಲು ತೂರಿದ್ದು ಗಲಭೆಗೆ ಕಾರಣವಾಯಿತು ಎನ್ನುವುದು ಸ್ಪಷ್ಟವಾಗಿದೆ.

ಲಾಠಿ ಪ್ರಹಾರ,ಗೋಲೀಬಾರ್, ಅಶ್ರುವಾಯು ಪ್ರಯೋಗ ಮಾಡಿದ ಪೋಲೀಸರು ಸಿಐಟಿಯು ಮುಖಂಡ ತಿಲಕಗೌಡ ಮತ್ತು ಇತರ 7 ಜನರನ್ನು ಬಂಧಿಸಿ ಹೊನ್ನಾವರ ಠಾಣೆಗೆ ಕರೆದುಕೊಂಡು ಹೋಗಿದ್ದರಿಂದ ಆಕ್ರೋಶಗೊಂಡ ಸಾವಿರಾರು ಗಂಡಸರು ಹಾಗೂ ಹೆಂಗಸರು ಠಾಣೆಗೆ ಸಾಗಿ ಅಲ್ಲಿ ಬೃಹತ್ ಪ್ರದರ್ಶನ ನಡೆಸಿದ್ದರಿಂದ ಕಂಗೆಟ್ಟ ಪೋಲೀಸರು ಬಂಧಿತರನ್ನು ಬಿಡುಗಡೆ ಮಾಡಿದರು.

ಮುಖಂಡರ ಬಂಧನದ ವಿಷಯ ತಿಳಿದು ಧಾವಿಸಿಬಂದ ಕೆಂಪು ವಸ್ತ್ರಧಾರಿಸ್ವಯಂಸೇವಕರು ಹಾಗೂ ಸಾವಿರಾರು ಪುರುಷರು ಮಹಿಳೆಯರು ಘೋಷಣೆ ಕೂಗುತ್ತಾ ಹೊನ್ನಾವರ ಬೀದಿಗಳಲ್ಲಿ ಸಾಗಿದ್ದು ಪಟ್ಟಣದ ಜನರಿಗೆ ವಿದ್ಯುತ್‌ಸಂಚಾರದ ಅನುಭವ ತಂದಿತು.

'ಆರ್.ಎಸ್.ಶೆಟ್ಟರಿಗೆ ಧಿಕ್ಕಾರ, ಶಿವಾನಂದ ನಾಯ್ಕರಿಗೆ ಧಿಕ್ಕಾರ, ವನಿತಾ ನಾಯ್ಕರಿಗೆ ಧಿಕ್ಕಾರ, ನಮಗೆ ನ್ಯಾಯ ಬೇಕು' ಮೊದಲಾದ ಘೋಷಣೆಗಳು ಮುಗಿಲು ಮುಟ್ಟಿದ್ದವು.

ಪೃಥ್ವೀಶ್ ಟೈಲ್ಸ್‌ನ ಕಾರ್ಮಿಕ ಬಂಧುಗಳಿಗೆ ಬೆಂಬಲ ಸೂಚಿಸಲು ಅನಂತವಾಡಿಗೆ ಧಾವಿಸಿ ಬಂದ ಜಿಲ್ಲೆಯ ಸಾವಿರಾರು ಕಾರ್ಮಿಕರನ್ನು ನಿಯಂತ್ರಿಸಲೆಂದು ಪೋಲೀಸರು ಅವರನ್ನು 50-60 ಜನರ ಗುಂಪಾಗಿಸಿ ಪೋಲೀಸ್ ವಾನ್, ಲಾರಿ, ಟೆಂಪೋಗಳಲ್ಲಿ ತುಂಬಿಕೊಂಡು ಕಾಲೇಜು ಗುಡ್ಡ ಮತ್ತು ಪಟ್ಟಣದ ಇತರ ಕಡೆ ತೆಗೆದುಕೊಂಡು ಹೋಗಿ ಬಿಟ್ಟರು. ಹೋರಾಟದಲ್ಲಿ ಮಹಿಳೆಯರೂ ದಿಟ್ಟತನದಿಂದ ಪಾಲ್ಗೊಂಡಿರುವುದು ಉಲ್ಲೇಖನೀಯ ಅಂಶವಾಗಿದೆ.

ಪ್ರಥ್ವಿ ಹಂಚು ಕಾರ್ಖಾನೆ ಕಾರ್ಮಿಕರ ಹೋರಾಟಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಇಲಾಖೆ ಹಾಗೂ ಪೋಲೀಸರು ನಡೆದುಕೊಂಡ ರೀತಿ ರಾಜ್ಯದ ಜನತಾದಳ ಸರಕಾರ ಸಾಗಿರುವುದರ ದಿಕ್ಸೂಚಿಯ ಸಂಕೇತವಾಗಿದೆ. ದುಡಿತದಲ್ಲಿರುವವರ ನ್ಯಾಯಯುತ ಹೋರಾಟಗಳನ್ನು ದಮನಿಸಲು ದಳ ಸರಕಾರ ಹಿಂದಿನ ಕಾಂಗ್ರೆಸ್ ಸರಕಾರಕ್ಕಿಂತ ತಾನೇನೂ ಕಮ್ಮಿಯೇನಿಲ್ಲ ಎಂದು ತೋರಿಸಿಕೊಡಲು ಹೊರಟಂತೆ ಕಾಣುತ್ತದೆ. ಪೋಲೀಸರು ಮಾಲೀಕರ ರಕ್ಷಣೆಗೆ ಧಾವಿಸಿರುವುದು ಜೆ.ಹೆಚ್.ಪಟೇಲರ ಆಡಳಿತಕ್ಕೆ ಹಿಡಿದ ಕನ್ನಡಿಯಾಗಿದೆ. ನ್ಯಾಯಕ್ಕಾಗಿ ಹೋರಾಡುವ ಜನರಲ್ಲಿ ರಕ್ಷಣೆ ಸಿಗುವುದಾದರೂ ಎಲ್ಲಿಂದ ಎಂದು ಕೇಳಬೇಕಾದ ಸನ್ನಿವೇಶ ನಿರ್ಮಾಣವಾಗಿದೆ.

ಟಿ.ಎಸ್.ನಾಯ್ಕರಿಗೆ ಏಟು

ಹೋರಾಟದ ನೇತೃತ್ವ ವಹಿಸಿದವರಲ್ಲಿ ಒಬ್ಬರಾದ ಜಿಲ್ಲಾ ಸಿಐಟಿಯು ಮುಖಂಡ ಟಿ.ಎಸ್.ನಾಯ್ಕ ಅವರಿಗೂ ಭಾರೀ ಲಾಠಿ ಏಟು ಬಿದ್ದಿದೆ. ತಮ್ಮ ಮೇಲೆ ನಡೆದ ಪೋಲೀಸ್ ದೌರ್ಜನ್ಯವನ್ನು ಕಾಂ|| ಟಿ.ಎಸ್.ನಾಯ್ಕ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

'ಪೋಲೀಸರ ಲಾಠಿಯಿಂದ ಮೊಳಕೈ ಹಾಗೂ ಭುಜಗಳ ಮೇಲೆ ಬಿದ್ದ ಹೊಡೆತದ ಬರೆಯಂತಹ ರಕ್ತ ಹೆಪ್ಪುಗಟ್ಟಿದ ಭಾಗವನ್ನು ತೋರಿಸಿದ ಅವರು ಕಾರ್ಮಿಕ ನಾಯಕರನ್ನೇ ಈ ರೀತಿ ಥಳಿಸಿರುವ ಪೋಲೀಸರು ಇನ್ನು ಸಾಮಾನ್ಯ ಕಾರ್ಮಿಕರನ್ನು ಎಷ್ಟು ಹೊಡೆದಿರಬಹುದು ನೀವೇ ಊಹಿಸಿ ಎಂದು ಹೇಳಿದರು.

ಕಾರ್ಮಿಕರ ತೀಕ್ಷ್ಣ ಹೋರಾಟದ ಹಿನ್ನಲೆಯಲ್ಲಿ ಅನಂತವಾಡಿ ಹಂಚು ಕಾರ್ಖಾನೆಯ ಸುತ್ತಮುತ್ತ ಒಂದು ಕಿ.ಮಿ. ವ್ಯಾಪ್ತಿಯಲ್ಲಿ 144ನೇ ಸೆಕ್ಷನ್ ಅನ್ವಯ ನಿಷೇದಾಜ್ಞೆಯನ್ನು ಹೇರಲಾಗಿದೆ.

ವ್ಯಾಪಕ ಖಂಡನೆ

ಪೃಥ್ವಿ ಹಂಚು ಕಾರ್ಖಾನೆ ಕಾರ್ಮಿಕರ ಮೇಲೆ ನಡೆದ ದೌರ್ಜನ್ಯಕ್ಕೆ ಜಿಲ್ಲೆಯಾದ್ಯಂತ ವ್ಯಾಪಕ ಪ್ರತಿಭಟನೆ ವ್ಯಕ್ತವಾಗಿದೆ.

ಕಾರ್ಮಿಕರ ಮೇಲೆ ಅಮಾನುಷವಾಗಿ ಲಾಠಿ ಪ್ರಹಾರ ಮಾಡಿದ ಪೋಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಬೇಕೆಂದು ಸಿಐಟಿಯು ಉ.ಕ.ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಸರಕಾರ ಮಧ್ಯಪ್ರವೇಶಿಸಿ ಕಾರ್ಮಿಕರ ನ್ಯಾಯಯುತ ಬೇಡಿಕೆಗಳಿಗೆ ಮಾನ್ಯತೆ ನೀಡಬೇಕೆಂದು ಡಿವೈಎಫ್‌ಐ ಕರ್ನಾಟಕ ರಾಜ್ಯ ಸಮಿತಿ ಆಗ್ರಹಪಡಿಸಿದೆ.

ಪೃಥ್ವಿ ಟೈಲ್ಸ್ ಕಾರ್ಮಿಕರ ಮೇಲೆ ನಡೆದ ದೌರ್ಜನ್ಯವನ್ನು ಶಿರಸಿ ವಿಮಾ ನೌಕರರ ಸಂಘ ಖಂಡಿಸಿದೆ. ಬಂಧಿತರನ್ನು ಬಿಡುಗಡೆ ಮಾಡಬೇಕು, ತಪ್ಪಿತಸ್ಥರನ್ನು ಅಮಾನತುಗೊಳಿಸಬೇಕು ಹಾಗೂ ಕಾರ್ಮಿಕ ಇಲಾಖೆ ಮಧ್ಯಪ್ರವೇಶಿಸಿ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಅದು ಆಗ್ರಹಿಸಿದೆ.

ಪೃಥ್ವಿ ಟೈಲ್ಸ್ ಕಾರ್ಮಿಕರ ಚಳುವಳಿ ಉತ್ತರ ಕನ್ನಡ ಜಿಲ್ಲೆಯ ದುಡಿಮೆಗಾರರ ಹೋರಾಟದಲ್ಲಿ ಒಂದು ಹೊಸ ಅಧ್ಯಾಯವಾಗಿ ಸೇರಿದೆ. ಹೋರಾಟದ ಗುರಿತಲುಪುವವರೆಗೆ ನಾವು ರಾಜಿ ಮಾಡಿಕೊಳ್ಳಲಾರೆವು ಎಂದು ತಿಲಕ ಗೌಡ ಘೋಷಿಸಿರುವುದು ಕೆಂಬಾವುಟದ ಮೇಲಿನ ಜಿಲ್ಲೆಯ ಕಾರ್ಮಿಕರು ಇಟ್ಟಿರುವ ವಿಶ್ವಾಸದ ಪ್ರತೀಕವಾಗಿದೆ.

ರಾಜ್ಯದೆಲ್ಲೆಡೆ ಸಂಭ್ರಮದ ಮೇ ದಿನಾಚರಣೆ

ಬೆಂಗಳೂರು: ನಗರದ ವಿವಿಧ ಕೈಗಾರಿಕಾ ಪ್ರದೇಶಗಳಿಂದ ಸಾವಿರಾರು ಕಾರ್ಮಿಕರು ಮೆರವಣಿಗೆಯಲ್ಲಿ ಬಂದು ಸಮಾವೇಶಗೊಂಡಿತು. ಅಸಂಘಟಿತ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ಸಂತೋಷಕರವಾಗಿತ್ತು. ಸಭೆಯಲ್ಲಿ ಕಾಂ.ಎಸ್.ಸೂರ್ಯನಾರಾಯಣ ರಾವ್, ವಿ.ಜೆ.ಕೆ.ನಾಯರ್, ಕೆ.ಎಸ್. ಸುಬ್ರಮಣ್ಯಂ, ಆರ್.ಶ್ರೀನಿವಾಸ್, ಮುಂತಾದ ಮುಖಂಡರು ಮಾತನಾಡಿದರು. ಸಿಐಟಿಯು ಇತರ ಸಂಘಟನೆಗಳ ಜೊತೆಗೂಡಿ ಮೇ ದಿನಾಚರಣೆ ಆಚರಿಸಲು ಆಸಕ್ತಿ ವಹಿಸಿತ್ತು. ಆದರೆ ಇತರ ಸಂಘಟನೆಗಳು ಬೇರೆ ಬೇರೆಯಾಗಿಯೇ ಕಾರ್ಮಿಕ ದಿನ ಆಚರಿಸಿದವು ಎಂಬುದು ವಿಷಾದದ ಸಂಗತಿಯಾಗಿತ್ತು.

ಕುಂದಾಪುರ: ಕೆಂಬಾವುಟ ಮತ್ತು ಪತಾಕೆಗಳಿಂದ ಶೃಂಗರಿಸಲ್ಪಟ್ಟ ಗಾಂಧಿ ಮೈದಾನದಲ್ಲಿ ಮೇ ದಿನಾಚರಣೆಯನ್ನು ಆಚರಿಸಲಾಯಿತು. ಅದಕ್ಕೂ ಮುಂಚೆ ಹಂಚು ಕಾರ್ಮಿಕರು, ಬೀಡಿ ಕಾರ್ಮಿಕರು, ಪೈಪ್ ಕಾರ್ಖಾನೆಯ ಕಾರ್ಮಿಕರು, ರಿಕ್ಷಾ ಚಾಲಕರು, ಮಾಲಕರು, ರೈತರು, ಕೃಷಿ ಕೂಲಿಕಾರರು ಪಾಲ್ಗೊಂಡಿದ್ದ ಬೃಹತ್ ರ್‍ಯಾಲಿಯು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಿಡಿಮದ್ದು ಸಿಡಿಸಿ ಅತ್ಯುತ್ಸಾಹದಿಂದ ಪಾಲ್ಗೊಂಡಿತ್ತು.

ಸಭೆಯಲ್ಲಿ ಪಿ.ರಾಮಚಂದ್ರರಾವ್ ಮಾತನಾಡಿ ಜಗತ್ತಿನ ಕಾರ್ಮಿಕ ವರ್ಗವು ಕಳೆದ ಆರು ವರ್ಷಗಳ ಹಿನ್ನಡೆಯಿಂದ ಬಿಡುಗಡೆಗೊಳ್ಳುತ್ತಾ ಸಮಾಜವಾದದತ್ತ ಮುನ್ನುಗ್ಗುತ್ತಿದೆ ಎಂದರು. ಕೆ.ಶಂಕರ್ ಪುರಸಭಾಧ್ಯಕ್ಷರಾದ ವಿ.ನರಸಿಂಹ, ಸಿ.ನಾರಾಯಣ, ಹೆಚ್.ನರಸಿಂಹ, ಯು.ದಾಸಭಂಡಾರಿ, ಮಹಾಬಲ ವಡೇರಹೋಬಳಿ ಮುಂತಾದವರು ಮಾತನಾಡಿದರು. ಅಬ್ರಹಾಂ ಕರ್ಕಡ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದ ನಂತರ ಕಾಂ.ಇ.ಎಂ.ಎಸ್.ರವರ ಜೀವನ ಚರಿತ್ರೆಯ ಸಾಕ್ಷ್ಯ ಚಿತ್ರವನ್ನು ಪ್ರದರ್ಶಿಸಲಾಯ್ತು.

ಮುನ್ನೂರು ಗ್ರಾಮ: ಮಂಗಳೂರಿನ ಮುನ್ನೂರು ಗ್ರಾಮದ ದುಡಿಯುವ ಜನರು ಬೆಳಿಗ್ಗೆಯೇ ಬೀದಿ ಬೀದಿಗಳಲ್ಲಿ ಕೆಂಪು ಪತಾಕೆ ಜೊತೆಯಲ್ಲಿ ಮೆರವಣಿಗೆ ನಡೆಸಿ ಗ್ರಾಮಸ್ಥರು ಕುತೂಹಲಭರಿತರಾಗಿ ವೀಕ್ಷಿಸುವ ರೀತಿಯಲ್ಲಿ ರ್‍ಯಾಲಿ ನಡೆಸಿದರು. ಕುತ್ತಾರು ಪಡವಿನಲ್ಲಿ ಸಮಾವೇಶಗೊಂಡು ಸಾರ್ವಜನಿಕ ಸಭೆ ನಡೆಸಲಾಯಿತು. ಸಭೆಯಲ್ಲಿ ಸಿಐಟಿಯು ಜಿಲ್ಲಾ ಮುಖಂಡರಾದ ಜಯಂತ ನ್ಯಾಕ್, ವಿಮಾ ನೌಕರರ ಸಂಘದ ನಾಗೇಶ್‌ಕುಮಾರ್, ಮುನ್ನೂರು ಸಿಪಿಐ(ಎಂ) ಶಾಖೆಯ ಕಾರ್ಯದರ್ಶಿ ವಿಶ್ವನಾಥ್ ಕೆ. ಮಾತನಾಡಿದರು.

ತುರುವೇಕೆರೆ: ತುಮಕೂರು ಜಿಲ್ಲೆಯ ತುರುವೇಕೆರೆಯಲ್ಲಿ ಅಂಗನವಾಡಿ ನೌಕರರ ಸಂಘದ ನೇತೃತ್ವದಲ್ಲಿ ಮೇ ದಿನ ಆಚರಿಸಲಾಯಿತು. ಪಟ್ಟಣ ಪಂಚಾಯ್ತಿ ಅಧ್ಯಕ್ಷರಾದ ಹೆಚ್.ಆರ್.ರಾಮೇಗೌಡ ಧ್ವಜಾರೋಹಣ ಮಾಡಿದರು. ಅಂಗನವಾಡಿ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಸಭೆಯಲ್ಲಿ ಎಸ್‌ಎಫ್‌ಐನ ಟಿ.ಆರ್.ನವೀಂದ್ರ, ಡಿವೈಎಫ್‌ಐನ ಪ್ರೇಮಲತ, ಬಿಜಿವಿಎಸ್‌ನ ವಿ.ಜಿ.ಬೈರಪ್ಪಾಜಿ, ಅಂಗನವಾಡಿಯ ಹುಲಿಕಲ್ ಕುಪಮ್ಮ ಸಿ.ರಂಗಮಣಿ, ಹೆಚ್.ಪುಷ್ಪವತಿ, ಕೆಂಪದೇವಮ್ಮ ಮತ್ತು ಸಿಐಟಿಯು ಪ್ರೇಮಕುಮಾರ್ ಮುಂತಾದವರು ಮಾತನಾಡಿದರು.

ರಾಮದುರ್ಗ: ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ ದಿನವನ್ನು ಹಿಂದೆಂದಿಗಿಂತಲೂ ಆಕರ್ಷಣೀಯವಾಗಿ ಆಚರಿಸಲಾಯಿತು. ಕರ್ನಾಟಕ ಪ್ರಾಂತ ರೈತ ಸಂಘದವರು ಪಂಚಾಯತ್ ನೌಕರರು, ಬೀಡಿ ಕಾರ್ಮಿಕರು, ಅಂಗನವಾಡಿ ನೌಕರರು, ವಸತಿರಹಿತ ಸಂಘದವರು ಪಾಲ್ಗೊಂಡಿದ್ದ ಬೃಹತ್ ಮೆರವಣಿಗೆ ನಡೆಸಲಾಯಿತು.

ನಂತರ ನಡೆದ ಸಭೆಯಲ್ಲಿ ಸಿಪಿಐ(ಎಂ) ಜಿಲ್ಲಾಕಾರ್ಯದರ್ಶಿ ವಿ.ಪಿ.ಕುಲಕರ್ಣಿ ರಾಜ್ಯ ಸಮಿತಿಯ ಸದಸ್ಯರಾದ ಸಿ.ಆರ್.ಭಟ್, ಎಸ್.ಬಿ.ಹಳ್ಳಿ, ಚಿಕ್ಕನರಗುಂದ ಮುಂತಾದವರು ಮಾತನಾಡಿದರು. ಗೈಬುಸಾಬ್ ಖಾನ್, ನಾಗಪ್ಪ ಸಂಗೊಳ್ಳಿ ಮುಂತಾದವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ನಗರವನ್ನು ಕೆಂಬಾವುಟಗಳಿಂದ ಸಿಂಗರಿಸಲಾಗಿತ್ತು.

ಉತ್ತರ ಕನ್ನಡ: ಭಟ್ಕಳ ತಾಲೂಕಿನ ವಿವಿಧ ಕಾರ್ಖಾನೆಗಳ ಮುಂದೆ ಬೆಳಿಗ್ಗೆ ಧ್ವಜಾರೋಹಣ ಮಾಡಿ ಸಿಹಿ ಹಂಚಲಾಯಿತು. ಹಂಚಿನ ಕಾರ್ಖಾನೆ, ಮೆಡಿಕಲ್ ಕಾರ್ಖಾನೆ, ಅಂಗನವಾಡಿ ನೌಕರರು ಭಟ್ಕಳದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಬಹಿರಂಗ ಸಭೆ ನಡೆಸಲಾಯಿತು. ಮಾಜಿ ಶಾಸಕರಾದ ಕಾಂ.ಪಿ.ರಾಮಚಂದ್ರರಾವ್, ಸುಭಾಷ್ ಕೊಪ್ಪಿಕರ್ ಮಾತನಾಡಿದರು. ಈಶ್ವರನಾಯ್ಕ, ಶಂಕರ್ ದೇವಾಡಿಗ, ಹರಿಶ್ಚಂದ್ರ ದೇವಾಡಿಗ, ಚಂದ್ರುನಾಯ್ಕ, ಜಂಯತ್ ನಾಯಕ್, ಸುನೀಲ್ ಗಣಪತಿ ದೇವಾಡಿಗ, ರಮೇಶ್ ನಾಯ್ಕ, ನಾಗರತ್ನಮ್ಮ ಮುಂತಾದವರು ನೇತೃತ್ವ ನೀಡಿದರು. ರ್‍ಯಾಲಿಯಲ್ಲಿ ಕಾರ್ಮಿಕರು ಕೆಂಪು ಸಮವಸ್ತ್ರ ಧರಿಸಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ದಾಂಡೇಲಿ: ಐದು ಸಾವಿರ ಜನ ಪಾಲ್ಗೊಂಡಿದ್ದ ಬೃಹತ್ ರ್‍ಯಾಲಿಯನ್ನು ಸಂಘಟಿಸಿ ಉತ್ತರ ಕನ್ನಡ ಜಿಲ್ಲೆಯ ಕೈಗಾರಿಕಾ ನಗರವಾದ ದಾಂಡೇಲಿಯಲ್ಲಿ ಬಹು ವಿಜೃಂಭಣೆಯಿಂದ ಮೇ ದಿನ ಆಚರಿಸಲಾಯಿತು. ಸಿಪಿಐ(ಎಂ) ಕಚೇರಿಯನ್ನು ಕೆಂಪು ಕಾಗದಗಳಿಂದ ಅಲಂಕರಿಸಲಾಗಿತ್ತು. ಸಂಡೇ ಮೈದಾನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಟಿ.ಎಸ್.ನಾಯ್ಕ, ಭೀಮರಾವ್, ಎಂ.ಬಿ.ನಾಯ್ಕ ಹಾಗೂ ಸಾವಂತರವರು ಮಾತನಾಡಿದರು. ಅಂಗನವಾಡಿ ಕಾರ್ಯಕರ್ತೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಚಿಕ್ಕಮಗಳೂರು: ನಗರದಲ್ಲಿ ನಡೆದ ಮೇ ದಿನದ ಸಭೆಯಲ್ಲಿ ರಾಜ್ಯ ಸಿಐಟಿಯು ಮುಖಂಡರಾದ ಸಿ.ನಂಜುಂಡಪ್ಪನವರು ಮಾತನಾಡಿ ಉದ್ಯೋಗರಹಿತ ಬೆಳವಣಿಗೆಯ ಅಪಾಯವನ್ನು ವಿವರಿಸಿ ಇದರಿಂದಾಗಿ ಸಾಮಾನ್ಯ ಜನರಲ್ಲಿ ಕೊಳ್ಳುವ ಶಕ್ತಿ ಇಲ್ಲವಾಗುತ್ತದೆ ಎಂದು ತಿಳಿಸಿದರು. ಸಭೆಯ ಅಧ್ಯಕ್ಷತೆಯನ್ನು ಅಬ್ದುಲ್ ಜಬ್ಬಾರ್ ವಹಿಸಿದ್ದರು.

ಶಿರಸಿ(ಉ.ಕ.): ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಮೇ ದಿನ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಸಿಐಟಿಯು ರಾಜ್ಯ ಸಮಿತಿ ಮುಂದಿಟ್ಟ ಬೇಡಿಕೆಗಳನ್ನು ಬೆಂಬಲಿಸಿತು.

ಸಭೆಯಲ್ಲಿ ಎಂ.ಎಸ್.ಧಾರೇಶ್ವರ, ಡಿವೈಎಫ್‌ಐನ ಶಾಂತಾರಾಂ ನಾಯಕ್, ಬಿ.ಜಿ.ಹೆಗಡೆ, ಸಿ.ಆರ್.ಶಾನುಭಾಗ್ ಮಾತನಾಡಿದರು, ಕೆ.ಎಸ್.ಆರ್.ಟಿ.ಸಿ.ಯ ಬಿ.ಜಿ.ಹೆಗಡೆ ಅಧ್ಯಕ್ಷತೆ ವಹಿಸಿದ್ದರು.

ಹಾಗೆಯೇ ಧಾರವಾಡ, ಮಂಡ್ಯ ಜಿಲ್ಲೆಯ ತಳಗವಾದಿ, ಮಾವಿನಕುರ್ವೆ ಮುಂತಾದ ಕಡೆಗಳಲ್ಲಿ ಮೇ ದಿನಾಚರಣೆ ನಡೆದ ವರದಿಗಳು ಬಂದಿವೆ.





ಸಂಯುಕ್ತರಂಗದಿಂದ ಎಡರಂಗದವರೆಗೆ

ಮೂರು ದಶಕಗಳ ವರ್ಗ ಹೋರಾಟಗಳ ಮುನ್ನಡೆಯ ನೆನಪು

ಪಶ್ಚಿಮಬಂಗಾಳದಲ್ಲಿ ಈಗ ಸಂಯುಕ್ತ ರಂಗ ಸರಕಾರದ 30 ನೇ ವಾರ್ಷಿಕೋತ್ಸವದ ಹಾಗೂ ಎಡರಂಗ ಸರಕಾರದ 20ನೇ ವಾರ್ಷಿಕೋತ್ಸವವನ್ನು ಆಚರಿಸಲಾಗುತ್ತಿದೆ. ಈಗ ಕೇಂದ್ರದಲ್ಲಿ ಏಕಪಕ್ಷ ಆಡಳಿತದ ಯುಗ ಕೊನೆಗೊಂಡು ಸಮ್ಮಿಶ್ರ ಸರಕಾರಗಳ ಯುಗ ಆರಂಭವಾಗಿದೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಇದು ಸಾಧ್ಯವೇ ಎನ್ನುವ ಪ್ರಶ್ನೆ ಬಂದಾಗಲೆಲ್ಲಾ ತಪ್ಪದೇ ಪಶ್ಚಿಮ ಬಂಗಾಳದತ್ತ ತೋರಿಸುತ್ತಾರೆ. ಒಂದು ಪರ್ಯಾಯ ಆಡಳಿತ ದಾರಿಯ ಬಗ್ಗೆ ಹೀಗೆ ಎಲ್ಲರನ್ನೂ ಚಿಂತನೆಗೆ ಹಚ್ಚಿಸುವ ಪಶ್ಚಿಮ ಬಂಗಾಳದ ಅನುಭವ ಏನು? ಸಂಯುಕ್ತ ರಂಗ ಸರಕಾರ ರಚನೆಯಾದ ಹತ್ತೇ ವರ್ಷಗಳೊಳಗೆ ಎಡರಂಗ ಸರಕಾರ ಹೇಗೆ ರಚನೆಯಾಯಿತು? ಇದರ ಪ್ರಮುಖ ರೂವಾರಿ, ಸತತ ಐದನೇ ಬಾರಿ ಮುಖ್ಯಮಂತ್ರಿಗಳಾಗಿ ಇಡೀ ದೇಶದಲ್ಲಿ ದಾಖಲೆ ಸ್ಥಾಪಿಸಿರುವ ಜ್ಯೋತಿಬಸುರವರೇ ಸ್ವತಃ ಇಲ್ಲಿ ನೆನಪಿಸಿದ್ದಾರೆ. ಮೊದಲ ಭಾಗದಲ್ಲಿ 1967 ರಲ್ಲಿ ಪ್ರಥಮ ಸಂಯುಕ್ತ ರಂಗ ಸರಕಾರದ ರಚನೆಗೆ ದಾರಿಮಾಡಿಕೊಟ್ಟ ಹೋರಾಟಗಳ ಬಗ್ಗೆ ಓದಿರುವಿರಿ. 1967 ರ ಪ್ರಥಮ ಸಂಯುಕ್ತ ರಂಗ ಸರಕಾರ ರಚನೆಯ ನಂತರ 1977 ರಲ್ಲಿ ಮೊದಲ ಎಡರಂಗ ಸರಕಾರ ರಚನೆಯಾಗುವವರೆಗಿನ ಇತಿಹಾಸದ ಸ್ಥೂಲ ನೋಟವನ್ನು ಪಡೆದಿರುವಿರಿ. ಈ ಮೂರು ದಶಕಗಳ ಒಟ್ಟು ಅನುಭವವೇನು, ಎಡರಂಗದ ಯಶಸ್ಸಿನ ರಹಸ್ಯವೇನು, ಪ್ರಸ್ತುತ ರಾಷ್ಟ್ರದ ರಾಜಕೀಯದಲ್ಲಿ ಇದರಿಂದ ಏನನ್ನು ಕಲಿಯಬಹುದು? ಜ್ಯೋತಿ ಬಸುರವರ ಈ ದೀರ್ಘ ಲೇಖನದ ಉಳಿದ ಈ ಭಾಗದಲ್ಲಿ ಓದಿ.

(ಕಳೆದ ಸಂಚಿಕೆಯಿಂದ)

ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರಕಾರದ 21ನೇ ವಾರ್ಷಿಕೋತ್ಸವವನ್ನು ಸಧ್ಯದಲ್ಲೇ ಆಚರಿಸುವವರಿದ್ದೇವೆ. ಸತತವಾಗಿ ಐದು ವಿಧಾನಸಭಾ ಚುನಾವಣೆಗಳಲ್ಲಿ ನಾವು ಗೆದ್ದಿದ್ದೇವೆ. 1981ರಲ್ಲಿ ಸಿಪಿಐನ್ನು ಒಳಗೊಂಡಂತೆ ಇನ್ನೂ ಮೂರು ಎಡಪಕ್ಷಗಳು ಎಡರಂಗವನ್ನು ಸೇರಿದವು. ಇತ್ತೀಚಿಗೆ ಇನ್ನೂ ಒಂದು ಪಕ್ಷ ಸೇರಿದೆ. ಹೀಗಾಗಿ ಎಡರಂಗವು ಒಟ್ಟು ಹತ್ತು ಪಕ್ಷಗಳನ್ನೊಳಗೊಂಡಿದೆ.

ಎಡರಂಗ ಸರಕಾರ ಉಳಿದುಕೊಂಡಿರುವುದೇಕೆ?

ದೇಶ ಹಾಗೂ ಜನ ಪಶ್ಚಿಮ ಬಂಗಾಳದತ್ತ ಸ್ಫೂರ್ತಿಯ ಸೆಲೆಯಾಗಿ ನೋಡುತ್ತಿದ್ದಾರೆ. ಇಲ್ಲಿ ಮತ್ತು ವಿದೇಶದಲ್ಲಿ ಎರಡೂ ಕಡೆ ಹತ್ತು ಪಕ್ಷಗಳನ್ನೊಳಗೊಂಡ ಎಡರಂಗವು ಸರಿಯಾಗಿ ನಡೆಯುತ್ತಿರುವುದಕ್ಕೆ ಕಾರಣಗಳೇನು ಎಂದು ಕೇಳಿದಾಗ ಎಡರಂಗವು ಒಂದು ಸಮಾನ ಕಾರ್ಯಕ್ರಮದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ನಾವು ಬೊಟ್ಟು ಮಾಡಿ ಹೇಳುತ್ತೇವೆ. ನಾವು ಸುಳ್ಳು ಭರವಸೆಗಳನ್ನು ಜನರಿಗೆ ನೀಡುವುದಿಲ್ಲ. ನಾವು ಸಂದರ್ಭಸಾಧಕತನ ದಲ್ಲಿ ತೊಡಗುವುದಿಲ್ಲ. ಒಂದು ದಕ್ಷ ಆಡಳಿತನಡೆಸಲಿಕ್ಕಾಗಿ ಸರಕಾರಿ ಅಧಿಕಾರವನ್ನುಹಂಚಿಕೊಳ್ಳಬೇಕೆಂಬಇಚ್ಛೆನಮಗಿಲ್ಲ.

ನಮ್ಮ ಇತಿಮಿತಿಗಳನ್ನು ಮತ್ತು ಉದ್ದೇಶಗಳನ್ನು ಜನರಿಗೆ ತಿಳಿ ಹೇಳುತ್ತೇವೆ. ಎಡರಂಗ ಸರಕಾರದಡಿ ಜನರ ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಿ ಭದ್ರಪಡಿಸಲಾಗಿದೆ. ಜನರ ದನಿಗೆ ನಾವು ಓಗೊಡುತ್ತೇವೆ. ನಾವು ಅವರಿಗೆ ರಾಜಕೀಯದ ಅರಿವು ಮೂಡಿಸುತ್ತೇವೆ. ಮತ್ತು ಅದರಿಂದಲೇ ಅವರು, ಬಂಡವಾಳಶಾಹಿ ಪತ್ರಿಕೆಗಳ ಒಂದು ವಿಭಾಗ ನಮ್ಮ ವಿರುದ್ಧ ಅವ್ಯಾಹತವಾಗಿ ಸುಳ್ಳು ಪ್ರಚಾರ ಮಾಡುತ್ತಿದ್ದರೂ ಸಹ ನಮ್ಮೊಡನಿದ್ದಾರೆ. ನಾವು ಒಗ್ಗಟ್ಟಿನಿಂದಿದ್ದೇವೆ. ಏಕೆಂದರೆ ನಾವು ಒಂದು ತತ್ವದ ಆಧಾರದ ಮೇಲೆ ಕೆಲಸ ಮಾಡುತ್ತಿದ್ದೇವೆ.

ಎಲ್ಲಾ ವಿಷಯಗಳ ಮೇಲೂ ರಂಗದ ಅಂಗ ಪಕ್ಷಗಳಿಗೆ ಒಂದೇ ಅಭಿಪ್ರಾಯ ಇರಬೇಕಾಗಿಲ್ಲ. ನಮ್ಮಲ್ಲಿನ ಭಿನ್ನಾಭಿಪ್ರಾಯಗಳನ್ನು ಪರಸ್ಪರ ಮಾತುಕತೆಗಳ ಮೂಲಕ ಪರಿಹರಿಸಿಕೊಳ್ಳುತ್ತೇವೆ.

ಕೇಂದ್ರದಲ್ಲಿ ವೈರತ್ವದ ಭಾವನೆ ಸೂಸುವ ಸರಕಾರದ ಜತೆಯಲ್ಲಿ ಎಡರಂಗ ಸರಕಾರ ಕೆಲಸ ಮಾಡಬೇಕಾಯಿತು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಅವರು ಅಭಿವೃದ್ಧಿ ಕಾರ್ಯಗಳನ್ನು ತಡೆಹಿಡಿದರು, ಪಶ್ಚಿಮ ಬಂಗಾಳದಲ್ಲಿ ಬಂಡವಾಳ ಹೂಡದಂತೆ ಕೈಗಾರಿಕೋದ್ಯಮಿಗಳನ್ನು ಪುಸಲಾಯಿಸಿದರು, ನ್ಯಾಯಸಮ್ಮತವಾಗಿ ಕೊಡಬೇಕಾದ ಹಣಕಾಸುಗಳನ್ನು ಏಕಪಕ್ಷೀಯವಾಗಿ ನೆನೆಗುದಿಯಲ್ಲಿಟ್ಟರು. ಈ ಎಲ್ಲಾ ಸಂಕೀರ್ಣ ಮತ್ತು ಕ್ಲಿಷ್ಟ ಪರಿಸ್ಥಿತಿಗಳನ್ನೆದುರಿಸಿ ನಾವು ಮುನ್ನಡೆಯಬೇಕಾಯಿತು.

ಇತ್ತೀಚಿಗೆ ಪರಿಸ್ಥಿತಿ ಬದಲಾಗಿದೆ. ಕಳೆದ ಮೂವತ್ತು ವರ್ಷಗಳಲ್ಲಿ ದಿಲ್ಲಿಯಲ್ಲಿ ಹಲವು ಆಳ್ವಿಕೆಗಳು ಬಂದಿವೆ, ಹೋಗಿವೆ. ಆದರೆ ಸರಿಯಾದ ತಂತ್ರ ಮತ್ತು ವ್ಯೂಹಗಳನ್ನು ಅಳವಡಿಸಿದ್ದರಿಂದ ನಾವು 'ಗುರಿ ಮುಟ್ಟುವ' ದಿಕ್ಕಿನಲ್ಲಿ ಗಟ್ಟಿಯಾಗಿ ನೆಲೆಯೂರಿದ್ದೇವೆ ಎಂದು ವಿನಯಪೂರ್ವಕವಾಗಿ ಹೇಳಬಹುದು. ತಪ್ಪುಗಳನ್ನು ತಿದ್ದಬಹುದು ಮತ್ತು ಅನುಭವಗಳಿಂದ ಸರಿಯಾದ ಪಾಠಗಳನ್ನುಕಲಿಯಬಹುದು.

ಆದಾಗ್ಯೂ, ಯಾವುದೇ ಕಾರಣಕ್ಕೂ ಯಾವುದೇ ಸಂದರ್ಭದಲ್ಲಿಯೂ ಸಂತೃಪ್ತ ಭಾವನೆ ತಳೆಯಲು ಸಾಧ್ಯವಿಲ್ಲ. ಜನಪ್ರಿಯ ಬೆಂಬಲ ನಮ್ಮ ಮೇಲಿನ ಜವಾಬ್ದಾರಿಯನ್ನು ಹೆಚ್ಚಿಸಿದೆ. ಎಡಪಂಥವು ಒಂದು ರಾಜಕೀಯ ಶಕ್ತಿಯಾಗಿ ದೇಶದೆಲ್ಲೆಡೆ ಇನ್ನೂ ಬೆಳೆಯಬೇಕಾಗಿದೆ. 'ಹೊಸ ಆರ್ಥಿಕ ನೀತಿ' ಸೃಷ್ಟಿಸಿದ ಅರಾಜಕತೆ ಮತ್ತು ಜಾತೀಯ ಹಾಗೂ ಕೋಮುವಾದಿ ಶಕ್ತಿಗಳು ಅಪಾಯಕಾರೀ ಪ್ರಮಾಣದಲ್ಲಿ ಬೆಳೆಯುತ್ತಿರುವುದು, ಸಾಮಾನ್ಯ ಜನರ ಬದುಕು ಈ ಸನ್ನಿವೇಶಗಳಿಂದ ಗಂಡಾಂತರಕ್ಕೊಳಗಾಗಿದೆ. ಒಟ್ಟಾರೆ ಚಿತ್ರವೆಂದರೆ ದೇಶವು ಒಂದು ಅಶಾಂತಿಯ ಬೀಡಾಗಿದೆ. ಎಡಪಂಥೀಯರ ಮೇಲೆ ಅದರಲ್ಲೂ ಪ್ರಮುಖವಾಗಿನಮ್ಮಪಕ್ಷದಮೇಲೆಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯನ್ನು ಬಲಪಡಿಸುವ ಜವಾಬ್ದಾರಿಯನ್ನು ಹೊರಿಸಿದೆ.

ದೆಹಲಿಯಲ್ಲಿ ಸಮಿಶ್ರ ಸರಕಾರಗಳು

ಪ್ರಾಯಶಃ ದೆಹಲಿಯಲ್ಲಿ ನಾವು ಕೊನೆಯ ಏಕಪಕ್ಷ ಆಡಳಿತವನ್ನು ಕಂಡಿದ್ದೇವೆ. ಸಮ್ಮಿಶ್ರ ಸರಕಾರಗಳ ಸಾಧ್ಯತೆಗಳು ಹೆಚ್ಚಾಗುತ್ತಿವೆ. ಹೊಸ ರಾಜಕೀಯ ಶಕ್ತಿಗಳು ತಲೆ ಎತ್ತುತ್ತಿವೆ. ಹದಿಮೂರು ಪಕ್ಷಗಳ ಕೇಂದ್ರದ ಸಂಯುಕ್ತ ರಂಗ ಸರಕಾರ ಸಮಾನ ಕನಿಷ್ಠ ಕಾರ್ಯಕ್ರಮಗಳ ಆಧಾರದ ಮೇಲೆ ಕೆಲಸ ಮಾಡಲು ಪ್ರಾರಂಭಿಸಿದೆ. ಆದರೆ ಇದರರ್ಥ ನಮ್ಮ ಜವಾಬ್ದಾರಿ ಮುಗಿಯಿತೆಂದಲ್ಲ. ಅನಿವಾರ್ಯವಾಗಿ ಕಾಂಗ್ರೆಸ್ ಈ ಸರಕಾರವನ್ನು ಬೆಂಬಲಿಸುತ್ತಿದೆ. ದೇಶೀಯ ಹಾಗೂ ವಿದೇಶಿಯ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಗಳು ಕೂಡಾ ಕೆಲಸ ಮಾಡುತ್ತಿವೆ. ಸಂಯುಕ್ತ ರಂಗ ಸರಕಾರವು ಸಮಾನ ಕನಿಷ್ಠ ಕಾರ್ಯಕ್ರಮಗಳಿಗನುಸಾರವಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುವಲ್ಲಿ ಎಡಪಕ್ಷಗಳು ಪ್ರಮುಖ ಪಾತ್ರ ವಹಿಸಬೇಕಾಗುತ್ತದೆ. ಇದು ಸಾಧ್ಯವಾಗಬೇಕಾದರೆ ನಾವು ನಮ್ಮ ಸಾಮೂಹಿಕ ಚಳುವಳಿಗಳ ತಳಪಾಯವನ್ನು ಇನ್ನೂ ವಿಶಾಲಗೊಳಿಸಬೇಕಾಗುತ್ತದೆ.

ಪಶ್ಚಿಮ ಬಂಗಾಳದಲ್ಲಿ 1967ರ ಸಂಯುಕ್ತ ರಂಗದಿಂದ ಇವತ್ತಿನ ಎಡರಂಗದವರೆಗಿನ ವಿಕಾಸವು ವರ್ಗ ಹೋರಾಟಗಳ ಮುನ್ನಡೆಯನ್ನು ಪ್ರತಿಫಲಿಸುವ ಕಥೆ. ಅವಿರತವಾದ ಹೋರಾಟಗಳ ಮೂಲಕ ನಾವು ಹಾದು ಬರಬೇಕಾಯಿತು. ಮುಂದೆಯೂ ಇದೇ ರೀತಿಯಲ್ಲಿ ಮುನ್ನಡೆಯಬೇಕಾಗುತ್ತದೆ.

ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ಗಡಿಗಳ ಮಿತಿಗಳನ್ನು ಮೀರಿ ನಿಂತು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಕಾರ್ಯಾಚರಣೆಯ ಪ್ರಭಾವಳಿಯನ್ನು ದೇಶಾದ್ಯಂತ ಪಸರಿಸುವುದರ ಮೇಲೆ ನಮ್ಮ ಮುಂದಿನ ಪ್ರಗತಿ ನಿಂತಿದೆ. ಬಡಜನರ, ಮಧ್ಯಮ ವರ್ಗದವರ ಮತ್ತು ದುಡಿಯುವ ಜನರ ಎಲ್ಲಾ ವಿಭಾಗಗಳ ಹಿತಾಸಕ್ತಿಗಳನ್ನು ಮುಂದಕ್ಕೆ ಒಯ್ಯಲು ನಾವು ಹೋರಾಟಗಳನ್ನು ಮತ್ತು ಚಳುವಳಿಗಳನ್ನು ಕಟ್ಟಿ ಬೆಳೆಸಬೇಕಾದ್ದು ಅವಶ್ಯಕ ಎಂದು ಪಶ್ಚಿಮ ಬಂಗಾಳದಲ್ಲಿನ ನಮ್ಮ ಮೂವತ್ತು ವರ್ಷಗಳ ಅನುಭವ ಕಲಿಸಿದೆ.

ಜನರ ಪ್ರಜ್ಞೆಯೇ ಕೀಲಿಗೈ

ರಾಷ್ಟ್ರ ರಾಜಕಾರಣದಲ್ಲಿ ಎಡಪಕ್ಷಗಳು ಮಧ್ಯಪ್ರವೇಶ ಮಾಡುವ ಅವಕಾಶ ಹೆಚ್ಚಾಗಿದೆ. ಸರಿಯಾದ ರೀತಿಯಲ್ಲಿ ಈ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ಭ್ರಷ್ಟಾಚಾರ, ಹಗರಣಗಳು ಮತ್ತು ಸಾರ್ವಜನಿಕ ಬದುಕಿನಲ್ಲಿನ ಅನೈತಿಕತೆಯ ಕುರಿತು ಜನರಲ್ಲಿ ಪ್ರಜ್ಞೆ ಮೂಡಿಸಬೇಕಿದೆ. ರಾಜಕೀಯದಲ್ಲಿ ನೈತಿಕತೆಯನ್ನು ಮತ್ತೆ ತರಲು, ಜನರ ಪ್ರಜ್ಞೆಯನ್ನು ಎತ್ತರಿಸಬೇಕಾಗಿದೆ. ಈ ಎಲ್ಲಾ ಪ್ರಶ್ನೆಗಳಿಗೆ ಪರಿಹಾರದ ಕೀಲಿಗೈ ಎಂದರೆ ಜನರ ಪ್ರಜ್ಞೆಯೇ. ಕೇವಲ ಆಡಳಿತ ಮತ್ತು ನ್ಯಾಯಾಂಗ ಕ್ರಿಯಾಶೀಲತೆಗಳು ಮಾತ್ರವೇ ಗಣನೀಯವಾಗಿ ನಮ್ಮ ಸಹಾಯಕ್ಕೆ ಬರಲಾರವು. ಪ್ರಜ್ಞಾವಂತ ನಾಗರಿಕರು ಮಾತ್ರವೇ ಭ್ರಷ್ಟಾಚಾರಿಗಳು ಚುನಾವಣೆಯಲ್ಲಿ ಗೆಲ್ಲದಂತೆ ನೋಡಿಕೊಳ್ಳಬಹುದು ಮತ್ತು ಕ್ಷುಲ್ಲಕ ವೈಯಕ್ತಿಕ ಹಿತಾಸಕ್ತಿಗಾಗಿ ರಾಜಕೀಯ ಕ್ಷೇತ್ರವನ್ನು ಬಳಸಿಕೊಳ್ಳುವುದನ್ನು ನಿಲ್ಲಿಸಬಲ್ಲರು.

ಕೋಮುವಾದಿ ಮತ್ತು ಮೂಲಭೂತವಾದಿ ಶಕ್ತಿಗಳು ರಾಜಕೀಯ ಅಧಿಕಾರವನ್ನು ವಶಪಡಿಸಿಕೊಳ್ಳುವ ಅವಕಾಶಗಳಿಗಾಗಿ ಹುಡುಕುತ್ತಾ ಸಾಗುತ್ತಿವೆ. ಇದು ಪ್ರಜಾಪ್ರಭುತ್ವಕ್ಕೆ ಅನಿಷ್ಟಕಾರಿ. ರಾಜಕೀಯ ಪ್ರಕ್ರಿಯೆಯನ್ನು ಬಳಸಿ ತಮ್ಮ ಪ್ರಭಾವವನ್ನು ಹೆಚ್ಚಿಸಲು ಈ ಶಕ್ತಿಗಳು ಹವಣಿಸುತ್ತಿವೆ. ಇಂತಹ ಅನಿಷ್ಟಕಾರಿ ಬೆಳವಣಿಗೆಗಳ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸಬೇಕು ಮತ್ತು ಈ ಕಾರ್ಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳದ್ದು ಗುರುತರವಾದ ಜವಾಬ್ದಾರಿ.

(ಮುಗಿಯಿತು)

ಹರಿತಗೊಂಡ ಭೂ ಹೋರಾಟ

ಧಾರವಾಡ ರಾಜ್ಯದ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ರಾಜಧಾನಿ ನಿಜ. ಆದರೆ ಜಿಲ್ಲೆಯಲ್ಲಿ ಎಲ್ಲವೂ ಸುಭಿಕ್ಷವಲ್ಲ, ಎಲ್ಲರೂ ಅಕ್ಷರಸ್ಥರಲ್ಲ, ಹೊಟ್ಟೆ ತುಂಬಿದವರೂ ಅಲ್ಲ. ಬದಲಿಗೆ ಹೊಟ್ಟೆಪಾಡಿಗಾಗಿ ಇತರೆಡೆಯಂತೆ ಕಟ್ಟಡ ಕೆಲಸ, ಬೀದಿ ಸುತ್ತುವ ಕೆಲಸ ಹಾಗೂ ನೆರೆ ಹೊರೆ ಪಟ್ಟಣ ಮತ್ತು ರಾಜ್ಯಗಳಿಗೆ ವಲಸೆ ಹೋಗುವವರ ಸಂಖ್ಯೆಗೇನು ಕಡಿಮೆ ಇಲ್ಲ. ಹೀಗೆ ವಲಸೆ ಹೋಗಿ ಹಿಂದಿರುಗಿ ಬಂದು ತಮ್ಮ ಬದುಕಿಗೆ ನೆಲೆಯೊಂದನ್ನು ಕಂಡುಕೊಳ್ಳಲು ತಮ್ಮ ಹಳ್ಳಿಗಳ ಸುತ್ತಮುತ್ತ ಇರುವ ಬೇಸಾಯಯೋಗ್ಯ ಸರಕಾರಿ ಪಾಳು ಭೂಮಿಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ಮುತುವರ್ಜಿಯಿಂದಾಗಿ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಹಿಡಿದು ಉತ್ತು ಬಿತ್ತಿ ಫಸಲು ಪಡೆದು ಒಂದು ಕನಿಷ್ಟ ಬಾಳನ್ನು ಗಳಿಸಲು ಹೋರಾಡಿದ ಜಿಲ್ಲೆಯ ಹಲವು ತಾಲೂಕುಗಳ ಮುಖ್ಯವಾಗಿ ಹಾನಗಲ್ ತಾಲ್ಲೂಕಿನ ಕೃಷಿ ಕೂಲಿಕಾರರ ಹೋರಾಟದ ಬಗ್ಗೆ ನಮ್ಮ ಓದುಗರಿಗೆ ತಿಳಿದಿದೆ. ಈ ಹೋರಾಟ ಪರ್ವದ ಮುಂದಿನ ಅಧ್ಯಾಯ ಈಗ ಆರಂಭವಾಗಿದೆ. ಈ ಬಗ್ಗೆ ಒಂದು ವರದಿ.

2 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರುವ ಹಾಗೂ 774.22 ಚ.ಕಿ.ಮಿ. ವಿಸ್ತೀರ್ಣವುಳ್ಳ ಹಾನಗಲ್ ಜಿಲ್ಲೆಯ ಒಂದು ದೊಡ್ಡ ತಾಲ್ಲೂಕು ಆಗಿದೆ. ಇಲ್ಲಿ ಬೇಸಾಯಗಾರರಿಗಿಂತ ಕೃಷಿ ಕೂಲಿಕಾರರ ಸಂಖ್ಯೆಯೇ ಹೆಚ್ಚು. ಈ ಕೃಷಿ ಕಾರ್ಮಿಕರು ಮೇ 12ರಿಂದ ತಹಸೀಲ್ದಾರರ ಕಚೇರಿಯ ಮುಂದೆ ಸಾಮೂಹಿಕ ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ. ತಾವು ಕಷ್ಟಪಟ್ಟು ಹದ ಮಾಡಿ ಉತ್ತು ಬಿತ್ತಿದ ಭೂಮಿಯು ಅವರ ಪಾಲಿಗೆ ಸಿಗದೆ ಬದಲಿಗೆ ಅರಣ್ಯ ಇಲಾಖೆಯಿಂದ, ಪೋಲೀಸರಿಂದ ಕಿರುಕುಳ, ಸುಳ್ಳು ಕೇಸುಗಳ ಬಳುವಳಿ ಬಂದಾಗ ಅದರ ವಿರುದ್ಧ ತಮ್ಮ ಬೇಡಿಕೆ ಇಟ್ಟು ಚಳುವಳಿ ಪ್ರಾರಂಭಿಸಿದ್ದಾರೆ.

ಮುಖ್ಯ ಬೇಡಿಕೆಗಳು

ತಾಲ್ಲೂಕಿನ ಕೃಷಿ ಕೂಲಿಕಾರರ ಮೇಲೆ ಹಾಕಲಾದ ಎಲ್ಲಾ ಕೇಸುಗಳನ್ನು ಕೈ ಬಿಡಬೇಕು.

ಜಲಸಿನ ಕೊಪ್ಪದ ಮೇಲೆ ಗುಂಡು ಹಾರಿಸಿದ ಅರಣ್ಯ ಇಲಾಖೆ ಸಿಬ್ಬಂದಿಯನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು. ಅರಣ್ಯದಿಂದ ಒಣ ಉರುವಲು ಕಟ್ಟಿಗೆ ತರಲು ಯಾವುದೇ ಪ್ರತಿಬಂಧಕೂಡದು.

ರಾಜಕೀಯ ಒತ್ತಡದಿಂದ ಕೂಲಿಕಾರರ ಮತ್ತು ಕಾರ್ಯಕರ್ತರ ಮೇಲೆ ನಡೆಯುತ್ತಿರುವ ಪೋಲೀಸರ ದೌರ್ಜನ್ಯ ನಿಲ್ಲಬೇಕು.

ಕೃಷಿ ಕೂಲಿಕಾರರು ಸಾಗುವಳಿ ಮಾಡುತ್ತಿರುವ ಜಮೀನಿನಲ್ಲಿ ಟ್ರೆಂಚ್ ಕಡಿಯುವುದು ಸಸಿಗಳನ್ನು ನೆಡುವುದು, ನಿವೇಶನ ಹಂಚುವುದಾಗಲೀ ಮಾಡಬಾರದು.

ಅರಣ್ಯ ಇಲಾಖೆಗೆ ವರ್ಗಾಯಿಸಲಾದ ಸಿ ಮತ್ತು ಡಿ ವರ್ಗದ ಭೂಮಿಯು ಎಲ್ಲಾ ಕೃಷಿ ಯೋಗ್ಯ ಭೂಮಿಯನ್ನು ಹಾಗೂ ತಾಲೂಕಿನ ಕೃಷಿಯೋಗ್ಯ ಭೂಮಿಯನ್ನು ಭೂ ಹೀನ ಬಡವರಿಗೆ ಹಂಚಬೇಕು.

ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಬೇಕು ಹಾಗೂ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಲು ಅವಧಿಯನ್ನು ಮತ್ತೆ ವಿಸ್ತರಿಸಬೇಕು ಎಂಬುವುದು ಕೂಲಿಕಾರರ ಪ್ರಮುಖ ಬೇಡಿಕೆಗಳು.

ಹಾನಗಲ್ ಕೃಷಿ ಕೂಲಿಕಾರರ ಚಳುವಳಿ

ಹಾನಗಲ್ ತಾಲ್ಲೂಕು ಪರಿಚಯ

ಜಿಲ್ಲೆಯ ಹಾನಗಲ್ ಒಟ್ಟು 774.22 ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು ಒಂದು ದೊಡ್ಡ ತಾಲ್ಲೂಕು ಆಗಿದೆ: ಜೊತೆಗೆ ಅರೆ ಮಲೆನಾಡು ಪ್ರದೇಶ ಕೂಡಾ ಹೌದು. ತಾಲೂಕಿನ ಭೂ ಪ್ರದೇಶ 77.525 ಹೆಕ್ಟೇರ್‌ಗಳು. ಸಾಗುವಳಿ ಭೂಮಿ 52.051 ಹೆಕ್ಟೇರ್. ಅರಣ್ಯ ಭೂಮಿ 8.364 ಹೆಕ್ಟೇರ್. ಸಾಗುವಳಿಗೊಳಪಡದ ಭೂಮಿ 4.138 ಹೆಕ್ಟೇರ್. ಬೀಳು ಭೂಮಿ 4.498 ಹೆಕ್ಟೇರ್. ಒಟ್ಟು ಜನಸಂಖ್ಯೆ 2,04,440 ಸಾಗುವಳಿದಾರರು 29,430, ಕೃಷಿ ಕೂಲಿಕಾರರು 35,470, ಶೇ. 66ರಷ್ಟು ಕುಟುಂಬಗಳು ತಲಾ 2 ಎಕರೆಗಿಂತ ಕಡಿಮೆ ಭೂಮಿ ಹೊಂದಿದ್ದು ಒಟ್ಟು ಸಾಗುವಳಿ ಭೂಮಿಯ ಶೇ. 28ರಷ್ಟು ಮಾತ್ರ ಪಡೆದ ಬಡ ರೈತರದ್ದಾಗಿದೆ.

ಬಡ ರೈತರಲ್ಲಿ, ಕೃಷಿ ಕೂಲಿಕಾರರಲ್ಲಿ ಬಹುಪಾಲು ಪರಿಶಿಷ್ಟ ಜಾತಿಗೆ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ್ದು ಬಡತನ ರೇಖೆಯ ಕೆಳಮಟ್ಟದಲ್ಲಿ ಬರುವವರು. ಈ ಜನರು ಭೂಮಿ ಇಲ್ಲದೆ ಕೂಲಿ ಇಲ್ಲದೆ, ಭೂಮಿ ಇದ್ದರೂ ನೀರಾವರಿ ಸೌಕರ್ಯವಿಲ್ಲದೆ ಹೊಟ್ಟೆಪಾಡಿಗಾಗಿ ದೂರದ ಕಾಫಿ ಸೀಮೆಗೋ ಅಥವಾ ಮಂಗಳೂರು, ಬೆಂಗಳೂರು, ಗೋವಾ, ಮುಂಬಯಿ ಮೊದಲಾದ ನಗರಗಳಿಗೆ ಗುಳೇ ಹೋಗುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗಿದ್ದು ಈಗ ಅವರ ಸಂಖ್ಯೆ 40 ಸಾವಿರಕ್ಕೇರಿದೆ. ಈ ಜನರ ಹೊಟ್ಟೆಪಾಡಿನ ವಲಸೆ ಜಿಲ್ಲೆಯ ಆಡಳಿತಕ್ಕಾಗಲೀ ಅಥವಾ ರಾಜ್ಯದ ಅಧಿಕಾರದ ಚುಕ್ಕಾಣಿಗಾಗಲಿ ಕಾಣುತ್ತಿಲ್ಲದಾಗಿದೆ.

ಭೂ ಹೋರಾಟದ ಹಿನ್ನೆಲೆ

ತಾಲ್ಲೂಕಿನ ಬಡ ಜನರು ತುತ್ತಿನ ಕೂಳಿಗಾಗಿ ಪಕ್ಕದ ಪಟ್ಟಣಗಳಿಗೆ, ರಾಜ್ಯಗಳಿಗೆ ವಲಸೆ ಹೋಗಿ ಊರೂರು ಅಲೆದು ಕೆಲಸ ಸಿಗದೆ ಸುಸ್ತಾಗಿ ವಾಪಸ್ಸಾದಾಗ ತಮ್ಮ ತಮ್ಮ ಗ್ರಾಮದ ಸುತ್ತಮುತ್ತ ಸಣ್ಣ ಪುಟ್ಟ ಗುಡ್ಡಗಳ ಓರೆಗಳಲ್ಲಿ ಲಭ್ಯವಿರುವ ಕೃಷಿ ಯೋಗ್ಯ ಭೂಮಿ ಇವರ ಕಣ್ಣಿಗೆ ಬಿತ್ತು. ಭೂಮಿಯು ಬೇಸಾಯ ಕಾಣದೆ ಇವರನ್ನು ಕೈ ಬೀಸಿ ಕರೆಯುತ್ತಿತ್ತು. ಅಲೆಮಾರಿ ಕೂಲಿಕಾರರಿಗೂ ಒಂದು ನೆಲೆ ಬೇಕಾಗಿತ್ತು.

ಭೂ ಹೀನರ ನೇತಾರರು ಹಾಗೂ ಕಮ್ಯುನಿಸ್ಟ್ ಪಕ್ಷದ ಮುಂದಾಳುಗಳು ಆದ ಕಾಂ.ಎ.ಕೆ.ಗೋಪಾಲನ್ ಮುಂತಾದವರ ಸಂಪರ್ಕ ಪಡೆದು 1960ರ ದಶಕದಲ್ಲಿ ಕೃಷಿ ಕೂಲಿಕಾರರು ಕೃಷಿಯೋಗ್ಯ ಭೂಮಿಯನ್ನು ಸಾಗುವಳಿ ಮಾಡಲಾರಂಭಿಸಿದರು. ಇದರಿಂದ ಕುಪಿತಗೊಂಡ ಆಡಳಿತ ವರ್ಗ ಹಾಗೂ ರೆವಿನ್ಯೂ ಅಧಿಕಾರಿಗಳು ಇವರಿಗೆ ಸಾಕಷ್ಟು ಕಿರುಕುಳ ನೀಡಿ ದಂಡ ವಿಧಿಸಿತು. ಪೋಲೀಸರಿಂದ ಬಂಧಿಸಲ್ಪಟ್ಟು ಜೈಲಿಗೂ ಹೋಗಬೇಕಾಯಿತು. ಇಂತಹವರಲ್ಲಿ ಹಿರೇಬಾಸೂರು, ಸೋಮಾಪುರ ಮೊದಲಾದ ಗ್ರಾಮಗಳ ಕೂಲಿಕಾರರು ಯಾರಿಗೂ ಅಂಜದೆ ತಾವು ಸಾಗುವಳಿ ಮಾಡಿದ ನೂರಾರು ಎಕರೆ ಭೂಮಿಯನ್ನು ಬಿಟ್ಟು ಕೊಡದಿರುವುದು ಅಭಿಮಾನದ ವಿಷಯವೇ ಸರಿ.

1980ರ ದಶಕದ ಬರಗಾಲದಿಂದಾಗಿ ಬಹುಪಾಲು ಕೃಷಿ ಕೂಲಿಕಾರರು ತಾವು ಸಾಗುವಳಿ ಮಾಡುತ್ತಿದ್ದ ಸರಕಾರಿ ಪಡುಭೂಮಿಯನ್ನು ಬಿಟ್ಟು ಉದ್ಯೋಗ ಅರಸಿ ವಲಸೆ ಹೊರಟ ಸಮಯದಲ್ಲಿ ಸರಕಾರ ಸಿ ಮತ್ತು ಡಿ ವರ್ಗಕ್ಕೆ ಸೇರಿದ ಹಾಗೂ ಜನ ವಸತಿ ಇಲ್ಲದ ಬೇಚಿರಾಕ ಗ್ರಾಮಗಳ ಕೃಷಿಯೋಗ್ಯವಾದ ಸಾವಿರಾರು ಎಕರೆ ಭೂಮಿಯನ್ನು ಅರಣ್ಯ ಬೆಳೆಸುವ ನೆಪದಲ್ಲಿ ಖಾಸಗಿ ಕೈಗಾರಿಕಾ ಉದ್ಯಮಿಗಳಿಗೆ ಬೇಕಾದ

ಕೊನೆಗೂ ಪಾಸಾದ ಕನಸಿನ ಬಜೆಟ್ಟು

ಪಿ.ಚಿದಂಬರಂ ಅವರು 1997ರ ಫೆಬ್ರವರಿ 28 ರಂದು ಮಂಡಿಸಿದ 1997-98 ರ ಕೇಂದ್ರ ಬಜೆಟ್ಟು ಕೊನೆಗೂ ಲೋಕಸಭೆಯಲ್ಲಿ ಹಣಕಾಸು ಮಸೂದೆಯಾಗಿ ಅನುಮೋದನೆ ಪಡೆಯಿತು. ಬಜೆಟ್ ಮಂಡನೆಯ ನಂತರ ಉಂಟಾದ ರಾಜಕೀಯ ಬಿಕ್ಕಟ್ಟುಗಳ ನಡುವೆ ಈ ಬಜೆಟ್ಟಿನ ಫಲಾನುಭವಿಯಾದ ಬಂಡವಾಳ ಶಾಹಿ ವರ್ಗ ಬಜೆಟ್ಟಿನ ಗತಿ ಏನಾಗುವುದೋ ಎಂದು ತೀವ್ರ ಆತಂಕ ವ್ಯಕ್ತಪಡಿಸಿತ್ತು. ಈ ವರ್ಗದ ಪ್ರತಿನಿಧಿಗಳು ಪಿ.ಚಿದಂಬರಂ ಅವರು ಮತ್ತೆ ತಮ್ಮ ಹುದ್ದೆಗೆ (ಹಣಕಾಸು ಮಂತ್ರಿ ಹುದ್ದೆಗೆ) ಮರಳಿ ಈ ಬಜೆಟ್ ಪಾಸಾಗಬೇಕೆಂದು ಶತಾಯಗತಾಯ ಪ್ರಯತ್ನ ಮಾಡಿದ್ದರು. ರಾಷ್ಟ್ರಾಧ್ಯಕ್ಷರನ್ನು ಭೇಟಿಯಾಗಿ ಈ ವಿಷಯದಲ್ಲಿ ಒತ್ತಾಯ ತಂದಿದ್ದರು. ಈಗಂತೂ ಅವರು ನಿರುಮ್ಮಳರಾಗಿರುತ್ತಾರೆ.

ಈ ಬಜೆಟ್ಟು ಶ್ರೀಮಂತರ ಪರವಾದದ್ದು ಆದ್ದರಿಂದಲೇ ಇದರಲ್ಲಿ ಬಹಳ ಬದಲಾವಣೆ ಆಗಬೇಕೆಂದು ಸಿಪಿಐ(ಎಂ) ಮತ್ತು ಎಡ ಪಕ್ಷಗಳು ಒತ್ತಡ ತಂದವು. ಆದರೆ ಚಿದಂಬರಂ ಮಹಾಶಯ ಬಂಡವಾಳಿಗರ ಹೊಗಳಿಕೆಯೆಂಬ ಮದ್ಯದ ಅಮಲಿನಿಂದ ಬಿಡುಗಡೆಯಾಗಲೇ ಇಲ್ಲ. ಆದ್ದರಿಂದ ಎಡಪಕ್ಷಗಳು ಸೂಚಿಸಿದ ಯಾವುದೇ ಬದಲಾವಣೆಗಳೂ ಹಣಕಾಸು ಮಸೂದೆಯಲ್ಲಿ ಒಳಗೊಳ್ಳಲೇ ಇಲ್ಲ.

ತೀರ ಶ್ರೀಮಂತರ ಮೇಲೆ ಅಂದರೆ ವಾರ್ಷಿಕ ವರಮಾನ ಮೂರುವರೆ ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ಇರುವವರ ಮೇಲೆ ಹೆಚ್ಚಿನ ತೆರಿಗೆ ವಿಧಿಸಿ, ಕಂಪನಿಗಳ ಮೇಲೂ ಹೆಚ್ಚಿನ ತೆರಿಗೆ ವಿಧಿಸಿ ಮತ್ತು ಸಾಮಾಜಿಕ ವಲಯಗಳಲ್ಲಿ ಹೆಚ್ಚಿನ ಖರ್ಚು ಮಾಡಿ ಎಂದು ಎಡ ಪಕ್ಷಗಳು ತೀವ್ರ ಒತ್ತಾಯ ಮಾಡಿದ್ದವು. ಈ ಸರಕಾರ ಬೆಲೆಯೇರಿಕೆಯನ್ನಂತೂ ತಡೆಯದು. ಬೆಲೆಗಳು ಏರುತ್ತಲೇ ಇರುವಾಗ ಬಡ ಜನ ಸಾಮಾನ್ಯರ ಮೇಲಿನ ಹೊರ ಹೆಚ್ಚುತ್ತಾ ಹೋಗುತ್ತದೆ. ಅನ್ನದ ಅಗುಳುಗಳನ್ನು ಎಣಿಸಿ ತಿನ್ನಬೇಕಾದವನ ಪರಿಸ್ಥಿತಿ ಈಗ ಅಗುಳುಗಳು ಕಡಿಮೆಯಾದಂತೆಲ್ಲ ಹೆಚ್ಚೆಚ್ಚು ಹದಗೆಡುತ್ತ ಹೋಗುತ್ತದೆ. ಹೀಗಿರುವಾಗ ಸಾಮಾಜಿಕ ವಲಯಗಳಾದ ಸಾರ್ವಜನಿಕ ವಿತರಣೆ, ಪ್ರಾಥಮಿಕ ಆರೋಗ್ಯ ಮತ್ತು ಶಿಕ್ಷಣಗಳ ಮೇಲೆ ಹೆಚ್ಚು ವಿನಿಯೋಗ ಮಾಡುವಂತಾದರೆ ಈ ಬಡಜನರಿಗೆ ಅಷ್ಟರ ಮಟ್ಟಿಗೆ ಪರಿಹಾರ ದೊರೆತಂತಾಗುತ್ತಿತ್ತು. ಆದ್ದರಿಂದಲೇ ಈ ಒತ್ತಾಯ ಮಾಡಲಾಗಿತ್ತು.

ಆದರೆ ಚಿದಂಬರಂ ಮಹಾಶಯರು ಇದಕ್ಕೊಪ್ಪಲೇ ಇಲ್ಲ. ಬಡವರ ಹೊಟ್ಟೆಯ ಮೇಲೆ ಹೊಡೆಯುವುದೇ ನನ್ನ ಜನ್ಮದ ಉದ್ದೇಶ ಎಂಬಂತೆ ವರ್ತಿಸಿದರು. ಮಸೂದೆ ಅನುಮೋದನೆ ಪಡೆಯಿತು.

ಇಂತಹ ಮಸೂದೆಗೆ ಎಡಪಕ್ಷಗಳು ಅದರಲ್ಲೂ ಸಿಪಿಐ(ಎಂ) ಯಾಕೆ ಒಪ್ಪಿಗೆ ನೀಡಿತು? ಇದು ಬಹಳ ಜನ ಕೇಳುವ ಪ್ರಶ್ನೆ. ಯಾಕೆಂದರೆ ಈಗ ಮಸೂದೆಯ ವಿರುದ್ಧ ಎಡಪಕ್ಷಗಳು ಮತ ಚಲಾಯಿಸುವುದೆಂದರೆ ಸರಕಾರದ ವಿರುದ್ಧವೇ ಮತ ಚಲಾಯಿಸಿದಂತೆ. ಇದರಿಂದಾಗಿ ಸರಕಾರ ಬಿದ್ದರೆ ಕೋಮು ಶಕ್ತಿಗಳು ತೋಳಗಳಂತೆ ಕಾದು ಕೂತಿವೆ. ಕೋಮು ಶಕ್ತಿಗಳು ಈ ಹಣಕಾಸು ಮಸೂದೆ ನೀಡುವುದಕ್ಕಿಂತ ಹೆಚ್ಚು ನೋವು ನೀಡಬಲ್ಲವು. ಜನಸಾಮಾನ್ಯರನ್ನು ಸಾವು/ನೋವಿನ ಕೂಪಕ್ಕೆ ತಳ್ಳಬಲ್ಲವು. ಆದ್ದರಿಂದ ಈ ಎರಡು ಅನಿಷ್ಟಗಳ ನಡುವೆ ಒಂದರ ಆಯ್ಕೆಗೆ ಅವಕಾಶವಿತ್ತು. ಕಡಿಮೆ ಅನಿಷ್ಟದ ಆಯ್ಕೆಮಾಡಿದವು ಎಡಪಕ್ಷಗಳು.

ಜನ ಸಾಮಾನ್ಯರಿಗೆ ಹೋರಾಟದ ರಹದಾರಿಯೇ ಗತಿ ಈಗ. ಹಣಕಾಸು ಮಸೂದೆಯ ಅನುಮೋದನೆ ಆಗಿದೆ. ಆದರೆ ಅದರೊಳಗಿನ ಜನವಿರೋಧಿ ನೀತಿಗಳ ವಿರುದ್ಧ ಹೋರಾಟ ತೀವ್ರವಾಗಬೇಕಾಗಿದೆ. ಅಲ್ಲವೆ?

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಹೆಚ್ಚಿನ ಲಾಭ ತಂದ ಸಾರ್ವಜನಿಕ ವಲಯದ ಉದ್ದಿಮೆಗಳು

ಸಾರ್ವಜನಿಕ ವಲಯವನ್ನೇ ತೆಗಳುವ ಈ ದಿನಗಳಲ್ಲಿ ಕೇಂದ್ರ ಸರಕಾರದ ಸ್ವಾಮ್ಯದ ಉದ್ದಿಮೆಗಳು 1995-96 ರ ಸಾಲಿಗೆ 9788 ಕೋಟಿ ರೂಪಾಯಿಗಳಷ್ಟು ಅಂದರೆ ಶೇ 20.4 ರಷ್ಟು ಲಾಭ ಹೆಚ್ಚಿಸಿಕೊಂಡವು. ಇವುಗಳಲ್ಲಿನ ಹೂಡಿಕೆ ಬರೀ ಶೇ 3.08 ರಷ್ಟು ಮಾತ್ರ ಹೆಚ್ಚಾಗಿದೆ.

ಒಟ್ಟು 134 ಸಾರ್ವಜನಿಕ ವಲಯದ ಉದ್ದಿಮೆಗಳು ಲಾಭ ತೋರಿಸಿವೆ. ಇದೇ ರೀತಿ ಹಾನಿ ಮಾಡುತ್ತಿರುವ ಉದ್ದಿಮೆಗಳ ಸಂಖ್ಯೆಯೂ ಕಡಿಮೆಯಾಗಿದೆ.

ಇದರ ಹಿನ್ನಲೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಆಳುವ ವರ್ಗದ ಸರಕಾರ ಈ ಉದ್ದಿಮೆಗಳನ್ನು ಬಂಡವಾಳಿಗರ ಲಾಭಕ್ಕಾಗಿ ಯದ್ವತದ್ವಾ ಬಳಸಿಕೊಂಡಿರುವಾಗ, ಬಳಸಿಕೊಳ್ಳುತ್ತಿರುವಾಗಲೂ ಈ ಉದ್ದಿಮೆಗಳು ಲಾಭ ತೋರಿಸುತ್ತಿರುವುದು ಸಾಮಾನ್ಯ ವಿಷಯವೇನಲ್ಲ.

ಪರಿಸ್ಥಿತಿ ಹೀಗಿರುವಾಗ ಸರಕಾರ ಸರಕಾರಿ ಉದ್ದಿಮೆಗಳ ಮಾರಾಟಕ್ಕೆ ಒಂದು ಸಮಿತಿ ನೇಮಿಸಿದೆ. ಈ ಸಮಿತಿ ದಿನನಿತ್ಯ ಸರಕಾರಿ ಉದ್ದಿಮೆಗಳ ಮಾರಾಟದ ತಯಾರಿ ಮಾಡುತ್ತಲೇ ಇದೆ. ಲಕ್ಷ ಲಕ್ಷ ಜನರ ಉದ್ಯೋಗಗಳನ್ನು ನಷ್ಟಗೊಳಿಸಲು ಖಾಸಗಿಯವರಿಗೆ ಲಾಭದ ಕೊಳ್ಳೆ ಹೊಡೆಯಲು ಅನುವು ಮಾಡಿಕೊಡುವುದೇ ಇದರ ಹಿಂದಿನ ಉದ್ದೇಶ.

ಮಲತಾಯಿ ಪೋಷಣೆಯಲ್ಲಿ ಸೊರಗಿ ಸುಣ್ಣವಾದ ಐಟಿಐ

ಸಾವಿರದ ಒಂಬೈನೂರ ತೊಂಬತ್ತ ಮೂರು-ತೊಂಬತ್ತ ನಾಲ್ಕರ ಸಾಲಿನಲ್ಲಿ 84.35 ಕೋಟಿ ರೂಪಾಯಿಗಳಷ್ಟು ಲಾಭ ಮಾಡಿದ ಐಟಿಐ ಎಂಬ ಸಾರ್ವಜನಿಕ ವಲಯದ ಉದ್ದಿಮೆ 1994-95 ರ ಸಾಲಿನಲ್ಲಿ 81.91 ಕೋಟಿ ರೂಪಾಯಿಗಳ ಹಾಗೂ 1995-96 ರ ಸಾಲಿನಲ್ಲಿ 1283.96 ಕೋಟಿ ರೂಪಾಯಿಗಳ ಹಾನಿ ಮಾಡಿದ್ದೇಕೆ?

ಈ ಹಾನಿ ಟೆಲಿಕಾಂ ಇಲಾಖೆಯ ಮಲತಾಯಿ ಧೋರಣೆಯಿಂದಾಗಿ ಆಗಿದ್ದು ಎಂದಿದೆ ಸಾರ್ವಜನಿಕ ವಲಯದ ಉದ್ದಿಮೆಗಳ ಮೇಲಿನ ಸಂಸದರ ಸಮಿತಿ. ಸಮಿತಿಯ ಪ್ರಕಾರ ಟೆಲಿಕಾಂ ಇಲಾಖೆ ಮತ್ತು ಐಟಿಐ ಎರಡೂ ಕೇಂದ್ರ ಸಂಪರ್ಕ ಮಂತ್ರಾಲಯದ ಕೆಲಸ ಮಾಡುತ್ತವೆ. ಆದರೆ ಟೆಲಿಕಾಂ ಇಲಾಖೆ ಐಟಿಐಗೆ ಸಹಾಯ ಮಾಡುವ ಬದಲು ಅದನ್ನು ರೋಗಗ್ರಸ್ತಗೊಳಿಸಿತು.

ಐಟಿಐ ನಷ್ಟ ಮಾಡುವುದಕ್ಕೆ ಮುಖ್ಯ ಕಾರಣಗಳೇನೆಂದರೆ ಟೆಲಿಕಾಂ ಯಂತ್ರೋಪಕರಣದ ಬೆಲೆಗಳಲ್ಲಿ ಕಡಿತ, ಆರ್ಡರುಗಳು ಕಡಿಮೆಯಾದದ್ದು, ಹೆಚ್ಚಿನ ಬಡ್ಡಿದರ, ಟೆಲಿಸಂಪರ್ಕ ವಲಯವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ತೆರೆದದ್ದು ಇತ್ಯಾದಿಗಳೆಲ್ಲ ಸೇರಿವೆ.

ಐಟಿಐ ಬಗ್ಗೆ ಎಲ್ಲ ವಿವರಗಳ ಅರಿವೂ ಇದ್ದ ಟೆಲಿಕಾಂ ಇಲಾಖೆ ಉದಾರೀಕರಣದ ಕ್ರಮಗಳನ್ನು ಕೈಗೊಳ್ಳುವುದರಿಂದ ಐಟಿಐನ ಮೇಲೆ ಆಗಬಹುದಾದ ಪರಿಣಾಮಗಳನ್ನು ಸ್ಪಷ್ಟವಾಗಿ ಊಹಿಸಬಹುದಾಗಿತ್ತು. ಆದರೆ ಅದಕ್ಕೆ ಅದು ಬೇಕಾಗಿರಲಿಲ್ಲ.

ಖಾಸಗಿಯವರಿಗೆ/ ಬಹುರಾಷ್ಟ್ರೀಯ ಕಂಪನಿಗಳಿಗೆ ಲಾಭ ಮಾಡಿಕೊಡುವುದೇ ಅದರ ಉದ್ದೇಶವಾಗಿತ್ತು. ಐಟಿಐ ಸೊರಗಿ ಸತ್ತರೆ ಅದಕ್ಕೇನು ಅಲ್ಲವೇ?

ಮೊಸಳೆ ಕಣ್ಣೀರಿನ ಹಣಕಾಸು ಮಂತ್ರಿ

ಕೇಂದ್ರ ಹಣಕಾಸು ಮಂತ್ರಿ ಪಿ.ಚಿದಂಬರಂ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಅವರ ದುಃಖ ಅನಾವಶ್ಯಕ ಕ್ಷೇತ್ರಗಳಲ್ಲಿ ಸಹಾಯಧನ ನೀಡುತ್ತಿದ್ದೇವೆ. ಇದನ್ನು ಕಡಿಮೆಮಾಡಿ ಅವಶ್ಯಕ ಕ್ಷೇತ್ರಗಳಿಗೆ ನೀಡಬೇಕೆಂಬುದು. ಆದರೆ ಅವರ ದೃಷ್ಟಿಯಲ್ಲಿ ಯಾವುದು ಅವಶ್ಯಕ ಯಾವುದು ಅನಾವಶ್ಯಕ? ಯಾವುದು ಹಕ್ಕಿನ ಧನ ಯಾವುದು ಸಹಾಯಧನ?

ಪಿ.ಚಿದಂಬರಂ ಈಗಾಗಲೇ ಸಂಸದರಿಗೆ ಒಂದು ಶ್ವೇತಪತ್ರವನ್ನು ನೀಡಿದ್ದಾರಂತೆ. ರಾಷ್ಟ್ರ ಮಟ್ಟದ ಚರ್ಚೆ ನಡೆಸುವ ಹುನ್ನಾರ ಅವರದು. ಈ ಶ್ವೇತ ಪತ್ರದ ಪ್ರಕಾರ ಈಗ ವಿವಿಧ ರೂಪಗಳಲ್ಲಿ ಸರಕಾರ ನೀಡುತ್ತಿರುವ ಸಹಾಯಧನ ದೇಶದ ಒಟ್ಟುತ್ಪಾದನೆಯ ಶೇ 15 ರಷ್ಟಂತೆ. ರೂಪಾಯಿಗಳಿಗೆ ಪರಿವರ್ತಿಸಿದರೆ ಇದು 18500 ಕೋಟಿ ರೂಪಾಯಿಗಳಷ್ಟಾಗುತ್ತದಂತೆ. ನೋಡಿಸ್ವಾಮಿ ಎಷ್ಟೊಂದು ಹಣ ಪೋಲು ಮಾಡುತ್ತಿದ್ದೇವೆ ನಾವು? ಹೀಗಾದರೆ ನಾವು ಉದ್ಧಾರವಾದೇವೆ? ಎಂಬುದು ಕೇಂದ್ರಹಣಕಾಸು ಮಂತ್ರಿಗಳ ಅಳಲು.

ಈ ಸಹಾಯ ಧನಗಳ ವಿವರ ನೋಡಿ. ಆಹಾರ, ರಸಗೊಬ್ಬರ, ರಫ್ತು ಅಭಿವೃದ್ಧಿ ಇತ್ಯಾದಿಗಳಿಗೆ 1997-98 ರಲ್ಲಿ ನೀಡುವ ಸಹಾಯಧನ 17130 ಕೋಟಿ ರೂಪಾಯಿಗಳಾಗುತ್ತದಂತೆ. ಇದಲ್ಲದೆ ಪರೋಕ್ಷವಾಗಿ ನೀಡುವ ಸಹಾಯಧನ ಕೃಷಿ ಮತ್ತು ಇತರ ವಲಯಗಳಿಗೆ 21854 ಕೋಟಿ ರೂಪಾಯಿಗಳು. ಇದಲ್ಲದೆ ವಿವಿಧ ತೈಲೋತ್ಪನ್ನಗಳಿಗೆ ಸರಕಾರ ನೀಡುವ ಸಹಾಯಧನ 1800 ಕೋಟಿ ರೂಪಾಯಿಗಳಿಗೂ ಹೆಚ್ಚಂತೆ.

ಇರಬಹುದು. ಆದರೆ ಕೇಂದ್ರ ಸರಕಾರ ಈ ವರ್ಷ ಬಂಡವಾಳಿಗರಿಗೆ ಆದಾಯ ತೆರಿಗೆ ಕಡಿತ, ಅಬ್ಕಾರಿ ಸುಂಕ ಕಡಿತ, ಆಮದು ಸುಂಕ ಕಡಿತ, ಇತ್ಯಾದಿಗಳಿಗೆಲ್ಲ ನೀಡಿದ ಸಹಾಯಧನವೆಷ್ಟು? ಇದು ಬರೀ ತೆರಿಗೆ ಕಡಿತ ಹೊರತು ಸಹಾಯಧನ ಅಲ್ಲ ಎನ್ನುತ್ತಾರೆ. ಆದರೆ ಈ ಕಡಿತಗಳನ್ನು ನೀಡುವುದರಿಂದಲೆ ಸರಕಾರಕ್ಕೆ ಸಂಪನ್ಮೂಲಗಳ ಕೊರತೆ ತನ್ಮೂಲಕ ಹಣಕಾಸು ಕೊರತೆ ಕಂಡು ಬರುತ್ತಿರುವುದು ತಾನೆ? ಈ ಕಡಿತಗಳನ್ನು ನೀಡುವ ಅವಶ್ಯಕತೆಯೇನಿತ್ತು.

ಇದು ದೇಶದ ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸುವ ಸಲುವಾಗಿ ನೀಡಿದ್ದು ಎನ್ನುತ್ತಾರೆ ಅವರು. ಹೊಟ್ಟೆ ತುಂಬಿದವರಿಗೆ ರಿಯಾಯಿತಿ ತೆರಿಗೆ ಕಡಿತ ನೀಡಿದರೆ ಅದರಿಂದ ದೇಶದ ಬೆಳವಣಿಗೆ ಆಗುತ್ತದೆ. ಆದರೆ ದೇಶದ ಬಡ ದುಡಿವ ಜನತೆಗೆ ಅವರ ಕನಿಷ್ಟ ಅವಶ್ಯಕತೆಗಳನ್ನು ಕೊಡ ಹೋದರೆ ಮಾತ್ರ ದೇಶ ದಿವಾಳಿಯೆದ್ದು ಹೋಗುತ್ತದೆ.

ಹೇಗಿದೆ ಈ ತರ್ಕ? ಈ ತರ್ಕದ ಹಿಂದಿರುವ ಸಿದ್ಧಾಂತ ಎಂತಹದ್ದು?

ಈ ಕಣ್ಣೀರು ಮೊಸಳೆ ಕಣ್ಣೀರಲ್ಲವೇ?

ನೀಲಗಿರಿ, ಅಕೆಶಿಯಾ ಮೊದಲಾದ ಮರಗಳು ತಲೆ ಎತ್ತಿದವು.

ಆದರೆ ಕೃಷಿ ಕೂಲಿಕಾರರು ಹಾಗೂ ಸಾಗುವಳಿದಾರರು ತಾವು ಕಳೆದುಕೊಂಡ ಭೂಮಿಯನ್ನು ಮರಳಿ ಪಡೆಯಲು ಯತ್ನಿಸಿದಾಗಲೆಲ್ಲಾ ಅರಣ್ಯ ಇಲಾಖೆ ಸಿಬ್ಬಂದಿ ಅವರನ್ನು ಬೆದರಿಸಿ ಅವರಿಂದ ಹಣ ಕಿತ್ತುಕೊಳ್ಳಲು ಹೇಸುತ್ತಿರಲಿಲ್ಲ.

ಕರ್ನಾಟಕ ಪ್ರಾಂತ ರೈತ ಸಂಘದ ಪ್ರವೇಶ

ಇಂತಹ ಸಮಯದಲ್ಲಿ ಮಧ್ಯಪ್ರವೇಶಿಸಿದ ಕರ್ನಾಟಕ ಪ್ರಾಂತ ರೈತ ಸಂಘ ರೈತರನ್ನು ಸಂಘಟಿಸುವ ಜೊತೆಗೆ ಕೃಷಿ ಕೂಲಿಕಾರರನ್ನು ಸಂಘಟಿಸುತ್ತಾ ಅವರ ಬೇಡಿಕೆಗಳಿಗಾಗಿ ಚಳುವಳಿಯನ್ನೇ ತೀವ್ರಗೊಳಿಸಿದಾಗ ಏಪ್ರಿಲ್ 14ರಂದು 90ಕ್ಕಿಂತ ಹಿಂದಿನ ಸಾಗುವಳಿಯನ್ನು ಸಕ್ರಮಗೊಳಿಸಲು ಸರಕಾರ ನಿರ್ಧರಿಸಿತು.

ತಾಲ್ಲೂಕಿನ ಅನೇಕ ಗ್ರಾಮಗಳ ಬಗರ್ ಹುಕುಂ ಸಾಗುವಳಿದಾರರು ಅರ್ಜಿ ಸಲ್ಲಿಸಿದರೂ ಅವರಿಗೆ ಇಲ್ಲಿಯವರೆಗೂ ಪಟ್ಟಾ ಸಿಕ್ಕಿಲ್ಲ. ಕೆಲ ಕಡೆ ಆಳುವ ಪಕ್ಷಗಳ ಪುಡಾರಿಗಳ ವಶಾಲತ್ತಿನಿಂದಾಗಿ ಸಾಗುವಳಿ ಮಾಡಿದ ಭೂಮಿಯನ್ನೇ ಸಾಗುವಳಿ ಮಾಡದವರ ಹೆಸರಿಗೆ ಕೊಟ್ಟಿರುವುದು ಕಂಡು ಬಂದಿತ್ತು.

3000 ಎಕರೆ ಭೂಮಿ ಮರು ವಶ

ಅನ್ಯಾಯ ಮತ್ತು ದೌರ್ಜನ್ಯಗಳಿಂದ ಕಂಗಾಲಾದ ಕೃಷಿ ಕೂಲಿಕಾರರು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಡಿಯಲ್ಲಿ ಸಂಘಟಿತರಾಗಿ ಭೂ ಹೋರಾಟವನ್ನು ನಡೆಸಲು ಸಂಕಲ್ಪ ಮಾಡಿದರು. 1995ರಲ್ಲಿ ನಡೆಸಲಾದ ಸಾಮೂಹಿಕ ಹೋರಾಟದಲ್ಲಿ ಕಾಡಶೆಟ್ಟಿಹಳ್ಳಿ, ಗುಂಡೂರು, ಬಾಳು ಬೀಡು, ಮುಳಥಳ್ಳಿ, ಹಸನಾಬಾದಿ, ನೆಗೂಣೆ, ಜಾನಗುಂಡಿ, ಬಾಳೆಹಳ್ಳಿ, ಹನುಮಕೊಪ್ಪ, ಜಂಗಿನಕೊಪ್ಪ, ದಶರಥ ಕೊಪ್ಪ ಮುಂತಾದ ಗ್ರಾಮಗಳಲ್ಲಿ ಸುಮಾರು 3 ಸಾವಿರ ಎಕರೆ ಭೂಮಿಯನ್ನೇ ಮರು ವಶ ಮಾಡಿಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ ಪಕ್ಕದ ಬ್ಯಾಡಗಿ ತಾಲ್ಲೂಕಿನ ಕಾಸಂಬಿ, ಕಾಗಿನೆಲೆ ಗ್ರಾಮಗಳಲ್ಲಿಯೂ ಭೂಮಿ ಮರು ವಶ ಚಳುವಳಿ ಯಶಸ್ವಿಯಾಗಿ ನಡೆಯಿತು. ಮುಳಥಳ್ಳಿ ಮತ್ತು ಗುಂಡೂರು ಗ್ರಾಮಗಳ 100ಕ್ಕೂ ಹೆಚ್ಚು ಕೂಲಿಕಾರರು ಹಕ್ಕಲಗೌಡ ಮಾಲೀಕರ ನೇತೃತ್ವದಲ್ಲಿ ಜೈಲು ವಾಸ ಅನುಭವಿಸಿದರು.

ಎರಡನೇ ಹಂತದ ಭೂಮಿ ಮರು ವಶ ಹಾಗೂ ಈಗಾಗಲೇ ಮರು ವಶಪಡಿಸಿಕೊಂಡ ಭೂಮಿಯಲ್ಲಿ ಬೀಜ ಬಿತ್ತುವ ಚಳುವಳಿಗೆ 1996ರಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಕರೆ ನೀಡಿತು. ಆದರೆ ಈ ಸಲ ಚಳುವಳಿಯನ್ನು ಹತ್ತಿಕ್ಕಲು ದೃಢವಾಗಿ ನಿರ್ಧರಿಸಿದ ಅರಣ್ಯ ಇಲಾಖೆಯು ಕಾರ್ಯಕರ್ತರನ್ನು ನಡು ದಾರಿಯಲ್ಲೇ ಅಪಹರಿಸಿ ಹಲ್ಲೆ ನಡೆಸಿತು. ಜಂಗಿನಕೊಪ್ಪದ ಕೂಲಿಕಾರರ ಮೇಲೆ ಗುಂಡು ಹಾರಿಸಿ ಕೊಲ್ಲುವ ವಿಫಲ ಯತ್ನ ನಡೆಸಿತು. ಮಹಿಳಾ ಕೃಷಿ ಕೂಲಿಕಾರರಗುಡಿಸಲೊಂದಕ್ಕೆ ಬೆಂಕಿ ಬಿದ್ದಾಗ ಸಿಕ್ಕಿದ್ದೆಲ್ಲಾ ದೋಚಿಕೊಂಡು ಹೋದರು. ಎಲ್ಲಿವಾಳದಲ್ಲಿ ಕೂಲಿಕಾರರ ಮನೆಗೆ ನುಗ್ಗಿ ಮಕ್ಕಳು ಮುದುಕರು ಎನ್ನದೆ ಬಂಧಿಸಿದರು. ಮುಂಧಾಳು ಫಕ್ಕೀರಪ್ಪನವರನ್ನು ಜಾತಿ ಹೆಸರಿನಿಂದ ನಿಂದಿಸಿ ಊರಾಚೆ ಬಿಟ್ಟು ಬಂದರು.

ಸಂಘದ ಮುಖಂಡರಾದ ನಿತ್ಯಾನಂದಸ್ವಾಮಿ ಫಕ್ಕೀರಪ್ಪ ಹೋತನಹಳ್ಳಿ, ವಿಶ್ವನಾಥ ತುಪ್ಪದ, ಹಕ್ಕಲಗೌಡ ಪಾಟೀಲರೂ ಸೇರಿದಂತೆ 500 ಕ್ಕೂ ಹೆಚ್ಚು ಸ್ತ್ರೀಪುರುಷ ಕೂಲಿಕಾರರನ್ನು ಬಂಧಿಸಿ 3 ವಾರಗಳ ಕಾಲ ಜೈಲು ವಾಸ ವಿಧಿಸಿದರು. ಹಿಂದಿನಂತೆಯೇ ಸುಳ್ಳು ಕೇಸು ದಾಖಲಿಸಿ ಕೂಲಿ ಕಳೆದುಕೊಂಡು ಅಲೆಯುವಂತೆ ಮಾಡಿದರು.

ಭೂಮಿ ವಿತರಣೆಗೆ ಭರವಸೆ

ಕೂಲಿಕಾರರ ಮೇಲೆ ನಡೆಸಲಾದ ದೌರ್ಜನ್ಯ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಗಳ ವಿರುದ್ಧ ಹುಬ್ಬಳ್ಳಿ, ಹಾವೇರಿ, ಹರಿಹರ ಸೇರಿದಂತೆ ರಾಜ್ಯದ ವಿವಿದೆಡೆ ಪ್ರತಿಭಟನೆ ವ್ಯಕ್ತಗೊಂಡು ಹಾಗೂ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಕಾಂ.ಜಿ.ಎನ್. ನಾಗರಾಜ್ ಮತ್ತು ಸಿಪಿಐ(ಎಂ) ಶಾಸಕರಾದ ಕಾಂ.ಜಿ.ವಿ.ಶ್ರೀರಾಮ ರೆಡ್ಡಿಯವರ ಮಧ್ಯಪ್ರವೇಶದಿಂದಾಗಿ ಕ್ಷೇತ್ರದ ಶಾಸಕರು ಹಾಗೂ ಲೋಕೋಪಯೋಗಿ ಸಚಿವರೂ ಆದ ಸಿ.ಎಂ.ಉದಾಸಿಯವರ ಸಂಧಾನದ ಮೂಲಕ ಭೂಮಿ ಮರು ವಿತರಣೆ ಮಾಡುವುದಾಗಿ ಭರವಸೆ ನೀಡಿದರು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಕಾಂ.ಸುನೀತ್ ಛೋಪ್ರಾ ಜಿಲ್ಲೆಗೆ ಭೇಟಿ ನೀಡಿ ಬೇಡಿಕೆಗಳು ಈಡೇರದಿದ್ದರೆ ಹೋರಾಟ ಇನ್ನೂ ತೀವ್ರಗೊಳ್ಳುವುದು ಎಂದು ಎಚ್ಚರಿಸಿದರು. ಇದುವರೆವಿಗೂ ರಾಜ್ಯ ಸರಕಾರ ಜಿಲ್ಲೆಯ ಹಾನಗಲ್ ಮೊದಲಾದ ತಾಲ್ಲೂಕುಗಳಲ್ಲಿ ಬಡ ಕೂಲಿಕಾರರು ಸಾಗುವಳಿ ಮಾಡುವ ಭೂಮಿಯನ್ನೇ ಸಕ್ರಮಗೊಳಿಸಲು ಮುಂದಾಗಿಲ್ಲ. ಬದಲಾಗಿ ಸಾವಿರಾರು ಎಕರೆ ಅರಣ್ಯ ಭೂಮಿಯನ್ನು ಶ್ರೀಮಂತ ಕಾಫಿ ಬೆಳೆಗಾರರಿಗೆ ಸಕ್ರಮಗೊಳಿಸಿದೆ. ಇದರಿಂದ ರೋಸಿ ಹೋದ ಕೂಲಿಕಾರರು ಮೇ 12ರಿಂದ ಸಾಮೂಹಿಕ ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ.

ಪ್ರಚಾರ ಪ್ರಕ್ಷೋಭೆ

ಕೃಷಿ ಕೂಲಿಕಾರರ ಸಾಮೂಹಿಕ ಸರದಿ ಉಪವಾಸ ಸತ್ಯಾಗ್ರಹಕ್ಕೆ ಪೂರ್ವಭಾವಿಯಾಗಿ ಮೇ 10ರಿಂದ 11ರವರೆಗೆ ಎಲ್ಲಾ ಹಳ್ಳಿಗಳಲ್ಲಿ ಭರದಿಂದ ಪ್ರಚಾರ, ಸಭೆಗಳನ್ನು ನಡೆಸಿ ಸಂಘದ ಸದಸ್ಯರ ಜೊತೆಗೆ ಅವರ ಕುಟುಂಬದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿ, ಗ್ರಾಮಸ್ಥರ ಸಹಾನುಭೂತಿ ಪಡೆದಿದೆ. ಮೇ 4ರಿಂದ 18ರವರೆಗೆ ಸಾಂಸ್ಕೃತಿಕ ತಂಡ ಸಮುದಾಯದ ನೇತೃತ್ವದಲ್ಲಿ ಈ ಹೋರಾಟದ ಕುರಿತು ಹಾಡುಗಳು, ಬೀದಿ ನಾಟಕಗಳು ಹಾಗೂ ಸಾಂಸ್ಕೃತಿಕ ಜಾಥಾ ನಡೆಸಿ ಜನಗಳಿಗೆ ವಿವರಿಸಿತು.

ಸೌಹಾರ್ದ ಸಮಿತಿ

ಈ ಹೋರಾಟಕ್ಕೆ ಬೆಂಬಲವಾಗಿ ಒಂದು ಸೌಹಾರ್ದ ಸಮಿತಿ ರಚಿಸಿದ್ದು ಸಿಐಟಿಯುವಿನ ವಿವಿಧ ಸಂಘಟನೆಗಳು, ವಿಮಾ, ಟೆಲಿಕಾಂ, ಬ್ಯಾಂಕ್, ಮೈಸೂರು ಕಿರ್ಲೋಸ್ಕರ್, ಗ್ರಾಮ ಪಂಚಾಯತ್, ಎಂ.ಜಿ.ಬ್ಯಾಂಕ್, ಪಿಯರ್‌ಲೆಸ್ ಮುಂತಾದ ಕಾರ್ಮಿಕ ಸಂಘಗಳು ಹಾಗೂ ಸಮುದಾಯ, ಎಸ್ಎಫ್ಐ, ಡಿವೈಎಫ್ಐ, ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರ, ಶಿಕ್ಷಕರ ಸಂಘ ಒಳಗೊಂಡಿದೆ. 40 ಪ್ರತಿನಿಧಿಗಳು ಈ ಸಮಿತಿಯಲ್ಲಿದ್ದು ಹೋರಾಟಕ್ಕೆ ಹುರುಪು ನೀಡಲು ಒಂದೊಂದು ದಿನ ಹೋರಾಟದಲ್ಲಿ ಭಾಗವಹಿಸಲು ಮತ್ತು ಹೋರಾಟ ನಿಧಿಗೆ ಸಹಾಯ ಮಾಡಲು ನಿರ್ಧರಿಸಿದವು.

ರಾಜ್ಯ ಸಿಐಟಿಯು ಮೇ 10ರಿಂದ 22ರವರೆಗೆ ಹಮ್ಮಿಕೊಂಡ ಹೋರಾಟಕ್ಕೆ ಮುಖ್ಯವಾಗಿ 22ರ ರಾಜ್ಯವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಸೌಹಾರ್ದ ಸಮಿತಿ ಬೆಂಬಲ ವ್ಯಕ್ತಪಡಿಸಿದೆ. ☐

ಕೃಷಿ ಕೂಲಿಕಾರರ ಹೋರಾಟಕ್ಕೆ ಸಿಪಿಐ(ಎಂ) ಬೆಂಬಲ

ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಕೃಷಿ ಕೂಲಿಕಾರರು ೧೯೬೦ರ ದಶಕದಿಂದ ಸಾಗುವಳಿ ಮಾಡುತ್ತಿದ್ದ ಭೂಮಿಯನ್ನು ಅರಣ್ಯ ಇಲಾಖೆಯವರು ವಶಪಡಿಸಿಕೊಂಡ ಹಿನ್ನಲೆಯಲ್ಲಿ ಈ ಭೂಮಿಯನ್ನು ಮರು ವಶಪಡಿಸಿಕೊಳ್ಳಲು ನಡೆಸುತ್ತಿರುವ ಹೋರಾಟಕ್ಕೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ.

ಕರ್ನಾಟಕ ಸರಕಾರವು ಕೂಡಲೇ ಮಧ್ಯಪ್ರವೇಶ ಮಾಡಿ ಸಾಗುವಳಿ ಮಾಡುತ್ತಿರುವ ಕೃಷಿ ಭೂಮಿಗೆ ಕೂಡಲೇ ಪಟ್ಟಾ ನೀಡಿ ಉಳಿದ ಬೇಡಿಕೆಗಳನ್ನು ಕುರಿತು ಸಂಘಟನೆಯ ಮುಖಂಡರೊಡನೆ ಮಾತುಕತೆ ನಡೆಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸಿದೆ.

ದೇಶದೊಳಗೆ



ಆಹಾರ ನಿಗಮದ ಗೋದಾಮುಗಳಿಗೆ ಹೋಗಬೇಕಾದ ಧಾನ್ಯ ಕಾಳಸಂತೆಕೋರರ ಗೋದಾಮು ಸೇರಲು ಬಿಜೆಪಿ ಮತ್ತು ಮಿತ್ರರ ಕುಮ್ಮಕ್ಕು

ಪಂಜಾಬ್, ರಾಜಸ್ತಾನ ಮತ್ತು ಹರಿಯಾಣದ ಬಿಜೆಪಿ ಆಡಳಿತಗಳು ನಲ್ವತ್ತರ ದಶಕದ ಬಂಗಾಳದ ಬರದ ಪರಿಸ್ಥಿತಿಯನ್ನು ಸ್ವತಂತ್ರ ಭಾರತದ ಐದನೇ ದಶಕದಲ್ಲಿ ಉಂಟು ಮಾಡಲು ಕಟಿಬದ್ಧವಾಗಿವೆಯೇ? ಈ ರಾಜ್ಯಗಳಿಗೆ ಇತ್ತೀಚೆಗೆ ಭೇಟಿ ನೀಡಿದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಜಂಟಿ ಕಾರ್ಯದರ್ಶಿ ಸುನೀತ್ ಚೋಪ್ರಾರವರಿಗೆ ಹೀಗೆ ಅನ್ನಿಸಿದೆ.

ಈ ಬಾರಿ ಸುಗ್ಗಿಕಳೆದ ಬಾರಿಗಿಂತ ಉತ್ತಮವಾಗಿದ್ದರೂ ದಿಲ್ಲಿ ಮತ್ತು ಹರಿಯಾಣ ಸರಕಾರಗಳು ಭಾರತ ಆಹಾರ ನಿಗಮ(FCI)ದ ಗೋದಾಮುಗಳಿಂದ ತಮ್ಮ ರೇಶನ್ ವ್ಯವಸ್ಥೆಗೆ ನೀಡಿರುವ ಧಾನ್ಯ ಕೋಟಾವನ್ನು ಇನ್ನೂ ಪೂರ್ಣವಾಗಿ ಬಳಸುವಲ್ಲಿ ವಿಫಲವಾಗಿವೆ. ಹರಿಯಾಣದ ಕೋಟಾದ 25000 ಟನ್‌ಗಳನ್ನು ವ್ಯಾಪಾರಸ್ಥರಿಗೆ ಆ ರಾಜ್ಯದ ಪಶ್ಚಿಮ ಪಟ್ಟಣಗಳಲ್ಲಿರುವ ಬೆಲೆಗಳಿಗೆ ಹೋಲಿಸಿದರೆ ಅರ್ಧ ಬೆಲೆಯಲ್ಲಿ ಮಾರಾಟ ಮಾಡಲಾಗಿತ್ತು. ಇದರಿಂದ ಈ ವ್ಯಾಪಾರಸ್ಥರಿಗೆ ಕನಿಷ್ಠ ಐದು ಕೋಟಿ ರೂ. ಲಾಭವಾಗಿತ್ತು.

ಈ ವರ್ಷ ರೈತರನ್ನು ಮತ್ತು ಬಡ ವಿಭಾಗಗಳನ್ನು ವಂಚಿಸುವ ಒಂದು ಯೋಜನೆ ಹಾಕಿದಂತಿದೆ. ಒಂದೆಡೆ ಶ್ರೀಮಂತ ರೈತರು ತಮ್ಮ ಧಾನ್ಯಗಳನ್ನು ಸರಕಾರಕ್ಕೆ ಮಾರದಂತೆ ಬಿಜೆಪಿ ಮತ್ತು ಅದರ ಮಿತ್ರರು ಅವರಿಗೆ ಕುಮ್ಮಕ್ಕು ನೀಡುತ್ತಿದ್ದಾರೆ, ಇನ್ನೊಂದೆಡೆ ವ್ಯಾಪಾರಸ್ಥರು ಹಳ್ಳಿಗಳಿಗೆ ಹೋಗಿ ಸರಕಾರ ನಿಗದಿ ಮಾಡಿದ ಬೆಲೆ(ಕ್ವಿಂಟಾಲಿಗೆ 475 ರೂ)ಗಿಂತ ಕಮ್ಮಿ ಬೆಲೆಯಲ್ಲಿ ಅಂದರೆ ಸುಮಾರು 415 ರೂ. ದರದಲ್ಲಿ ಬಡ ರೈತರಿಂದ ಉತ್ತಮ ಮಟ್ಟದ ಧಾನ್ಯಗಳನ್ನು ಖರೀದಿಸುತ್ತಿದ್ದಾರೆ. ನಿರ್ವಾಹವಿಲ್ಲದೆ ಈ ರೈತರು ಈ ಬೆಲೆಗೆ ತಮ್ಮ ಧಾನ್ಯಗಳನ್ನು ಮಾರಬೇಕಾಗಿ ಬಂದಿದೆ. ಈ ಧಾನ್ಯವನ್ನು ಕಳ್ಳ ದಾಸ್ತಾನು ಮಾಡಲಾಗುತ್ತದೆ. ಇಲ್ಲವೇ ಗಡಿಗಳಾಚೆ ಪಾಕಿಸ್ತಾನದ ಮಾರುಕಟ್ಟೆಗೆ ಹೋಗುತ್ತದೆ. ಇತ್ತ ಎಫ್‌ಸಿಐ ಧಾನ್ಯ ಸಂಗ್ರಹಣೆಯು ತನ್ನ ಗುರಿ ಮುಟ್ಟಲು ಅಸಮರ್ಥವಾಗುತ್ತಿದೆ.

ಇದು ಸ್ವತಃ ಬಿಜೆಪಿ ಮುಖಂಡ ಮುರಳಿ ಮನೋಹರ ಜೋಷಿಯವರು ಇತ್ತೀಚೆಗೆ ಭಾರತೀಯ ಉದ್ದಿಮೆಗಳ ಮಹಾ ಒಕ್ಕೂಟ ಸಿಐಐನ ಸಭೆಯಲ್ಲಿ ಹೇಳಿ ಎಚ್ಚರಿಸಿದ "ಆಹಾರ ದಂಗೆ"ಗಳಿಗೆ ದಾರಿ ಮಾಡಿಕೊಡುತ್ತವೆ ಎಂದು ಸುನೀತ್ ಚೋಪ್ರಾ ಹೇಳುತ್ತಾರೆ. ಅದೇ ಸಮಾರಂಭದಲ್ಲಿ ಅವರ ಸಹಯೋಗಿ ಎಲ್.ಕೆ.ಅಡ್ವಾಣಿಯವರು ಹಾಡಿ ಹೊಗಳಿದ ಉದಾರೀಕರಣದ ನೀತಿಯಿಂದಲೇ ಇಂತಹ 'ಆಹಾರ ದಂಗೆ'ಗಳು ಸಂಭವಿಸುತ್ತವೆ ಎಂದು ಜೋಷಿಯವರು ಅದೇಕೋ ಹೇಳಲಿಲ್ಲ.

ಪಂಜಾಬಿನ ಲೂಧಿಯಾನಾ, ಫರೀದ್‌ಕೋಟ್, ಗುರುದಾಸಪುರ ಜಿಲ್ಲೆಗಳಿಂದ ಹರ್‍ಯಾಣದ ಕರ್ನಾಲ್ ಮತ್ತು ಪಾಣೀಪತ್ ಜಿಲ್ಲೆಗಳಿಂದ ಹಾಗೂ ರಾಜಸ್ತಾನದ ಸಿಕಾರ್‌ನಿಂದ ಬರುತ್ತಿರುವ ವರದಿಗಳದ್ದೆಲ್ಲಾ ಒಂದೇ ... ಅಂಶ-ಕೃಷಿ ಕಾರ್ಮಿಕರಿಗೆ ಕೆಲಸದ ದಿನಗಳಲ್ಲಿ ಕಡಿತ, ಕೃಷಿ ಸಾಧನಗಳ ಬೆಲೆಗಳಲ್ಲಿ ಹೆಚ್ಚಳ, ಆಹಾರ ಧಾನ್ಯಗಳ ಬದಲು ಹಣದ ಬೆಳೆಗಳತ್ತ ಗಮನ, ಕುರುಡು ಯಾಂತ್ರೀಕರಣ ಇವೇ ಈ ರೀತಿಯ ಕಡಿತಕ್ಕೆ ಮುಖ್ಯ ಕಾರಣಗಳು. ಇದರರ್ಥ ಕಡು ಬಡವರ ಮನೆಗಳಲ್ಲಿ ಧಾನ್ಯಗಳ ಅಭಾವ ಕಾಳಸಂತೆಕೋರರ ಗೋದಾಮುಗಳಲ್ಲಿ ಆ ಧಾನ್ಯ -ಎಂದು ಸುನೀತ್ ಚೋಪ್ರಾ ಹೇಳುತ್ತಾರೆ. ಸರಕಾರಕ್ಕೆ ಶ್ರೀಮಂತ ರೈತರು ತಮ್ಮ ಧಾನ್ಯಗಳನ್ನು ಮಾರದಂತೆ ಬಿಜೆಪಿ ಮತ್ತು ಅದರ ಮಿತ್ರರು ನೀಡುತ್ತಿರುವ ಪ್ರೋತ್ಸಾಹವೇ ಇಂದು ರೈತರು ಅನುಭವಿಸುತ್ತಿರುವ ನಷ್ಟಕ್ಕೆ, ಆಗಸ್ಟ್ ತಿಂಗಳ ನಂತರ ಉಂಟಾಗಬಹುದಾದ ಆಹಾರದ ಬರಗಾಲಕ್ಕೆ ಸಾವುಗಳಿಗೆ ಜವಾಬ್ದಾರಿ ಎಂದು ಚೋಪ್ರಾ ಎಚ್ಚರಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಕಾಳಸಂತೆಕೋರರು ಮತ್ತು ಅವರಿಗೆ ಬೆಂಬಲ ನೀಡುವ ರಾಜಕೀಯ ಪಕ್ಷಗಳಿಗೆ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಎಚ್ಚರಿಕೆ ನೀಡಿದೆ. - "ಈ ರೀತಿ ಕಳ್ಳ ದಾಸ್ತಾನಿಗೆ ಹೋದ ಧಾನ್ಯಗಳನ್ನು ಬಹಿರಂಗಕ್ಕೆಳೆದು ನ್ಯಾಯ ಬೆಲೆಯಲ್ಲಿ ಹಂಚುವ ಕೆಲಸ ನಮ್ಮ ಸಂಘದ ಉಸ್ತುವಾರಿಯಲ್ಲಿ ನಡೆಯುತ್ತದೆ" ಎಂದು. ತಮಗೆ ಬರಬೇಕಾದ ಧಾನ್ಯಗಳನ್ನು ಲಾಭಕೋರರು ದೋಚಿಕೊಂಡಿದ್ದಾರೆ ಎಂಬ ಕಾರ್ಮಿಕರು ... ಹಸಿವಿನಿಂದ ನರಳಲು ನಾವು ... ಲ್ಲ ಎಂದು ಸುನೀತ್ ಚೋಪ್ರಾ ಎಚ್ಚರಿಸಿದ್ದಾರೆ.

ದೇಶದಲ್ಲಿ ಸಿಗುತ್ತಿರುವ ಧಾನ್ಯಗಳನ್ನು ಲಾಭಕೋರರು ದೋಚಿಕೊಂಡು, ನಮ್ಮ ಪಶ್ಚಿಮದ ಗಡಿಗಳಿಂದ ಕಳ್ಳ ಸಾಗಾಣಿಕೆಯಾಗುತ್ತಿದ್ದರೆ, ಇತ್ತ ಹೆಚ್ಚಿನ ಬೆಲೆಯಲ್ಲಿ ಆಮದು ಮಾಡಿಕೊಳ್ಳುವುದನ್ನು ತಪ್ಪಿಸಬೇಕಾದ ಕೇಂದ್ರ ಸರಕಾರ ಈಗಾಗಲೇ ಕೊಟ್ಟಿರುವಂತೆ ಪಂಜಾಬ್ ಮತ್ತು ಪರಿಯಾಣಾ ಸರಕಾರಗಳು ಬೋನಸ್ ದರ ನೀಡಬೇಕು ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಮನವಿ ಮಾಡಿದೆ. ಇದು ಚಳುವಳಿ ನಿರತ ರೈತರು ... ಈ ಸರಕಾರಗಳ ನೈಜ ಕಾಳಜಿಯನ್ನು ತೋರಿಸಬಲ್ಲದು. ಇಲ್ಲವಾದರೆ ಭಾರತ ಆಹಾರ ನಿಗಮದ ಗೋದಾಮುಗಳಿಗೆ ಹೋಗಬೇಕಾದ ಧಾನ್ಯವನ್ನು ಅಗ್ಗ ಬೆಲೆಯಲ್ಲಿ ಕಾಳಸಂತೆಕೋರರಿಗೆ ಅರ್ಪಿಸಿದಂತಾಗುತ್ತದೆ ಎಂದು ಸುನೀತ್ ಚೋಪ್ರಾ ಎಚ್ಚರಿಸಿದ್ದಾರೆ.(ಐಎನ್‌ಎನ್)

ಸಾಮಾಜಿಕ ಅರಣ್ಯೀಕರಣಕ್ಕೆ ವಿಶ್ವ ಬ್ಯಾಂಕಿನಿಂದ ಇನ್ನು ಸಾಲ ಒಪ್ಪಂದ ಇಲ್ಲ

- ಪಶ್ಚಿಮ ಬಂಗಾಳ ಸರಕಾರದ ನಿರ್ಧಾರ

ಸಾಮಾಜಿಕ ಅರಣ್ಯೀಕರಣವನ್ನು ಅಭಿವೃದ್ಧಿಪಡಿಸಲು ವಿಶ್ವ ಬ್ಯಾಂಕಿನಿಂದ ಯಾವುದೇ ಹೊಸ ಸಾಲದ ಬಗ್ಗೆ ಮಾತುಕತೆ ನಡೆಸಬಾರದು ಎಂದು ಪಶ್ಚಿಮ ಬಂಗಾಳ ರಾಜ್ಯ ಸರಕಾರ ನಿರ್ಧರಿಸಿದೆ. ವಿಶ್ವಬ್ಯಾಂಕ್ ಹಾಕಲಾರಂಭಿಸಿರುವ ಶರತ್ತುಗಳು. ಈ ಯೋಜನೆಗಳಿಗೆ ನೆರವಾಗುವ ಬದಲು ಅದಕ್ಕೆ ಅಡ್ಡಿಯಾಗುತ್ತದೆ ಎಂದು ಐಎನ್‌ಎನ್ ಸುದ್ದಿ ಸಂಸ್ಥೆಯೊಡನೆ ಮಾತನಾಡುತ್ತಾ ಎಡ ರಂಗ ಸರಕಾರದ ಅರಣ್ಯ ಮಂತ್ರಿ ಯೋಗೇಶ್ ಬರ್ಮನ್ ಹೇಳಿದ್ದಾರೆ. ಈ ನಂತರ ರಾಜ್ಯ ಸರಕಾರವೇ ಈಗಿರುವ ಸಾಮಾಜಿಕ ಅರಣ್ಯೀಕರಣದ ಕಾರ್ಯಕ್ರಮಗಳಿಗೆ ಹಣ ನೀಡಲು ರಾಜ್ಯ ಸರಕಾರಗಳು ತಮ್ಮದೇ ಸಂಪನ್ಮೂಲಗಳನ್ನು ಉತ್ಪತ್ತಿ ಮಾಡುತ್ತಾರೆ ಎಂದು ಅವರು ಹೇಳುತ್ತಾರೆ.

ವಿಶ್ವ ಬ್ಯಾಂಕಿನ ಶರತ್ತುಗಳಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳನ್ನು 'ಅಮೇರಿಕಾಕ್ಕೆ "ಉನ್ನತ ತರಬೇತಿ"ಗಾಗಿ ಕಳಿಸಬೇಕೆನ್ನುವುದು "ಕಡ್ಡಾಯ"! ವಾಸ್ತವವಾಗಿ ಈ 'ಉನ್ನತ ತರಬೇತಿ' ವಿರುದ್ಧ ಪರಿಣಾಮ ಬೀರುತ್ತಿದೆ. ಏಕೆಂದರೆ ಯಾವುದೇ ತಾಂತ್ರಿಕ ಪ್ರಯೋಜನ ಸಿಕ್ಕರೂ ಬುಡಕಟ್ಟು ಮಟ್ಟದಲ್ಲಿ ಕೆಲಸ ಮಾಡುವ ನೌಕರರವರೆಗೆ ಎಂದೂ ಅದು ತಲುಪಿಯೇ ಇಲ್ಲ. ಇನ್ನು ಮುಂದೆ ಮರಗಳು ಹಾಗೂ ಹೂ ಬನಗಳನ್ನು ನೋಡಿಕೊಳ್ಳುವ ಕೆಲಸವನ್ನು ಪಂಚಾಯತಿಗಳಿಂದ ಆಯಾಯ ಸ್ಥಾನಗಳ ಜನಗಳಿಗೆ ವಹಿಸಲಾಗುವುದು ಎಂದ ಬರ್ಮನ್‌ರವರು ಸರಕಾರದ ಪ್ರಸ್ತುತ ನೀತಿಗಳಂತೂ ಬಹಳ ಭಿನ್ನವಾದ ಸಂಗತಿ.

ಬಿಹಾರದಲ್ಲಿ ಭೂ ಮಾಲಕ-ಕ್ರಿಮಿನಲ್‌ಗಳ ಹೆಚ್ಚುತ್ತಿರುವ ದಾಂಧಲೆ

ಬಿಹಾರದ ವಿವಿಧ ಭಾಗಗಳಲ್ಲಿ ಬಡ ರೈತರು, ಕೃಷಿ ಕೂಲಿಕಾರರು, ಭಾಗ ಬೆಳಗಾರರು ಹಾಗೂ ಇತರ ದುರ್ಬಲ ವಿಭಾಗಗಳ ಮೇಲೆ ಇತ್ತೀಚಿನ ವಾರಗಳಲ್ಲಿ ಹಲ್ಲೆಗಳು ಹೆಚ್ಚುತ್ತಿವೆ ಎಂದು ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಎಸ್.ರಾಮಚಂದ್ರನ್ ಪಿಳ್ಳೆಯವರು ಖಂಡಿಸಿದ್ದಾರೆ. ಭೂಮಾಲಕ-ಕ್ರಿಮಿನಲ್‌ಗಳ ಕೂಟದ ಕುಮ್ಮಕ್ಕಿನಿಂದ ಸ್ಥಳೀಯ ಪೋಲೀಸರು ಹಾಗೂ ಸರಕಾರಿ ಅಧಿಕಾರಿಗಳ ಶಾಮೀಲಿನಿಂದ ಇಂತಹ ದಾಳಿಗಳು ನಡೆಯುತ್ತಿವೆ. ದುರ್ಭಾಂಗ ಜಿಲ್ಲೆಯ ಹಳ್ಳಿಯೊಂದರಲ್ಲಿ ಸರಕಾರ ನೀಡಿದ ಭೂಮಿತಿ ಮೀರಿದ ಜಮೀನಿನಲ್ಲಿ ರೈತರು ತಮ್ಮ ಬೆಳೆಗಳ ಕಟಾವು ನಡೆಸುತ್ತಿದ್ದಾಗ ಭೂಮಾಲಕರ ಗುಂಡಾಗಳು ಹಲ್ಲೆ ಮಾಡಿ ಸಿಕಂದರ್ ಯಾದವ್ ಎಂಬ ರೈತ ಸ್ಥಳದಲ್ಲೇ ಪ್ರಾಣ ಬಿಟ್ಟ. ಹಲವರಿಗೆ ಗಾಯಗಳಾದವು. ಕೊಲೆಗಡುಕರು ಇನ್ನೂ ಆರಾಮವಾಗಿ ಅಲೆದಾಡುತ್ತಿದ್ದಾರೆ. ಹೀಗೆ ಬಡ ರೈತರನ್ನು ಅವರಿಗೆ ನೀಡಿದ ಜಮೀನಿನಿಂದ ಒಕ್ಕಲೆಬ್ಬಿಸುವುದು. ಇಂತಹ ಅಮಾನವೀಯ ಹಲ್ಲೆಗಳು ಹಲವಾರು ಹಳ್ಳಿಗಳಲ್ಲಿ ನಡೆದಿವೆ. ಪೋಲೀಸ್ ಮತ್ತು ಸರಕಾರಿ ಅಧಿಕಾರಿಗಳು ಬಹಿರಂಗವಾಗಿಯೇ ಇವರಲ್ಲಿ ಭೂಮಾಲಿಕರಿಗೆ ನೆರವಾಗುತ್ತಿದ್ದಾರೆ.

ಇಂತಹ ಧಾಳಿಗಳನ್ನು ತಕ್ಷಣ ನಿಲ್ಲಿಸಬೇಕು, ಕ್ರಿಮಿನಲ್-ಭೂಮಾಲಕರನ್ನು ಬಂಧಿಸಬೇಕು, ಸಾಮಾಜಿಕ ನ್ಯಾಯವನ್ನು ಹಾಗೂ ಸ್ವಾರ್ ಗಳಿಸಿರುವ ತಪ್ಪಿತಸ್ಥ ಸರಕಾರಿ ಅಧಿಕಾರಿಗಳಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಎಐಕೆಎಸ್ ಆಗ್ರಹಪಡಿಸಿದೆ. ಪಶ್ಚಿಮ ಬಂಗಾಳ, ಕೇರಳಗಳಂತೆ ತಕ್ಷಣ ಭೂ ಸುಧಾರಣೆಗಳ ಜ್ಯಾರಿಯಾಗಬೇಕು, ಭೂ ಮಿತಿ ಮೀರಿದ ಜಮೀನನ್ನು ಸರಕಾರಿ ಬಂಜರು ಭೂಮಿಯನ್ನು ಬಡ, ಭೂಹೀನ ರೈತರಿಗೆ ಹಂಚಬೇಕು, ಭಾಗ ಬೆಳಗಾರರಿಗೆ ದಾಖಲಾತಿ ಮತ್ತು ರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಹಾಗೂ ಒಕ್ಕಲೆಬ್ಬಿಸುವುದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಎಐಕೆಎಸ್ ಒತ್ತಾಯಪಡಿಸಿದೆ. ಈ ಬಗ್ಗೆ ಬಿಹಾರದ ಮುಖ್ಯಮಂತ್ರಿಗಳಿಗೆ ಏಪ್ರಿಲ್ 25ರಂದು ಫ್ಯಾಕ್ಸ್ ಸಂದೇಶ ಕಳಿಸಲಾಗಿದೆ ಎಂದು ರಾಮಚಂದ್ರನ್ ಪಿಳ್ಳೆಯವರು ಹೇಳಿದ್ದಾರೆ. (ಐಎನ್‌ಎನ್)

ಮುಂದುವರಿದ ಗ್ರಾಮ ಪಂಚಾಯತ್ ನೌಕರರ ಹೋರಾಟ

ಧಾರವಾಡ: ಜಿಲ್ಲೆಯ ಕೃಷಿ ಕೂಲಿಕಾರರು ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ತೀವ್ರ ಚಳುವಳಿ ನಡೆಸುತ್ತಿರುವ ಸಮಯದಲ್ಲೇ ಅವರಷ್ಟೇ ಕನಿಷ್ಟ ಜೀವನ ಸಾಗಿಸುತ್ತಿರುವ ಗ್ರಾಮ ಪಂಚಾಯತ್ ನೌಕರರು ರಾಜ್ಯ ಕರೆಯ ಮೇರೆಗೆ ಮೇ 1ರಿಂದ 22ರವರೆಗೆ ಜಿಲ್ಲಾದ್ಯಂತ ಹೋರಾಟ ನಡೆಸಿದ್ದಾರೆ.

ಫೆಬ್ರವರಿ 97ರ ಬೆಂಗಳೂರು ಚಲೋ ಚಳುವಳಿಯ ನಂತರ ಗ್ರಾಮ ಪಂಚಾಯತ್ ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವುದಾಗಿ ಪಂಚಾಯತ್ ಮಂತ್ರಿಗಳು ಭರವಸೆ ನೀಡಿದ್ದರೂ ಈವರೆಗೆ ಬೇಡಿಕೆಗಳನ್ನು ಈಡೇರಿಸಿಲ್ಲವಾದ್ದರಿಂದ ಮುಂಚೆ ನಿರ್ಧರಿಸಿದಂತೆ ಸ್ಥಳೀಯವಾಗಿ ಹೋರಾಟ ಮುಂದುವರೆಸಲು ರಾಜ್ಯ ಸಮಿತಿ ನಿರ್ಧರಿಸಿತು.

ಜಿಲ್ಲಾಪಂಚಾಯತ್‌ನ 15.7.96ರ ಹಾಗೂ 6.3.97ರ ಸುತ್ತೋಲೆಯ ಆಧಾರದಲ್ಲಿ ಮಂಡಲ ಪಂಚಾಯತ್‌ಗಳ ನೌಕರರನ್ನು ಗ್ರಾಮ ಪಂಚಾಯತ್ ನೌಕರರನ್ನಾಗಿ ಮರು ನೇಮಕಕ್ಕೆ ಅನುವು ಮಾಡಿಸುವುದು, ಗ್ರಾಮ ಪಂಚಾಯತ್‌ಗಳಲ್ಲಿ ಸೇರ್ಪಡೆಗೊಂಡ ನೇಮಕಾತಿಗೆ ಅನುಮೋದನೆ ನೀಡುವುದು, ಎಲ್ಲಾ ನೌಕರರಿಗೆ ಹಾಜರಿ ಪುಸ್ತಕ, ಸೇವಾ ದಾಖಲೆ ಇಡುವುದು, ಸರಕಾರ ನಿಗದಿಪಡಿಸಿದ ರೂ. 500, 600, 900 ದರಗಳಲ್ಲಿ ತಿಂಗಳ ಮೊದಲ ವಾರದಲ್ಲಿ ವೇತನ ಪಾವತಿ ಮಾಡುವುದು, ರಜಾ ಸೌಲಭ್ಯ, ವಿಚಾರಣೆ ಇಲ್ಲದೆ ಕೆಲಸದಿಂದ ತೆಗೆಯುವ ಮುಂತಾದ ಕಿರುಕುಳ ನೀಡದಿರುವಂತೆ ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯತ್‌ಗಳಿಗೆ ಒತ್ತಾಯಿಸಿ ಈ ಚಳುವಳಿಯನ್ನು ರೂಪಿಸಿತ್ತು.

ಗ್ರಾಮ ಪಂಚಾಯತ್ ನೌಕರರ ಬೇಡಿಕೆ ಈಡೇರಿಕೆಯ ಅಧ್ಯಯನಕ್ಕಾಗಿ ಪಶ್ಚಿಮ ಬಂಗಾಳಕ್ಕೆ ಒಂದು ಅಧ್ಯಯನ ತಂಡ ಕಳುಹಿಸುವುದು, ಕೇರಳ ಮಾದರಿಯಲ್ಲಿ ಸಮಾನ ಸೇವಾ ನಿಯಮಗಳ ರಚನೆಗೆ ಏಕಸದಸ್ಯ ಸಮಿತಿ ರಚನೆ, ಕನಿಷ್ಟ ರೂ. 900 ಮಾಸಿಕ ವೇತನ, ತೆರವಾದ ಕಾರ್ಯದರ್ಶಿ ಸ್ಥಾನಗಳಿಗೆ. ಎಸ್.ಎಸ್.ಎಲ್.ಸಿ. ಆದವರಿಗೆ ಮೀಸಲು, ವೇತನಕ್ಕಾಗಿ ಹೆಚ್ಚಿನ ಅನುದಾನ ಇತ್ಯಾದಿ ಭರವಸೆಗಳನ್ನು ಸಚಿವರು ನೀಡಿದ್ದನ್ನು ಸ್ಮರಿಸಿಕೊಳ್ಳಬಹುದು.

ಬೀಡಿ ಕಾರ್ಮಿಕರ ಯಶಸ್ವಿ ಮತ ಪ್ರದರ್ಶನ

ಜಿಲ್ಲೆಯ ಕೃಷಿ ಕೂಲಿಕಾರರು ಮತ್ತು ಗ್ರಾಮ ಪಂಚಾಯತ್ ನೌಕರರು ಹೋರಾಟ ರೂಪಿಸಿ ಚಳುವಳಿ ಪ್ರಾರಂಭಿಸಿರುವಾಗಲೇ ಜಿಲ್ಲೆಯ ಅಸಂಘಟಿತ ಬೀಡಿ ಕಾರ್ಮಿಕರು ಸಂಘಟಿತರಾಗಿ ಸಿಐಟಿಯು ನೇತೃತ್ವದಲ್ಲಿ ಹೈಕೋರ್ಟ್ ನೀಡಿರುವ ಆದೇಶದಂತೆ ಕನಿಷ್ಟ ಕೂಲಿಯನ್ನು ನೀಡಬೇಕೆಂದು ಮೇ 8ರಂದು ಹುಬ್ಬಳ್ಳಿಯಲ್ಲಿ ಮತ ಪ್ರದರ್ಶನ ನಡೆಸಿದರು.

ಹೈಕೋರ್ಟ್ ಆದೇಶದಂತೆ ಬೀಡಿ ಕಾರ್ಮಿಕರಿಗೆ ಒಂದು ಸಾವಿರ ಬೀಡಿ ಸುತ್ತಲು ತುಟ್ಟಿಭತ್ಯೆಯೂ ಸೇರಿದಂತೆ ಒಟ್ಟು ರೂ. 41.52 ದರದಲ್ಲಿ ಜನವರಿ 21ರಿಂದ ಮಾರ್ಚ್ 31ರವರೆಗೂ ಒಟ್ಟು ರೂ. 44.92 ರ ದರದಲ್ಲಿ ಏಪ್ರಿಲ್ 1ರಿಂದಲೂ ಕನಿಷ್ಟ ಕೂಲಿ ಕೊಡಬೇಕು. ಆದರೆ ಬೀಡಿ ಮಾಲಕರು ಇಲ್ಲಿಯವರೆಗೆ ಹಳೆಯ ದರದಲ್ಲೇ ಕೂಲಿ ನೀಡುತ್ತಿದ್ದಾರೆ ಆದ್ದರಿಂದ ಕಾರ್ಮಿಕ ಇಲಾಖೆಯು ಹೆಚ್ಚುವರಿ ಮಜೂರಿಯನ್ನು ಬೀಡಿ ಮಾಲಕರು ಸಂದಾಯ ಮಾಡುವಂತೆ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕೆಂದು ಜಿಲ್ಲಾ ಕಾರ್ಯದರ್ಶಿ ಡಿ.ಜೆ.ಗೊಂದಕರ್ ಒತ್ತಾಯಿಸಿದರು.

ಮತ ಪ್ರದರ್ಶನದ ವೇಳೆಯಲ್ಲಿ ಕಾರ್ಮಿಕ ಆಯುಕ್ತರ ಮಧ್ಯಸ್ಥಿಕೆಯಲ್ಲಿ ಕಾರ್ಮಿಕರು ಮತ್ತು ಮಾಲಕರ ನಡುವೆ ಮಾತುಕತೆ ನಡೆಸಿದರು. ಮಾಲಕರು ಹೆಚ್ಚುವರಿ ಮಜೂರಿ ಕೊಡಲು ಒಪ್ಪಿಕೊಂಡ ನಂತರ ಮತ ಪ್ರದರ್ಶನ ಮುಕ್ತಾಯಗೊಂಡಿತು.

ಸಿಐಟಿಯುವಿನ ಎಂ.ಬಿ.ಕಟ್ಟಿ, ಮಹೇಶ್ ಪತ್ತಾರ್, ಕಾಮತ್, ಅತ್ತಾರ ರಾಬಿಯೂಬಿ ಸೌದಾಗಾರ, ಎ.ಎ.ಮುಲಾಬಾನು ಮುಂತಾದವರು ನೇತೃತ್ವ ನೀಡಿದರು.

ಕಾರ್ಮಿಕರ ಮೇಲೆ ಲಾಠಿಚಾರ್ಜಿಗೆ ಖಂಡನೆ

ಭಟ್ಕಳ ತಾಲೂಕು ಅನಂತವಾಡಿಯ ಪ್ರತೀಶ್ ಕಾರ್ಖಾನೆಯ ಕಾರ್ಮಿಕರು ನ್ಯಾಯಯುತವಾಗಿ ಪ್ರತಿಭಟಿಸುತ್ತಿದ್ದಾಗ ಅವರ ಸಮಸ್ಯೆಗಳನ್ನು ಪರಿಹರಿಸಲು ಸಹಕರಿಸುವ ಬದಲಾಗಿ ಅವರ ಮೇಲೆ ಲಾಠಿ ಚಾರ್ಜ್ ಮಾಡಿ, ಗಾಳಿಯಲ್ಲಿ ಗುಂಡು ಹಾರಿಸಿ ಕಾರ್ಮಿಕರ ಒಗಟ್ಟನ್ನು ದಮನ ಮಾಡಲು ಹೊರಟಿರುವ ಪೋಲೀಸ್ ಧೋರಣೆಯನ್ನು ಸಿಐಟಿಯು ರಾಜ್ಯ ಸಮಿತಿ ಖಂಡಿಸಿದೆ.

ನ್ಯಾಯಾಂಗ ತನಿಖೆಗೆ ಆಗ್ರಹ

ಪೋಲೀಸರು ಏಕಾಏಕಿ ಹಂಚು ಕಾರ್ಮಿಕರ ಮೇಲೆ ದಮನಕಾರಿ ನೀತಿ ಅನುಸರಿಸಿರುವುದರಿಂದ ಸಿಐಟಿಯು ರಾಜ್ಯ ಮುಖಂಡ ಟಿ.ಎಸ್.ನಾಯ್ಕ ಸೇರಿದಂತೆ ನೂರಾರು ಕಾರ್ಮಿಕರು ಏಟು ತಿಂದು ಆಸ್ಪತ್ರೆ ಸೇರಿದ್ದಾರೆ. ಪೋಲೀಸರು ಅವರ ಮೇಲೆ ಸುಳ್ಳು ಮೊಕದ್ದಮೆ ಹೂಡಿರುವುದನ್ನು ಸಿಐಟಿಯು ದ.ಕ.ದ ಮುಖಂಡರಾದ ಕೆ.ಶಂಕರ್ ಮತ್ತು ಡಿವೈಎಫ್‌ಐನ ಶಾಂತಾರಾಮ ನಾಯಕ್ ಖಂಡಿಸಿ ಇದನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕೆಂದು ಒತ್ತಾಯಿಸಿದ್ದಾರೆ.

ಭಾಸ್ಕರ್ ಕುಂಬ್ಳೆ ಹತ್ಯೆ ಖಂಡಿಸಿ ಪ್ರತಿಭಟನೆ

ಮಂಗಳೂರು: ಡಿವೈಎಫ್‌ಐನ ಭಾಸ್ಕರ್ ಕುಂಬ್ಳೆಯ ಹತ್ಯೆಯನ್ನು ಖಂಡಿಸಿ ಜಿಲ್ಲೆಯ ಪ್ರಗತಿಪರ ಸಂಘಟನೆಗಳ ಕರೆಯ ಮೇರೆಗೆ ಪ್ರತಿಭಟನಾ ಕಾರ್ಯಕ್ರಮ ನಡೆಸಿ ಹತ್ಯೆಯಲ್ಲಿ ಭಾಗವಹಿಸಿದ ಎಲ್ಲರನ್ನೂ ಬಂಧಿಸಬೇಕೆಂದು ತಹಸೀಲ್ದಾರರಿಗೆ ನೀಡಿದ ಮನವಿ ಪತ್ರದಲ್ಲಿ ತಿಳಿಸಿದೆ.

ಸಭೆಯನ್ನುದ್ದೇಶಿಸಿ ರೈತ ಸಂಘದ ಅಬ್ರಹಾಂ ಕರ್ಕಡ, ಸಿಪಿಐ(ಎಂ)ನ ರಾಮಚಂದ್ರ ಉಚ್ಚಿಲ್, ಡಿಎಸ್‌ಎಸ್‌ನ ಡಿ.ಬಿ.ಸಾಲಿಯಾನ್, ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್‌ನ ಬಿ.ಎಂ.ಮಾಧವ, ಕಾಸರಗೋಡಿನ ಎಸ್‌ಎಫ್‌ಐನ ಮುಸ್ತಾಫ ಕೃಷ್ಣ ಕೊಂಚಾಡಿ, ಯಾದವ ಶೆಟ್ಟಿ ಮುಂತಾದವರು ... ಖಂಡಿಸಿ ಮಾತನಾಡಿದರು.

ಕ್ರಿಸ್ತಾನಂದರಿಗೆ ಶ್ರದ್ಧಾಂಜಲಿ

ಉಡುಪಿ: ಉಡುಪಿ ತಾಲೂಕು ನೇಯ್ಗೆ ಕೆಲಸಗಾರರ ಸಂಘದ ಅಧ್ಯಕ್ಷರು ಉಪಾಧ್ಯಕ್ಷರಾಗಿ ನಂತರ ಖಜಾಂಚಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಏಪ್ರಿಲ್ 15ರಂದು ನಿಧನರಾದ ಕ್ರಿಸ್ತಾನಂದರಿಗೆ ಉಡುಪಿ ನೇಯ್ಗೆ ಕೆಲಸಗಾರರರ ಸಂಘ ಸಭೆ ಸೇರಿ ಶ್ರದ್ಧಾಂಜಲಿ ಅರ್ಪಿಸಿದೆ.

21ನೇ ಶತಮಾನದ ಅಂತರ್ರಾಷ್ಟ್ರೀಯ ರಾಜಕೀಯ ಹೇಗಿರಬೇಕು ಎಂದು ಸೂಚಿಸುವ ಚೀಣಾ-ರಶ್ಯಾ ಘೋಷಣೆ

ಸೀತಾರಾಂ ಯೆಚೂರಿ

ಚೀಣಾ, ರಶ್ಯಾ, ಕಝಖಿಸ್ತಾನ್, ಕಿರ್ಗಿಝ್‌ಸ್ತಾನ್ ಮತ್ತು ತಾಜಿಕಿಸ್ತಾನ್‌ಗಳ ನಡುವೆ ಇತ್ತೀಚೆಗೆ ನಡೆದ ಒಂದು ವಿಶಿಷ್ಟ ಒಪ್ಪಂದದ ಸುದ್ದಿಯನ್ನು ಕಳೆದ ಸಂಚಿಕೆಯಲ್ಲಿ ಓದಿರುವಿರಿ. ಇದರ ಜೊತೆಗೇ ಕಳೆದ ವಾರ ಚೀಣಾ-ರಶ್ಯಾದ ಅಧ್ಯಕ್ಷರುಗಳು ಒಂದು ಜಂಟಿ ಘೋಷಣೆಯನ್ನು ಹೊರಡಿಸಿದರು. ಇವು ಮುಂದಿನ ಶತಮಾನದಲ್ಲಿ ಅಂತರ್ರಾಷ್ಟ್ರೀಯ ರಾಜಕೀಯದ ರೂಪುರೇಷೆಗಳನ್ನು ನಿರ್ಮಿಸುವ ಘಟನೆಗಳು, ಸಾಮ್ರಾಜ್ಯಶಾಹಿಗಳನ್ನು ನಡುಗಿಸಿರುವ ಬೆಳವಣಿಗೆಗಳು ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರ ವಿಶ್ಲೇಷಣೆ ಇಲ್ಲಿದೆ.

ರಶ್ಯಾಕ್ಕೆ ಚೀಣೀ ಅಧ್ಯಕ್ಷರ ಅಧಿಕೃತ ಭೇಟಿ ಹಾಗೂ ಆ ಸಂದರ್ಭದಲ್ಲಿ ಏರ್ಪಟ್ಟ ಒಪ್ಪಂದಗಳು ನಿಜವಾಗಿ ಬಹಳ ಮಹತ್ವಪೂರ್ಣ. 21ನೇ ಶತಮಾನದಲ್ಲಿನ ಅಂತರ್ರಾಷ್ಟ್ರೀಯ ಬೆಳವಣಿಗೆಗಳ ಮೇಲೆ ಆಳವಾದ ಪ್ರಭಾವ ಬೀರುವ ಘಟನೆಗಳಿವು. ಚೀಣೀ ಅಧ್ಯಕ್ಷ ಜಿಯಾಂಗ್ ಝೆಮಿನ್ ರಶ್ಯಾದ ಪಾರ್ಲಿಮೆಂಟ್ ಡೂಮಾದ ಭಾಷಣದಲ್ಲಿನ ಈ ಮಾತುಗಳು ಗಮನಾರ್ಹ -

"ಮಾನವ ಕುಲ ಸದ್ಯದಲ್ಲೇ ಇನ್ನೊಂದು ಶತಮಾನ ಮುಗಿಸಲಿದೆ. ಹಿಂದಿರುಗಿ ನೋಡಿದಾಗ ಯುದ್ಧಗಳು ಮತ್ತು ಯುದ್ಧದ ಬೆದರಿಕೆಗಳ ಫಲವಾಗಿ ಹೇಳತೀರದ ಮಾನವ ಸಂಕಷ್ಟಗಳಿಂದ ಈ ಶತಮಾನ ತುಂಬಿ ತುಳುಕುತ್ತಿರುವುದನ್ನು ಕಾಣುತ್ತೇವೆ. ಈ ಶತಮಾನದ ಮೊದಲರ್ಧದಲ್ಲಿ ವಿಶ್ವ ಎರಡು ಜಾಗತಿಕ ಯುದ್ಧಗಳನ್ನು ಕಂಡಿತು. ಅವು ಇಡೀ ಮಾನವ ಕುಲಕ್ಕೆ ಚೀಣೀಯರು, ರಶ್ಯನ್ನರಿಗೆ ಅನಾಹುತಗಳ ಮಹಾಪೂರವನ್ನೇ ತಂದಿತು. ಉತ್ತರಾರ್ಧದಲ್ಲಿ ಶೀತಲ ಯುದ್ಧ ಕಂಡವು. ನಲ್ವತ್ತು ವರ್ಷಗಳಿಗೂ ಹೆಚ್ಚು ಕಾಲ ಅದು ನಡೆಯಿತು. ಜತೆಗೆ ಪ್ರಾದೇಶಿಕ ಸಂಘರ್ಷಗಳು, ಇವು ಜಾಗತಿಕ ಶಾಂತಿ ಹಾಗೂ ಅಭಿವೃದ್ಧಿಗೆ ಗಂಭೀರ ಅಡ್ಡಿಯೊಡ್ಡಿದವು.

ಹಿಂದಿನ ದುರಂತಗಳು ಮತ್ತೆ ಸಂಭವಿಸಲು ಬಿಡಬಾರದು. ವಿಶ್ವ ಶಾಂತಿಯನ್ನು ಗಳಿಸಲು ಹಾಗೂ ಕಾಪಾಡಲು ಭಾರೀ ತ್ಯಾಗ ಬಲಿದಾನ ಮಾಡಬೇಕಾಗಿ ಬಂದುದರಿಂದ ನಮಗೆ ಶಾಂತಿಯ ಮೌಲ್ಯ ಇನ್ನೂ ಹೆಚ್ಚು. ಶತಮಾನದ ಈ ತಿರುವಿನಲ್ಲಿ 21ನೇ ಶತಮಾನದಲ್ಲಿ ಶಾಂತಿ ಮತ್ತು ಅಭಿವೃದ್ಧಿಯ ಉದಾರ ಧ್ಯೇಯದ ಸಾಧನೆಯತ್ತ ಸಾಗುವುದು ಹೇಗೆ ಎಂಬುದು ಪ್ರಧಾನ ಪ್ರಶ್ನೆಯಾಗಿದೆ. ಈ ಪ್ರಶ್ನೆಯನ್ನು ವಿಶ್ವಾದ್ಯಂತ ಮುತ್ಸದ್ದಿಗಳು ಮತ್ತು ಜನರು ಗಂಭೀರವಾಗಿ ಅಧ್ಯಯನ ಮಾಡಬೇಕು, ಪರಿಹರಿಸಬೇಕು.

ಈ ಪ್ರಧಾನ ಪ್ರಶ್ನೆಯನ್ನೇ ಚೀಣಾ, ರಶ್ಯಾದ ಅಧ್ಯಕ್ಷರುಗಳ ಜಂಟಿ ಹೇಳಿಕೆ ಪ್ರಸ್ತಾಪಿಸಿದ್ದು. ಇದು 21ನೇ ಶತಮಾನದಲ್ಲಿ ಅಂತರ್ರಾಷ್ಟ್ರೀಯ ಸಂಬಂಧಗಳ ಅಜೆಂಡಾದ ರೂಪುರೇಷೆ. ಒಂದು ಬಹುಧ್ರುವೀಯ ಜಗತ್ತನ್ನು ಹಾಗೂ ಒಂದು ಹೊಸ ಅಂತರ್ರಾಷ್ಟ್ರೀಯ ವ್ಯವಸ್ಥೆಯನ್ನು ನಿರ್ಮಿಸಲು ತಾನು ಬದ್ಧ ಎಂದು ಈ ಎರಡು ದೇಶಗಳು ಹೇಳಿವೆ. ಸಾಮ್ರಾಜ್ಯಶಾಹಿಗಳು ವಿಶ್ವ ರಾಜಕೀಯದಲ್ಲಿ ಯಜಮಾನಿಕೆ ಹೇರುವ ಪ್ರಯತ್ನ ನಡೆಸಿರುವುದನ್ನು (ಯಾವುದೇ ದೇಶವನ್ನು ಹೆಸರಿಸದೆ) ಬಲವಾಗಿ ವಿರೋಧಿಸಿರುವ ಈ ಜಂಟಿ ಹೇಳಿಕೆ "ಯಜಮಾನಿಕೆ ಪ್ರವೃತ್ತಿ ಮತ್ತು ಶಕ್ತಿ ರಾಜಕೀಯವನ್ನು ದೃಢವಾಗಿ ತಿರಸ್ಕರಿಸಿ "ಪರಸ್ಪರ ಮಾತುಕತೆ ಹಾಗೂ ಸಹಕಾರಕ್ಕೆ, ತಿಕ್ಕಾಟ, ಸಂಘರ್ಷಗಳನ್ನು ತಪ್ಪಿಸುವಂತೆ" ಕರೆ ನೀಡಿವೆ.

ಆರಂಭದಲ್ಲಿ ಭಾರತ-ಚೀಣಾ ಸಹಕಾರದ ಮುಖ್ಯ ಲಕ್ಷಣವಾದ ಪಂಚಶೀಲದ ತತ್ವಗಳು ವಿವಿಧ ಪ್ರಭುತ್ವಗಳ ನಡುವಿನ ಸಂಬಂಧಗಳನ್ನು ನಿರ್ವಹಿಸುವ ಮೂಲಭೂತ ವಿಧಿ-ವಿಧಾನಗಳನ್ನು ಹಾಗೂ ಒಂದು ಹೊಸ ಅಂತರ್ರಾಷ್ಟ್ರೀಯ ವ್ಯವಸ್ಥೆಯನ್ನು ಸ್ಥಾಪಿಸಲು ಇದೇ ಆಧಾರ ಎಂಬುದನ್ನು ಈ ಘೋಷಣೆಯಲ್ಲಿ ಪುನರುಚ್ಚರಿಸಲಾಗಿದೆ.

ಕ್ಯೂಬಾದ ಮೇಲೆ ನಿರ್ಬಂಧ, ಇತರಡೆ ಮಿಲಿಟರಿ ಮಧ್ಯಪ್ರವೇಶ ಮುಂತಾದ ಅಮೇರಿಕಾದ ಪ್ರಯತ್ನಗಳ ಬಗ್ಗೆ ಪರೋಕ್ಷವಾಗಿ ಪ್ರಸ್ತಾಪಿಸುತ್ತಾ ಈ ಘೋಷಣೆ -

"ಎಲ್ಲಾ ದೇಶಗಳು, ದೊಡ್ಡದಿರಲಿ-ಸಣ್ಣದಿರಲಿ, ಬಲಶಾಲಿಯಾಗಿರಲಿ-ದುರ್ಬಲವಾಗಿರಲಿ, ಶ್ರೀಮಂತರಾಗಲಿ-ಬಡವರಾಗಿರಲಿ ಎಲ್ಲವೂ ಅಂತರ್ರಾಷ್ಟ್ರೀಯ ಸಮುದಾಯದ ಸಮಾನ ಸದಸ್ಯರು. ಯಾವುದೇ ದೇಶ ಯಜಮಾನಿಕೆ ಹೇರಲು ಪ್ರಯತ್ನಿಸಬಾರದು. ಶಕ್ತಿ ರಾಜಕೀಯ ನಡೆಸಬಾರದು ಅಥವಾ ಅಂತರ್ರಾಷ್ಟ್ರೀಯ ವ್ಯವಹಾರಗಳ ಮೇಲೆ ಗುತ್ತೇದಾರಿಕೆ ನಡೆಸಬಾರದು"

ಎಂದಿದೆ. "ಪ್ರತಿಯೊಂದು ದೇಶಕ್ಕೆ ತನ್ನ ರಾಷ್ಟ್ರೀಯ ಪರಿಸ್ಥಿತಿಗಳ ಬೆಳಕಿನಲ್ಲಿ ತನ್ನದೇ ಅಭಿವೃದ್ಧಿ ದಾರಿ ಆರಿಸುವ ಹಕ್ಕಿದೆ. ಬೇರೆ ಯಾವ ದೇಶವೂ ಇದರಲ್ಲಿ ಹಸ್ತಕ್ಷೇಪ ಮಾಡಲಾಗದು" ಎಂದು ಮುಂದುವರಿದು ಈ ಘೋಷಣೆ ಸಾರಿದೆ.

ಇದೇ ರೀತಿ ಅಮೇರಿಕನ್ ಸಾಮ್ರಾಜ್ಯಶಾಹಿ ಮತ್ತಿತರ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳು ಐಎಂಎಫ್-ವಿಶ್ವ ಬ್ಯಾಂಕ್, ಗ್ಯಾಟ್‌ಗಳ ಮೂಲಕ ಆರ್ಥಿಕ ಒತ್ತಡಗಳನ್ನು ಶರತ್ತುಗಳನ್ನು ಹೇರಿ ತಮ್ಮ ಹಿತಾ ಸಕ್ತಿಗಳಿಗನುಗುಣವಾಗಿ ಅಂತರ್ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯನ್ನು ರೂಪಿಸಲು ಪ್ರಯತ್ನ ನಡೆಸುತ್ತಿರುವ ಬಗ್ಗೆ ಪರೋಕ್ಷ ಪ್ರಸ್ತಾವ ಮಾಡುತ್ತಾ ಈ ದಸ್ತಾವೇಜು ಹೀಗಂದಿದೆ-

"ಆರ್ಥಿಕ ಸಂಬಂಧಗಳಲ್ಲಿ ಪಕ್ಷಪಾತಪೂರ್ಣ ಧೋರಣೆಗಳನ್ನು, ಆಚರಣೆಗಳನ್ನು ನಿರ್ಮೂಲ ಮಾಡುವುದು, ಸಮಾನತೆ, ಪರಸ್ಪರ ಪ್ರಯೋಜನದ ಆಧಾರದ ಮೇಲೆ ಆರ್ಥಿಕ ವ್ಯಾಪಾರ, ವೈಜ್ಞಾನಿಕ, ತಾಂತ್ರಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ವಿನಿಮಯ, ಸಹಕಾರಗಳನ್ನು ಬಲಪಡಿಸುವುದು ಹಾಗೂ ವಿಸ್ತರಿಸುವುದು ಅತ್ಯವಶ್ಯಕ. ಸರ್ವರ ಅಭಿವೃದ್ಧಿ ಮತ್ತು ಸಮೃದ್ಧಿಗೆ ಇದು ಅತ್ಯಗತ್ಯ".

ನಿಶ್ಶಸ್ತ್ರೀಕರಣ ಪ್ರಕ್ರಿಯೆಗೆ ಪ್ರೋತ್ಸಾಹ ನೀಡಲು ತಾನು ಸಿದ್ಧ ಎಂದು ಸಾರಿರುವ ಚೀಣಾ ಮತ್ತು ರಶ್ಯಾ "ಮಿಲಿಟರಿ ಬಣಗಳನ್ನು ವಿಸ್ತರಿಸುವ, ಬಲಪಡಿಸುವ ಪ್ರಯತ್ನಗಳ" ಬಗ್ಗೆ ಆತಂಕ ವ್ಯಕ್ತಪಡಿಸಿವೆ. ಹೊಸ ಅಂತರ್ರಾಷ್ಟ್ರೀಯ ವ್ಯವಸ್ಥೆಯಲ್ಲಿ ವಿಶ್ವಸಂಸ್ಥೆಯ ಪಾತ್ರವನ್ನು ಒತ್ತಿ ಹೇಳುತ್ತಾ ಈ ಸಂಸ್ಥೆಯನ್ನು ಬಲಪಡಿಸಲು ಸಿದ್ಧ ಎಂದು ಹೇಳಿವೆ, ಯಾವುದೇ ದೇಶ ಭದ್ರತಾ ಸಮಿತಿಯ ಜನಾದೇಶವನ್ನು ತನಗೆ ಬೇಕಾದ ದಿಕ್ಕಿನಲ್ಲಿ ಅಪಹರಿಸಿಕೊಂಡು ಹೋಗುವುದರ ವಿರುದ್ಧ ಪರೋಕ್ಷ ಎಚ್ಚರಿಕೆ ನೀಡಿವೆ. ದಿಗ್ಬಂಧನಗಳನ್ನು ಹೇರುವ ಪ್ರಶ್ನೆಯ ಬಗ್ಗೆ ಹೇಳುತ್ತಾ "ಈ ಕ್ರಮದಿಂದಾಗುವ ನಷ್ಟಗಳನ್ನು ಹಾಗೂ ಮೂರನೇ ದೇಶಗಳಿಗೆ ಮತ್ತು ಪಕ್ಕದ ಪ್ರದೇಶಗಳಿಗೆ ಅವು ತರುವ ತೊಂದರೆಗಳನ್ನು ಕನಿಷ್ಟಕ್ಕಿಳಿಸಬೇಕು. ದಿಗ್ಬಂಧನಗಳನ್ನು ಕಮ್ಮಿಮಾಡಬೇಕು ಅಥವಾ ಕ್ರಮೇಣ ತಗೆದುಹಾಕಬೇಕು" ಎಂದು ಚೀಣಾ-ರಶ್ಯಾ ಘೋಷಣೆ ಬಯಸಿದೆ.

ಬಹುಧ್ರುವೀಯ ಜಗತ್ತು ಹಾಗೂ ಒಂದು ಹೊಸ ಅಂತರ್ರಾಷ್ಟ್ರೀಯ ವ್ಯವಸ್ಥೆ ತರುವಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಹಾಗೂ ಅಲಿಪ್ತ ಆಂದೋಲನ ಪಾತ್ರದ ಮೇಲೂ ಚೀಣಾ-ರಶ್ಯಾ ಜಂಟಿ ಹೇಳಿಕೆ ಸಾಕಷ್ಟು ಒತ್ತು ನೀಡಿದೆ.

"ಹೊಸದೊಂದು ಯುಗ ಬೇಗನೇ ಸಮೀಪಿಸುತ್ತಿರುವಾಗ, ಯಾವ ರೀತಿಯ ಅಂತರ್ರಾಷ್ಟ್ರೀಯ ವ್ಯವಸ್ಥೆಯಲ್ಲಿ ಜನ 21ನೇ ಶತಮಾನದಲ್ಲಿ ಬದುಕುತ್ತಾರೆ? ಈ ಪ್ರಶ್ನೆಯನ್ನು ಸರ್ವಗಂಭೀರತೆಯಿಂದ ಎಲ್ಲಾ ದೇಶಗಳ ಜನಗಳ ಮುಂದೆ ಇಡಲಾಗಿದೆ" ಎಂದಿದೆ ಈ ದಸ್ತಾವೇಜು.

ಈ ಪ್ರಶ್ನೆಗೆ ತಮ್ಮ ಎರಡು ದೇಶಗಳ ಉತ್ತರ ನೀಡುತ್ತಾ ತಮ್ಮ ನಿಲುವು ಏನೆಂದೂ ಈ ಜಂಟಿ ಹೇಳಿಕೆ ತಿಳಿಸಿದೆ -

"ವಿಶ್ವ ಶಾಂತಿ, ಅಭಿವೃದ್ಧಿ ಮತ್ತು ಮಾನವ ಕುಲದ ಭವಿಷ್ಯದ ಬಗ್ಗೆ ಚಾರಿತ್ರ್ಯದ ಜವಾಬ್ದಾರಿಯ ಭಾವನೆಯಿಂದ ನಾವು ಎರಡೂ ದೇಶಗಳು ಅಂತರ್ರಾಷ್ಟ್ರೀಯ ವ್ಯವಹಾರಗಳಲ್ಲಿ ನಿಕಟ ಸಂಯೋಜನೆ ಮತ್ತು ಸಹಕಾರದ ಪ್ರತಿಜ್ಞೆ ಮಾಡುತ್ತೇವೆ. ಸಮಾನ ಆಧಾರದ ಮೇಲೆ ಇತರ ಎಲ್ಲಾ ದೇಶಗಳೊಂದಿಗೆ ಸಾಮರಸ್ಯದ ಸಹ ಅಸ್ತಿತ್ವ ಮತ್ತು ಸಹಕಾರಕ್ಕೆ ನಾವು ಬದ್ಧ. ಈ ಮೂಲಕ ನಮ್ಮೆರಡು ದೇಶಗಳು ವಿಶ್ವದಲ್ಲಿ ಬಹುಕಾಲ ಬಾಳುವ ಗಟ್ಟಿಯಾದ ಶಾಂತಿಗೆ ಹಾಗೂ ಸರ್ವ ಮಾನವ ಕುಲದ ಪ್ರಗತಿಗೆ ನಮ್ಮ ಕೊಡುಗೆ ನೀಡುತ್ತೇವೆ"

ಐದು ದೇಶಗಳ ಒಪ್ಪಂದ

ಇದಲ್ಲದೆ ಸೇನಾ ಪಡೆಗಳ ಕಡಿತವನ್ನು ಕುರಿತಂತೆ ಚೀಣಾ, ರಶ್ಯಾ, ಕಝಖಿಸ್ತಾನ್, ಕಿರ್ಗಿಝ್‌ಸ್ತಾನ್ ಹಾಗೂ ತಾಜ್‌ಕಿಸ್ತಾನ್ ನಡುವೆ ಇನ್ನೊಂದು ಒಪ್ಪಂದವಾಗಿದೆ. ಈ ಐದು ದೇಶಗಳ ನಡುವೆ 7000 ಕಿ.ಮೀ.ಗಳಿಗೂ ಹೆಚ್ಚಿನ ಗಡಿಯಿದೆ. ಚೀಣಾ ಉಕ್ರೇನ್ ಮತ್ತು ಕಝಖಿಸ್ತಾನಕ್ಕೆ ಪರಮಾಣು ಭದ್ರತೆಯ ಆಶ್ವಾಸನ ನೀಡಿದೆ. ಇದಕ್ಕೆ ಮೊದಲು ಚೀಣಾ ಮತ್ತು ರಶ್ಯಾಗಳು ತಮ್ಮ ಪರಮಾಣು ಶಸ್ತ್ರಗಳನ್ನು ಪರಸ್ಪರರಿಗೆ ಗುರಿಯಾಗಿಡದಂತೆ ಮಾಡುವುದಾಗಿ ಹಾಗೂ ಪರಸ್ಪರರ ಮೇಲೆ ಪರಮಾಣು ಶಸ್ತ್ರಾಸ್ತ್ರಗಳನ್ನು ಮೊದಲಿಗೆ ಬಳಸುವುದಿಲ್ಲ ಎಂದೂ ಸಾರಿದವು.

ಒಂದು ವಿಶಿಷ್ಟ ರೀತಿಯ ಬಹುದೇಶೀಯ ಭದ್ರತಾ ಒಪ್ಪಂದವಾಗಿರುವ ಇದು ಏಶ್ಯಾ, ಶಾಂತಸಾಗರ ಪ್ರದೇಶದಲ್ಲಿ ಹಾಗೂ ಇಡೀ ವಿಶ್ವದಲ್ಲಿ ಶಾಂತಿ ಹಾಗೂ ಭದ್ರತೆಗೆ ಬಹಳ ಪ್ರಯೋಜನಕಾರಿ.

ರಶ್ಯಾಕ್ಕೆ ಭಾರತದ ಪ್ರಧಾನಮಂತ್ರಿಗಳ ಚಾರಿತ್ರಿಕ ಭೇಟಿಯ ಕೆಲವೇ ದಿನಗಳಲ್ಲಿ ಈ ಗಮನಾರ್ಹ ಬೆಳವಣಿಗೆಗಳಾಗಿವೆ. ಈ ಭೇಟಿಯ ಕಾಲದಲ್ಲಿ ಭಾರತ ಮತ್ತು ರಶ್ಯಾ ಕೂಡಾ ಅಂತರ್ರಾಷ್ಟ್ರೀಯ ಸಮಸ್ಯೆಗಳನ್ನು ಎದುರಿಸುವಲ್ಲಿ ತಮ್ಮ ಸಹ ಪಾತ್ರದ ಬಗ್ಗೆ ಸಾರಿದವು. ಇದಕ್ಕೆ ಮೊದಲು ಗಮನಾರ್ಹ ಸಕಾರಾತ್ಮಕ ಫಲ ನೀಡುವ ಭಾರತಕ್ಕೆ ಚೀಣಾದ ಅಧ್ಯಕ್ಷರುಗಳ ಭೇಟಿ ಹಾಗೂ ಈ ಎಲ್ಲಾ ಘಟನೆಗಳನ್ನು ಒಟ್ಟಾಗಿ ನೋಡಬೇಕು.

ಹೀಗೆ ಕಳೆದ ಕೆಲವು ತಿಂಗಳಲ್ಲಿ ಭಾರತ, ಚೀಣಾ ಮತ್ತು ರಶ್ಯಾ ಸ್ವತಂತ್ರವಾಗಿ ಹಾಗೂ ದ್ವಿಪಕ್ಷೀಯವಾಗಿ ತಮ್ಮ-ತಮ್ಮ ನಡುವೆ ಒಂದು ಹೆಚ್ಚಿನ ಸಹ ಭಾಗಿತ್ವ ಮತ್ತು ಸಹಕಾರವನ್ನು ವಿಕಾಸಗೊಳಿಸುವತ್ತ ಸಾಗುತ್ತಿವೆ. ಇದು ವಿಶ್ವದ ಘಟನೆಗಳ ಮೇಲೆ ದೀರ್ಘಕಾಲದ ಪ್ರಭಾವ ಬೀರಲಿವೆ. ಈ ಮೂರು ದೇಶಗಳಲ್ಲಿ ವಿಶ್ವದ ಬಹುಪಾಲು ಜನ ವಾಸಿಸುತ್ತಿದ್ದಾರೆ ಎಂಬ ಕಾರಣಕ್ಕಾಗಿಯಷ್ಟೇ ಅಲ್ಲ ಚೀಣಾ, ರಶ್ಯಾ ವಿಶ್ವ ಸಂಸ್ಥೆಯ ಶಾಶ್ವತ ಸದಸ್ಯರಾಗಿರುವುದು ಹಾಗೂ ಭಾರತ ಅಲಿಪ್ತ ಆಂದೋಲನದ ಪ್ರಮುಖ ಮುಖಂಡನಾಗಿರುವುದರಿಂದ ಇವು ಒಟ್ಟಾಗಿ 21ನೇ ಶತಮಾನದಲ್ಲಿ ಅಂತರ್ರಾಷ್ಟ್ರೀಯ ಸಂಬಂಧಗಳ ರೂಪುರೇಷೆಗಳ ಮೇಲೆ ಪ್ರಭಾವ ಬೀರುವ ಸನ್ನಿವೇಶದಲ್ಲಿದ್ದ.

ಈ ಕಾರಣಕ್ಕಾಗಿಯೇ ಒಂದೆಡೆ ಜಗತ್ತಿನ ಪ್ರಗತಿಪರ ಶಕ್ತಿಗಳು ಸ್ವಾಗತಿಸುತ್ತಿರುವಾಗ ಇನ್ನೊಂದೆಡೆ ಅಮೇರಿಕನ್ ಸಾಮ್ರಾಜ್ಯಶಾಹಿ ಹಾಗೂ ಅವರ ಸಿದ್ಧಾಂತಿಗಳು ಆಶ್ಚರ್ಯಚಕಿತರಾಗಿದ್ದಾರೆ-ಭಾರತ, ಚೀಣಾ ಮತ್ತು ರಶ್ಯಾಗಳ ಈ ಸಮಾನ ಅಂಶ ವಿಶ್ವ ರಾಜಕೀಯದ ಮೇಲೆ ಬೀರಬಹುದಾದ ಪರಿಣಾಮಗಳ ಬಗ್ಗೆ. ಈ ಭೇಟಿ ಮತ್ತು ಅದರ ಪರಿಣಾಮಗಳು ಅಮೇರಿಕನ್ ಸಾಮ್ರಾಜ್ಯಗಳಲ್ಲಿ ನಡುಕ ಹುಟ್ಟಿಸಿದೆಯೆಂದು ವಾಲ್ ಸ್ಟ್ರೀಟ್ ಜರ್ನಲ್ ಪತ್ರಿಕೆ ಬಹಿರಂಗವಾಗಿಯೇ ಒಪ್ಪಿಕೊಂಡಿದೆ. ಏಕೆಂದರೆ ಈ ಮೂರು ದೇಶಗಳ ಪರಸ್ಪರ ದ್ವಿಪಕ್ಷೀಯ ಘೋಷಣೆಯಲ್ಲಿ ಸೂಚಿಸಿರುವ ಹೊಸ ವಿಶ್ವ ವ್ಯವಸ್ಥೆ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಹೊಸ ಅಲಿಪ್ತ ವ್ಯವಸ್ಥೆಯ ಕಣ್ಣೋಟಕ್ಕೆ ತದ್ವಿರುದ್ಧವಾಗಿದೆ. ವಿಶ್ವ ರಾಜಕೀಯ ಮತ್ತು ಆರ್ಥಿಕ ರಂಗಗಳಲ್ಲಿ ತನ್ನ ಪ್ರಾಬಲ್ಯ ಹೇರುವ ಪ್ರಯತ್ನಗಳು, ಮಿಲಿಟರಿ ವಲಯದಲ್ಲಿನ ಸಂಚಿನ ಪ್ರಯತ್ನಕ್ಕೆ ಪೂರಕವಾಗಿವೆ. ನ್ಯಾಟೋವನ್ನು ಪೂರ್ವ ಯೂರೋಪಿಗೆ ವಿಸ್ತರಿಸುವ ಪ್ರಯತ್ನ, ಇದಕ್ಕೆ ರಶ್ಯಾದ ವಿರೋಧವನ್ನು ಪರಿಶೀಲಿಸಲು ನಿರಾಕರಿಸಿರುವುದು ವಿಶ್ವದ ಮೇಲೆ ಅಮೇರಿಕನ್ ಮಿಲಿಟರಿ ಯಜಮಾನಿಕೆ ಹೇರುವ ಒಂದು ಪ್ರಯತ್ನ. ರಶ್ಯಾ ಮತ್ತು ಚೀಣಾ, ಚೀಣಾ ಮತ್ತು ಭಾರತ ಹಾಗೂ ಭಾರತ ಮತ್ತು ರಶ್ಯಾದ ನಡುವಿನ ಮಹತ್ವದ ಸಹಭಾಗಿತ್ವ ಅಮೇರಿಕನ್ ಮಿಲಿಟರಿ ಪ್ರಯತ್ನಗಳಿಗೆ ಕಂಡು ಬರುತ್ತಿರುವ ಪ್ರತಿರೋಧವನ್ನು ದೊಡ್ಡ ಪ್ರಮಾಣದಲ್ಲಿ ಬಲಗೊಳಿಸುತ್ತವೆ.

ಸಾರಾಂಶವೆಂದರೆ, ರಶ್ಯಾಕ್ಕೆ ಚೀಣಾದ ಅಧ್ಯಕ್ಷರ ಭೇಟಿ, ಇದಕ್ಕೆ ಸಂಬಂಧಪಟ್ಟ ಬೆಳವಣಿಗೆಗಳು ವಿಶ್ವದಲ್ಲಿ ಶಾಂತಿ ಮತ್ತು ಪ್ರಗತಿಯ ಪ್ರಕ್ರಿಯೆಯನ್ನು ಬಲಗೊಳಿಸುತ್ತವೆ. ಈ ಮೂಲಕ ಈ ಗ್ರಹದ ಮೇಲೆ ವಾಸಿಸಿರುವ ಕೋಟ್ಯಾಂತರ ಜನಗಳ ಭಾವನೆಗಳನ್ನು ಪ್ರತಿಧ್ವನಿಸುತ್ತಿವೆ.

ಲೋಕಸಂಚಾರ



ಶರತ್‌ಚಂದ್ರ

ಧರ್ಮಕಾರಣ - ಸರಕಾರದ ಕ್ರಮಕ್ಕೆ 'ಚಿಂತನ' ದ ಖಂಡನೆ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದ ಪಿ.ವಿ.ನಾರಾಯಣ ಅವರ ಧರ್ಮಕಾರಣ ಕಾದಂಬರಿಯನ್ನು ಸರ್ಕಾರ ಮುಟ್ಟುಗೋಲು ಹಾಕಲು ನಿರ್ಧರಿಸಿದ್ದನ್ನು 'ಚಿಂತನ ಉತ್ತರ ಕನ್ನಡ' ಬಲವಾಗಿ ಖಂಡಿಸಿದ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನೇ ಕಸಿದುಕೊಳ್ಳುವಂತಹ ಸರಕಾರದ ಕ್ರಮವನ್ನು ಎಲ್ಲಾ ಪ್ರಜ್ಞಾವಂತರು, ಬರಹಗಾರರು, ಚಿಂತಕರು ಒಕ್ಕೊರಲಿನಿಂದ ವಿರೋಧಿಸಬೇಕು ಎಂದು ವಿನಂತಿ ಮಾಡಿದೆ.

ಹಿಂದೆ 'ಮಹಾಚೈತ್ರ', ಇಂದು 'ಧರ್ಮಕಾರಣ' ಮುಂದೆ ಇನ್ನಾವುದೋ ಕೃತಿ. ಪಟ್ಟಭದ್ರ ಕೋಮುವಾದಿ ಶಕ್ತಿಗಳ ವಿರೋಧಕ್ಕೆ ತುತ್ತಾಗುತ್ತದೆ. ಇಂತಹ ಸಂದರ್ಭದಲ್ಲೆಲ್ಲ ಕೃತಿಯನ್ನು ಸಾಮೂಹಿಕ ಚರ್ಚೆಗೆ ಒಳಪಡಿಸುವ ಬದಲು ಸರಕಾರವೇ ಮಧ್ಯ ಪ್ರವೇಶಿಸಿ, ಸ್ಥಾಪಿತ ಹಿತಾಸಕ್ತಿಗಳಿಗೆ ಮಣಿದು ಕೃತಿಯನ್ನು ಮುಟ್ಟುಗೋಲು ಹಾಕಿರುವ ಕ್ರಮ ಫ್ಯಾಸಿಸ್ಟ್ ಮನೋಭಾವದಿಂದ ಕೂಡಿದ್ದೇ ಹೊರತು ಬೇರೇನೂ ಅಲ್ಲ.

ಧರ್ಮಕಾರಣ ಕೃತಿ ಅತ್ಯುತ್ತಮ ಕೃತಿಯೆಂದೇನೂ ನಾವು ತಿಳಿದಿಲ್ಲ, ಇದರ ಮೌಲ್ಯ ವಿವೇಚನೆಗೆ ವಿಮರ್ಶೆಗೆ ಬಿಟ್ಟಿದ್ದು. ಕೃತಿಯ ಬಗ್ಗೆ ಅಸಹನೆ, ಅನುಮಾನಗಳಿದ್ದಲ್ಲಿ ಬಹಿರಂಗವಾಗಿ ಚರ್ಚೆ ಮಾಡಲಿ. ಕೃತಿಯ ವಸ್ತುನಿಷ್ಠ ವಿಮರ್ಶೆಯ ಮೂಲಕ ಅದರ ದೌರ್ಬಲ್ಯಗಳನ್ನು ಎತ್ತಿ ಹೇಳಲಿ. ಬದಲಾಗಿ ಪ್ರತಿಭಟನೆಯ ಮಾರ್ಗ ಸರಿಯಲ್ಲ, ಇದು ಸಂಕುಚಿತ ಜಾತಿವಾದಿ ಮನಸ್ಥಿತಿಯೇ ಹೊರತು ಆರೋಗ್ಯಪೂರ್ಣ ಮನಸ್ಸಿನ ಪ್ರತಿಕ್ರಿಯೆಯಲ್ಲ ಎಂದು 'ಚಿಂತನ' ಉತ್ತರಕನ್ನಡದ ಸಂಚಾಲಕರಾದ ವಿಠ್ಠಲ ಭಂಡಾರಿ, ಕಿರಣಭಟ್ಟ ರವರು ಅಭಿಪ್ರಾಯ ಪಟ್ಟಿದ್ದಾರೆ.

ಸೀಟುವಿನಿಂದ ರಸ್ತೆ ತಡೆ

ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಕರೆಯ ಮೇರೆಗೆ ಉ.ಕ. ಜಿಲ್ಲೆಯ ಹೊನ್ನಾವರದಲ್ಲಿ ಎರಡನೇ ಹಂತದ ಹೋರಾಟವಾಗಿ ಮಾರ್ಚ್ 27ರಂದು ರಸ್ತೆತಡೆಕಾರ್ಯಕ್ರಮವನ್ನುಸ್ಥಳೀಯಘಟಕನಡೆಸಿತು.

ಹಂಚಿನ ಕಾರ್ಖಾನೆಗಳಿಂದ ಮೆರವಣಿಗೆಯಲ್ಲಿ ಬಂದ 700 ಕ್ಕೂ ಹೆಚ್ಚು ಕಾರ್ಮಿಕರು ರಾಷ್ಟ್ರೀಯ ಹೆದ್ದಾರಿ-17 ರಲ್ಲಿ ಘೋಷಣೆ ಕೂಗುತ್ತಾ ರಸ್ತೆ ತಡೆ ನಡೆಸಿದರು. ಅಲ್ಲಿ ಸೇರಿದ ಸಭೆಯನ್ನು ಉದ್ದೇಶಿಸಿ ಕಾರ್ಮಿಕ ನಾಯಕ ತಿಲಕಗೌಡ ಸಭೆಯನ್ನುದ್ದೇಶಿಸಿ ಮಾತನಾಡಿದರು. ನಂತರ ಇವರನ್ನೆಲ್ಲ ಬಂಧಿಸಿ ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದ ನೇತೃತ್ವವನ್ನು ಕಾಂ|| ತಿಲಕಗೌಡ, ರಾಮಾಶಿವಯ್ಯ ಗೌಡ, ಸೂರ್ಯಮಂಜುಗೌಡ, ದಯಾನಂದ ಗೌಡ, ಶಿವಾನಂದ ನಾಯಕ, ಮಂಜುನಾಥ ಗೌಡ, ಕೃಷ್ಣೇಗೌಡ, ಮಂಜು ನಾರಾಯಣಗೌಡ, ಸೀತಾರಾಂ ಗೌಡ, ರಾಮಾಗೌಡ ಅವರು ವಹಿಸಿದ್ದರು.

ಸಿದ್ದಾಪುರ ತಾಲೂಕಿನ ಅಂಗನವಾಡಿ ನೌಕರರ ಯಶಸ್ವಿ ಸಮ್ಮೇಳನ

ಈ ದೇಶದಲ್ಲಿ ಸುಮಾರು ಏಳರಿಂದ ಎಂಟುಲಕ್ಷ ಅಂಗನವಾಡಿ ಕಾರ್ಯಕರ್ತೆಯರು ದುಡಿಯುತ್ತಿದ್ದಾರೆ. ಗೌರವಧನ ಎಂಬ ಹಣ ಪಟ್ಟಿಯಡಿಯಲ್ಲಿ ಅವರನ್ನು ಶೋಷಿಸುತ್ತಿದ್ದಾರೆ. ಪ್ರತಿಹಳ್ಳಿ ಹಳ್ಳಿಗಳಲ್ಲಿ ದುಡಿಯುತ್ತಿರುವ ಈ ಕಾರ್ಯಕರ್ತರಿಗೆ

ಉತ್ತರ ಕನ್ನಡ ಜಿಲ್ಲಾ ಪತ್ರ

ಯಾವುದೇ ರಕ್ಷಣೆ ಇಲ್ಲ. ಪುಂಡುಪೋಕರಿಗಳ ಲೈಂಗಿಕ ಕೀಟಲೆ, ಅತ್ಯಾಚಾರಗಳಿಗೆ ಒಳಗಾಗಬೇಕಾದ ಸಂದರ್ಭ ಕರ್ನಾಟಕದಲ್ಲಿದೆ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಹೇಳಿದರು. ಅವರು ಮಾರ್ಚ್ 29ರಂದು ಸಿದ್ದಾಪುರದ(ಉತ್ತರ ಕನ್ನಡ) ಸಮಾಜ ಮಂದಿರಲ್ಲಿ ಜರುಗಿದ ಅಂಗನವಾಡಿ ನೌಕರರ ಪ್ರಥಮ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡು ತ್ತಿದ್ದರು. ಮುಂದುವರಿದು "ಅಂಗನವಾಡಿನೌಕರರು ತಮ್ಮ ಹಕ್ಕು ಮತ್ತು ಅಗತ್ಯತೆಗಳನ್ನು ಪಡೆಯಲು ಹೋರಾಟಕ್ಕೆ ಅಣಿ ಆಗಬೇಕು" ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡ ಜಿಲ್ಲಾ ಪಂಚಾಯತ್ ಸದಸ್ಯೆ ಪ್ರೇಮಾನಾಯ್ಕ ಮಾತನಾಡಿ ಸಮ್ಮೇಳನಕ್ಕೆ ಶುಭಕೋರಿದರು. ಡಿವೈಎಫ್ಐ ರಾಜ್ಯಾಧ್ಯಕ್ಷ ಶಾಂತರಾಮ ನಾಯಕ ಮಾತನಾಡಿ "ವಿಧಾನ ಸಭೆ ಮತ್ತು ಸಂಸತ್ತಿನಲ್ಲಿ 1/3 ಮಹಿಳಾ ಮೀಸಲಾತಿ ಕೊಡಬೇಕು ಎಂದಾಗ ಕೆಲವು ರಾಜಕೀಯ ಪಕ್ಷದ ಜನ ಪ್ರತಿನಿಧಿಗಳು ಇದನ್ನು ವಿರೋಧಿಸಿದರು. ಎಡಪಕ್ಷಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ಪಕ್ಷಗಳು ಮನಃಪೂರ್ತಿ ಇದನ್ನು ಬೆಂಬಲಿಸಲಿಲ್ಲ. ತನ್ನ ಪ್ರಣಾಳಿಕೆಯಲ್ಲಿ ಪ್ರಕಟಿಸಿದ ಈಗಿನ ಸರಕಾರ ಕೂಡ ಈ ಮಸೂದೆಯನ್ನು ಜಾರಿಗೆ ತರುವಲ್ಲಿ ಮೀನಮೇಷ ಎಣಿಸುತ್ತಿದೆ" ಎಂದು ಸರಕಾರವನ್ನು ತರಾಟೆಗೆ ತೆಗೆದುಕೊಂಡರು. ಈ ಸಮ್ಮೇಳನ ಇಂತಹ ಹಕ್ಕಿಗಾಗಿ ಒತ್ತಾಯಿಸಬೇಕು, ಸ್ತ್ರೀಯರನ್ನು ಕಡೆಗಣಿಸುವ ನೀತಿ ಖಂಡನೀಯ ಎಂದು ಹೇಳಿದರು.

ವೇದಿಕೆಯ ಮೇಲೆ ಉಪಸ್ಥಿತರಿದ್ದ ವಿಠ್ಠಲ ಭಂಡಾರಿಯವರು ಮಾತನಾಡಿ 'ನಮ್ಮನ್ನು ಉದ್ಧರಿಸುವ ಯಾವುದೇ ಅವತಾರ ಪುರುಷ ಬರುವುದಿಲ್ಲ. ನಮ್ಮ ಬಿಡುಗಡೆ ನಮ್ಮ ಹೋರಾಟದಿಂದಲೇ ಮಾತ್ರ ಸಾಧ್ಯ. ಇದಕ್ಕೆ ಗುರಿ ತಲುಪುವವರೆಗೂ ಸಂಘಟನಾತ್ಮಕ ಹೋರಾಟ ಅನಿವಾರ್ಯ. ನಮ್ಮ ಬೇಡಿಕೆಗಳೊಂದಿಗೆ ಇನ್ನಿತರ ಸಂಘಟನೆಗಳೊಂದಿಗೆ (ಪ್ರಜಾಸತ್ತಾತ್ಮಕ, ಸಮಾನ ನೀತಿಯ) ಸೇರಿ ಐಕ್ಯ ಹೋರಾಟವನ್ನು ಕೂಡ ನಡೆಸಬೇಕು" ಎಂದರು. ಸೌಹಾರ್ದ ಪ್ರತಿನಿಧಿ ಯಶೋಧ ಶಾಸ್ತ್ರಿ ಶುಭ ಹಾರೈಸಿದರು.

ಸಭೆಯ ಅಧ್ಯಕ್ಷತೆಯನ್ನು ಕಾಂ.। ಟಿ.ಎಸ್.ನಾಯ್ಕ ವಹಿಸಿದ್ದು. ದುಡಿಯುವ ವರ್ಗದ ಹೋರಾಟದ ಸ್ವರೂಪ ಮತ್ತು ಅದರಲ್ಲಿ ಸಿಐಟಿಯುವಿನ ಮಹತ್ವವನ್ನು ವಿವರಿಸಿದರು.

ಪ್ರಾರಂಭದಲ್ಲಿ ಸುಮಂಗಲಾ ಹೆಗಡೆ ಸ್ವಾಗತಿಸಿದರು. ರಾಜ್ಯ ಸಮಿತಿ ಸದಸ್ಯೆ ಸವಿತಾ ತನ್ಮಡಗಿ ವಂದಿಸಿದರು. ಮಧ್ಯಾಹ್ನ ನಡೆದ ಪ್ರತಿನಿಧಿ ಅಧಿವೇಶನದಲ್ಲಿ ಗೀತಾ.ಎಚ್.ಕೆ ಮತ್ತು ಸುಮಂಗಲಾ ಹೆಗಡೆ ಇವರು ಕಾರ್ಯದರ್ಶಿ ಮತ್ತು ಅಧ್ಯಕ್ಷರಾಗಿರುವ ತಾಲ್ಲೂಕು ಸಮಿತಿಯನ್ನು ಆರಿಸಲಾಯಿತು.

ಕೊನೆಗೂ ಬರುತ್ತಿದೆ ರಾಷ್ಟ್ರೀಯ ಕ್ರೀಡಾಕೂಟ

ನಾಲ್ಕನೇ ರಾಷ್ಟ್ರೀಯ ಕ್ರೀಡಾಕೂಟ ಮುಂಬರುವ ಮೇ31 ರಿಂದ ಜೂನ್ 11 ರವರೆಗೆ ಬೆಂಗಳೂರು ಮತ್ತು ಮೈಸೂರು ಮಹಾನಗರಗಳಲ್ಲಿ ಏಕ ಕಾಲಕ್ಕೆ ಕೊನೆಗೂ ನಡೆಯಲಿದೆ. ಕ್ರೀಡಾಂಗಣಗಳ ನಿರ್ಮಾಣವೂ ಸೇರಿದಂತೆ ಈ ಕ್ರೀಡಾಕೂಟಕ್ಕೆ ತಗುಲಿರುವ ಅಂದಾಜು ವೆಚ್ಚ 130 ಕೋಟಿ ರೂಪಾಯಿ.ಭಾರತದ ಒಲಿಂಪಿಕ್ಸ್ ಎಂದೇ ಛಾಪಿಸಲಾದ ಈ ಕ್ರೀಡಾಕೂಟದಲ್ಲಿ ರಾಷ್ಟ್ರಾದ್ಯಂತದಿಂದ ಬರುವ 5000 ಕ್ಕೂ ಹೆಚ್ಚು ಖ್ಯಾತ ವಿಖ್ಯಾತ ಕ್ರೀಡಾಪಟುಗಳು, 1000 ಮಂದಿ ಅಧಿಕಾರಿಗಳು ಮತ್ತು ತರಬೇತುದಾರರು ತಮ್ಮ ಪ್ರತಿಭೆ ಮತ್ತು ಚಾಕಚಕ್ಯತೆಯನ್ನು 27 ಕ್ರೀಡೆಗಳಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಪಣಕ್ಕೆ ಒಡ್ಡುವುದನ್ನು ಕಣ್ಣಾರೆ ಕಾಣುವ ಅವಕಾಶ.

ಬೆಂಗಳೂರು ಮಹಾನಗರದ ಹೃದಯ ಭಾಗದಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಕಂಠೀರವ ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣಗಳು ಈ ಕ್ರೀಡಾಕೂಟಕ್ಕೆಂದೇ ಸುಮಾರು 40 ಕೋಟಿ ರೂಪಾಯಿಗೂ ಅಧಿಕ ವೆಚ್ಚದಲ್ಲಿ ಅಂತರ್‌ರಾಷ್ಟ್ರೀಯ ಗುಣಮಟ್ಟಕ್ಕೆ ಅನುಗುಣವಾಗಿ ಪುನರ್‌ನಿರ್ಮಾಣಗೊಳ್ಳುತ್ತಿವೆ. ನವನವೀನ ರೂಪ ಪಡೆದು ಅತ್ಯಾಧುನಿಕ ಸಾಧನ ಸಲಕರಣೆಗಳೊಂದಿಗೆ ಸಜ್ಜುಗೊಳ್ಳುತ್ತಿರುವ ಅದರ ಬೃಹತ್ ಒಳ ಹಾಗೂ ಹೊರ ಕ್ರೀಡಾಂಗಣಗಳು, ಕೋರಮಂಗಲ ಒಳಾಂಗಣ ಕ್ರೀಡಾಂಗಣ ಹಾಗೂ ಮೈಸೂರಿನಲ್ಲಿ ನವನವೀನವಾಗಿ ನಿರ್ಮಾಣಗೊಳ್ಳುತ್ತಿರುವ ಒಳಾಂಗಣ ಕ್ರೀಡಾಂಗಣಗಳು ಇನ್ನು ಮುಂದೆ ಕರ್ನಾಟಕ ಕ್ರೀಡಾ ಪ್ರೇಮಿಗಳಿಗೆ ದೊರೆಯಬಹುದಾದ ಆಸ್ತಿಗಳು.

ಕೊಠಡಿಗಳಿಂದ ಹಿಡಿದು ಸ್ಪರ್ಧಾ ಕಣಗಳ ತನಕ ಇಲ್ಲಿನ ಎಲ್ಲ ಭಾಗಗಳೂ ಸಮಕಾಲೀನ ಕ್ರೀಡಾ ಜಗತ್ತಿನ ಎಲ್ಲ ಸಾಧನ ಸಾಮಾಗ್ರಿ ಮತ್ತು ಸಲಕರಣೆಗಳನ್ನು ಒಳಗೊಂಡಂಥವು ಎನ್ನಲಾಗಿದೆ.

ದೆಹಲಿಯ ಇಂದ್ರಪ್ರಸ್ಥ ಸ್ಟೇಡಿಯಂ ಬಿಟ್ಟರೆ ದಕ್ಷಿಣ ಭಾರತದಲ್ಲೇ ಅತ್ಯಂತ ಬೃಹತ್ತಾದ, ಅತ್ಯಾಧುನಿಕ ಹಾಗೂ ಸುಸಜ್ಜಿತ ಸ್ಟೇಡಿಯಂ ಎಂಬ ಹೆಗ್ಗಳಿಕೆ ಇನ್ನು ನಮ್ಮ ಕಂಠೀರವ ಕ್ರೀಡಾಂಗಣದ್ದು. ಈ ವಿಶಾಲ ಒಳಾಂಗಣ ಕ್ರೀಡಾಂಗಣದಲ್ಲಿ ಕ್ರೀಡಾ ಸ್ಪರ್ಧೆಯ ಸ್ಥಳ 65 ಮೀಟರ್ ಉದ್ದ ಮತ್ತು 35 ಮೀಟರ್ ಅಗಲ ಹೊಂದಿದೆ.

ಒಳಾಂಗಣದಲ್ಲಿ ನಡೆಯುವ ಸ್ಪರ್ಧೆಗಳನ್ನು ಒಳಗೇ ಕುಳಿತು ಏಕ ಕಾಲಕ್ಕೆ ಸುಮಾರು 5000 ಮಂದಿ ವೀಕ್ಷಿಸಬಹುದಂತೆ.

4 ಬಾರಿ ಮುಂದೂಡಿಕೆ

ಈ ರಾಷ್ಟ್ರೀಯ ಕ್ರೀಡಾಕೂಟ 1996 ಜನವರಿ 28 ರಿಂದ ಫೆಬ್ರವರಿ 4 ರವರೆಗೆ ನಡೆಯಬೇಕಿತ್ತು. ಆದರೆ ಕೋಟ್ಯಾಂತರ ರೂಪಾಯಿ ವೆಚ್ಚದ ಈ ಬೃಹತ್ ಕ್ರೀಡಾಕೂಟಕ್ಕಾಗಿ ಅಂತರಾಷ್ಟ್ರೀಯ ಗುಣಮಟ್ಟದ ಸ್ಟೇಡಿಯಂಗಳ ನಿರ್ಮಾಣಕಾರ್ಯ ನಿಗದಿತ ವೇಳೆಗೆ ಪೂರ್ಣಗೊಳ್ಳುವುದು ಸಾಧ್ಯವಾಗಲಿಲ್ಲ.

ರಾಷ್ಟ್ರಪತಿ ಡಾ|| ಶಂಕರ ದಯಾಳ ಶರ್ಮ ಅವರು ಮೇ 31 ರಂದು ಕ್ರೀಡಾಂಗಣದಲ್ಲಿ ನಡೆವ ವರ್ಣರಂಜಿತ ಸಮಾರಂಭದಲ್ಲಿ ಈ ರಾಷ್ಟ್ರೀಯ ಕ್ರೀಡಾಕೂಟವನ್ನು ಉದ್ಘಾಟಿಸಲು ಈಗಾಗಲೇ ಒಪ್ಪಿಕೊಂಡಿದ್ದಾರಂತೆ. ಜೂನ್ 11 ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಪ್ರಧಾನ ಮಂತ್ರಿ ಐ.ಕೆ.ಗುಜ್ರಾಲ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು.

ಈ ಕ್ರೀಡಾ ಕೂಟಕ್ಕಾಗಿ ವ್ಯವಸ್ಥಾಪಕ ಸಮಿತಿಯು ಕೇಂದ್ರ ಸರಕಾರದಿಂದ 20 ಕೋಟಿ ರೂ ನೆರವನ್ನು ಯಾಚಿಸಿತ್ತು. ಆದರೆ ಈ ದಿಸೆಯಲ್ಲಿ ಇದುವರೆಗೆ ಕೇಂದ್ರದಿಂದ ಲಭ್ಯವಾದ ಹಣ 9.5 ಕೋಟಿ ಮಾತ್ರ. ಇಷ್ಟರಲ್ಲೇ ಇನ್ನೂ 1.5 ಕೋಟಿ ಲಭ್ಯವಾಗುವ ನಿರೀಕ್ಷೆ.

ಪ್ರಾಯೋಜಕತ್ವ

ಪ್ರಾಯೋಜಕತ್ವದ ಮೂಲಕವೇ ಸುಮಾರು 50 ಕೋಟಿಗೂ ಹೆಚ್ಚು ಹಣವನ್ನು ಕ್ರೋಢೀಕರಿಸಲು ಯೋಚಿಸಲಾಗಿತ್ತು. ಹೀಗೆ ಈ ಪ್ರಾಯೋಜಕತ್ವದ ರೂಪದಲ್ಲಿ ವಿನಿಯೋಗಿಸುವ ಹಣಕ್ಕೆ ಶೇಕಡಾ 100 ರಷ್ಟು ಆದಾಯ ತೆರಿಗೆ ವಿನಾಯ್ತಿಯನ್ನೂ ಘೋಷಿಸಲಾಗಿತ್ತು. ಆದರೂ ಹೇಳಿಕೊಳ್ಳುವಂಥ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ. ಆದರೆ ಈಗ ಕೆಲವು ಕಂಪನಿಗಳು ಮುಂದೆ ಬರುತ್ತಿವೆಯಂತೆ.

– ವಿಶ್ವ

ಭವಿಷ್ಯ ನಿಧಿ: ಅಪೂರ್ಣ ಪ್ರಕಟಣೆಯೇಕೆ? ಸಿಐಟಿಯು ಪ್ರಶ್ನೆ

ಭವಿಷ್ಯ ನಿಧಿಗೆ ಕೊಡುಗೆಯ ಪ್ರಮಾಣವನ್ನು 8.33% ದಿಂದ 10% ಕ್ಕೇರಿಸುವ ಬಗ್ಗೆ ಸರಕಾರ ಪ್ರಕಟಣೆ ಹೊರಡಿಸಿದೆ. ಹಣಕಾಸು ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಈ ಬಗ್ಗೆ ಹೇಳಿದ್ದರು. ಅದೇ ಭಾಷಣದಲ್ಲಿ ಈಗಾಗಲೇ 10% ಕೊಡುತ್ತಿರುವವರಿಗೆ ಅದನ್ನು 12% ಕ್ಕೇರಿಸುವ ಬಗ್ಗೆಯೂ ಹೇಳಲಾಗಿತ್ತು. ಆದರೆ ಸರಕಾರ ಹೊರಡಿಸಿದ ಪ್ರಕಟಣೆಯಲ್ಲಿ ಈ ಬಗ್ಗೆ ಪ್ರಸ್ತಾಪವೇ ಇಲ್ಲ. ಈ ರೀತಿಯಲ್ಲಿ ಇದು ಅಪೂರ್ಣ ಪ್ರಕಟಣೆ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆಯವರು ಕೇಂದ್ರ ಕಾರ್ಮಿಕ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ದೂರಿದ್ದಾರೆ.

ಇಂತಹ ಭಾಗಶಃ ಸರಕಾರಿ ಪ್ರಕಟಣೆ ಸಂಬಂಧಪಟ್ಟ ಎಲ್ಲದರಲ್ಲೂ ಸಂಶಯ ಮೂಡಿಸುತ್ತದೆ ಎಂಬುದನ್ನು ಮಂತ್ರಿಗಳು ಗಮನಿಸಬೇಕೆಂದು ಹೇಳಿರುವ ಪಂಧೆಯವರು ಈ ಪತ್ರ ಇದಕ್ಕೆ ಸಂಬಂಧಪಟ್ಟ ಶಾಸನದ ತಿದ್ದುಪಡಿ ಅಗತ್ಯವಿದ್ದರೆ ಈ ಬಗ್ಗೆ, ಪ್ರಕಟಣೆಯಲ್ಲಾಗಲೀ, ಪತ್ರಿಕಾ ಹೇಳಿಕೆಯಲ್ಲಾಗಲೀ, ಪ್ರಸ್ತಾಪವಿರಬೇಕಿತ್ತು. ಅಥವಾ ಸುಗ್ರೀವಾಜ್ಞೆ ಹೊರಡಿಸಬಹುದಿತ್ತು ಎಂದು ಪಂಧೆ ಹೇಳಿದ್ದಾರೆ.

ಭವಿಷ್ಯ ನಿಧಿ ಕೊಡುಗೆಯನ್ನು 10% ದಿಂದ 12% ಕ್ಕೇರಿಸುವ ಸರಕಾರದ ವಚನವನ್ನು ಪಾಲಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಿಐಟಿಯು ಒತ್ತಾಯಿಸಿದೆ.

ಪ್ರಸಾರ ಮಸೂದೆಗೆ ಸಿಪಿಐ(ಎಂ) ವಿರೋಧ

ಸ್ವಾಯತ್ತ ಸಾರ್ವಜನಿಕ ಪ್ರಸಾರ ವ್ಯವಸ್ಥೆಯ ಬದಲು ಖಾಸಗಿಯವರಿಗೆ ಕುಮ್ಮಕ್ಕು

ಪ್ರಸಾರ ಮಸೂದೆಯ ಉದ್ದೇಶ ಮತ್ತು ದಿಕ್ಕಿನ ಬಗ್ಗೆ ಗಂಭೀರ ಆಕ್ಷೇಪಗಳಿದ್ದರೂ ಗುಜ್ರಾಲ್ ಸಚಿವ ಸಂಪುಟ ಅದೇ ದಿಕ್ಕಿನಲ್ಲಿ ಮುಂದುವರೆಯಲು ನಿರ್ಧರಿಸಿರುವುದು ದುರದೃಷ್ಟಕರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ಪ್ರಸಾರ ಭಾರತಿ ಕಾನೂನಿನ ಅಂಶಗಳನ್ನು ಈಗಿನ ಅವಶ್ಯಕತೆಗೆ ಅನುಸಾರವಾಗಿ ಸುಧಾರಿಸಿ ಒಂದು ಸ್ವಾಯತ್ತ ಸಾರ್ವಜನಿಕ ಪ್ರಸಾರ ವ್ಯವಸ್ಥೆಗೆ ಅವಕಾಶ ಮಾಡುವ ಬದಲು ಈ ಮಸೂದೆ ಇಡೀ ಇಲೆಕ್ಟ್ರಾನಿಕ್ ಮಾಧ್ಯಮವನ್ನು ಖಾಸಗೀಕರಿಸುವ, ವಿದೇಶಿ ಗುತ್ತೇದಾರಿ ಕಂಪನಿಗಳಿಗೆ ಬೇಕಾಬಿಟ್ಟಿ ಸ್ವಾತಂತ್ರ್ಯ ಕೊಡುವ ಪರಿಸ್ಥಿತಿ ನಿರ್ಮಾಣ ಮಾಡುತ್ತವೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಭಾರತದಲ್ಲಿ ಮಾಧ್ಯಮ ಕಂಪನಿಗಳಲ್ಲಿ ವಿದೇಶಿ ಕಂಪನಿಗಳಿಗೆ 49% ಪಾಲು ಹೊಂದಲು ಅವಕಾಶ, ವಿದೇಶಿ ಉಪಗ್ರಹ ಚಾನೆಲ್‌ಗಳಿಗೆ ಇತರ ಸೌಲಭ್ಯಗಳು ದೇಶೀ ಮಾಧ್ಯಮವನ್ನು ಮುಳುಗಿಸಿ ಬಿಡುತ್ತವೆ. ವಿ.ಪಿ.ಸಿಂಗ್ ಸರಕಾರ ತಂದ ದೂರದರ್ಶನ ಮತ್ತು ಆಕಾಶವಾಣಿ ಸ್ವಾಯತ್ತತೆ ನೀತಿ ಒಂದು ಸಾರ್ವಜನಿಕ ಪ್ರಸಾರ ವ್ಯವಸ್ಥೆಯನ್ನು ಬಲಪಡಿಸುವ ಪ್ರಸಾರ ಭಾರತಿ ಕಾನೂನಿನ ಉದ್ದೇಶವನ್ನು ಗುಜ್ರಾಲ್ ಸರಕಾರದ ಒಂದು ನಿರ್ಣಯ ಬುಡಮೇಲು ಮಾಡುತ್ತಿರುವುದು ಆಶ್ಚರ್ಯಕರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ದೇಶದಲ್ಲಿ ಇಲೆಕ್ಟ್ರಾನಿಕ್ ಮಾಧ್ಯಮದ ಭವಿಷ್ಯದ ಬಗ್ಗೆ ಪೂರ್ಣ ಚರ್ಚೆಯಾಗದೆ ಈ ಪ್ರಸಾರ ಮಸೂದೆ ಹಾಗೂ ಪ್ರಸಾರ ಭಾರತಿ ಕಾನೂನಿನ ತಿದ್ದುಪಡಿಗಳನ್ನು ಮುಂದುವರೆಸಬಾರದು ಎಂದು ಸಿಪಿಐ(ಎಂ)ಸರಕಾರವನ್ನು ಒತ್ತಾಯಿಸಿದೆ.

"ಒಪ್ಪಂದದ ಪ್ರಕಾರ ಎನ್.ಟಿ.ಸಿ ಗಿರಣಿಗಳನ್ನು ಪುನರುಜ್ಜೀವನಗೊಳಿಸಿ"

ಜವಳಿ ಕಾರ್ಮಿಕರ ಒತ್ತಾಯ

70 ಎನ್.ಟಿ.ಸಿ. ಗಿರಣಿಗಳನ್ನು ಮುಚ್ಚಿ 67330 ಕಾರ್ಮಿಕರನ್ನು ಬೀದಿ ಪಾಲು ಮಾಡುವ ಸರಕಾರದ ಪ್ರಸ್ತಾವವನ್ನು ಜವಳಿ ಕಾರ್ಮಿಕರ ಜಂಟಿ ಕ್ರಿಯಾಸಮಿತಿ ತಿರಸ್ಕರಿಸಿದೆ. ಇಂಟಕ್, ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್, ಬಿಎಂಎಸ್ ಹಾಗೂ ಯುಟಿಯುಸಿಗಳುಳ್ಳ ಈ ಕ್ರಿಯಾ ಸಮಿತಿ ಸಭೆ ಸೇರಿ 9.4.94 ರಂದು ನಡೆದ ವಿಶೇಷ ತ್ರಿಪಕ್ಷೀಯ ಸಮಿತಿಯಲ್ಲಿ ಏರ್ಪಟ್ಟ ಸರ್ವಾನುಮತದ ಒಪ್ಪಂದದಂತೆ ಈ ಗಿರಣಿಗಳನ್ನು ಪುನರುಜ್ಜೀವನಗೊಳಿಸಬೇಕು ಎಂಬ ತನ್ನ ನಿಲುವನ್ನು ಪುನರುಚ್ಚರಿಸಿದೆ. ಈ ತ್ರಿಪಕ್ಷೀಯ ಒಪ್ಪಂದಕ್ಕೆ ಕೇಂದ್ರ ಸಚಿವ ಸಂಪುಟ 9.5.95 ರಂದು ತನ್ನ ಅನುಮತಿಯನ್ನು ನೀಡಿತ್ತು.

ಹೊಸ ಪ್ರಧಾನ ಮಂತ್ರಿ ಗುಜ್ರಾಲ್ ಹಾಗೂ ಹಣಕಾಸು ಮಂತ್ರಿಗಳನ್ನು ಈ ವಿಷಯದಲ್ಲಿ ಭೇಟಿ ಮಾಡಲು ಜಂಟಿ ಕ್ರಿಯಾ ಸಮಿತಿ ನಿರ್ಧರಿಸಿತು. ಸಂಯುಕ್ತ ರಂಗ ಚಾಲನಾ ಸಮಿತಿಯ ಹಲವು ಸದಸ್ಯರನ್ನು ಭೇಟಿ ಮಾಡಲು ಕೂಡಾ ಸಮಿತಿ ನಿರ್ಧರಿಸಿತು. ಕಾರ್ಮಿಕರು ಮತ್ತು ಜವಳಿ ಉದ್ದಿಮೆಯ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಎನ್.ಟಿ.ಸಿ. ಗಿರಣಿಗಳನ್ನು ಪುನರುಜ್ಜೀವನಗೊಳಿಸುವ ಸರ್ವಾನುಮತದ ಒಪ್ಪಂದವನ್ನು ಮಾನ್ಯ ಮಾಡಲು ಪ್ರಧಾನಿಗಳು ಕ್ರಮ ಕೈಗೊಳ್ಳುವರೆಂಬ ಆಶಾಭಾವನೆಯಿಂದ... ಜಂಟಿ ಕ್ರಿಯಾ ಸಮಿತಿ ಆಶಿಸಿದೆ.

ಈ ಒಪ್ಪಂದದ ಪ್ರಕಾರ ಎನ್.ಟಿ.ಸಿ. ಗಿರಣಿಗಳನ್ನು ಪುನರುಜ್ಜೀವನಗೊಳಿಸಬೇಕೆಂಬ ಒತ್ತಾಯದ ರಾಜ್ಯಗಳಲ್ಲಿ ಜಂಟಿ ಹೋರಾಟಗಳನ್ನು ಮುಂದುವರಿಸಬೇಕೆಂದು ಕ್ರಿಯಾಸಮಿತಿ ಎಲ್ಲಾ ಜವಳಿ ಕಾರ್ಮಿಕರಿಗೆ ಕರೆ ನೀಡಿದೆ.

ಅಣಕ — ಶರತ್ ಚಂದ್ರ

ನಿಮ್ಮ ಗ್ರಹಗಳ ಗತಿ - ಈ ವಾರ

ಮೇಷ

ನೀವು ಬೋಫೋರ್ಸ್‌ನ ಕೇಸುಗಳಲ್ಲಿ ಆಪಾದಿತರಾಗುವ ಕಂಟಕ ಇದೆ. ಆದ್ದರಿಂದ ಸಿಬಿಐನ್ನು ತರಾಟೆಗೆ ತೆಗೆದುಕೊಂಡು ಹೇಳಿಕೆ ನೀಡಿ ನಿರೀಕ್ಷಣಾ ಜಾಮೀನು ಸಿಗುವ ಯೋಗ ಇದೆ. ಕೋಪದ ಮಾತುಗಳಿಂದ ಸರಕಾರದ ಕೆಲಸಗಳಲ್ಲಿ ನಷ್ಟ. ಭಾಗೀದಾರನಿಂದ ವ್ಯವಹಾರದಲ್ಲಿ ಖರ್ಚು, ಮನೆಯಲ್ಲಿ ಕಿರಿಕಿರಿ.

ವೃಷಭ:

ಈಗಾಗಲೇ ವಿರೋಧ ಪಕ್ಷದಲ್ಲಿರುವ ನೀವು ಎಲ್ಲವನ್ನು ಕಳೆದುಕೊಂಡಿದ್ದರೂ ನಿರಾಶರಾಗಬೇಡಿ. ಸೋನಿಯ ಕಾಂಗ್ರೆಸ್ ಸದಸ್ಯರಾಗಿರುವುದು ನಿಮ್ಮ ಗ್ರಹಗಳ ಗತಿ ಪೂರ್ಣ ಬದಲಾಗಲಿದೆ. ಸೋನಿಯಾ ಕಾಂಗ್ರೆಸ್ ನಾಯಕತ್ವ ವಹಿಸಬೇಕೆಂದು ವಾರಕ್ಕೆ ಎರಡು ಬಾರಿ ಹೇಳಿಕೆ ಕೊಡಿ. ಶನಿವಾರ ಮನೆಯಲ್ಲಿ ಕಳ್ಳತನದ ನಷ್ಟ, ಬಂಧುಗಳಿಂದ ದೂರವಿರಿ.

ಮಿಥುನ

ನಿಮಗೆ ಮೇವು ಹಗರಣದಲ್ಲಿ ಆಪಾದಿತರಾಗುವ ಕಂಟಕ ಇದೆ. ಆದರೆ ಧೈರ್ಯವಾಗಿರಿ, ರೈಲಿನೆದುರು ಪ್ರಾಣ ಕಳೆದುಕೊಳ್ಳುವುದು ನಿಮ್ಮ ಗ್ರಹಗಳ ಗತಿ ಪ್ರಕಾರ ಸಲ್ಲ. ನಮ್ಮ ದೇಶದಲ್ಲಿ ನಿಮ್ಮ ರಕ್ಷಣೆಗೆ ಬರಬಲ್ಲ ಕಾನೂನಿನ ತೂತುಗಳು ಇವೆ. ಹವಾಲಾ ಹಗರಣವನ್ನು ನೆನಪಿಸಿಕೊಳ್ಳಿ. ಅವೆಲ್ಲವನ್ನೂ ಬಳಸಿ ಕೊಳ್ಳಿ, ಶ್ರೀಮತಿಯಿಂದ ಕಿರಿಕಿರಿ, ಶನಿವಾರ ಹಿರಿಯ ಮಗನಿಗೆ ವಿದೇಶ ಯಾತ್ರೆ.

ಕಟಕ

ಚುನಾವಣಾ ಕಮಿಷನ್ ಕೃಪೆಯಿಂದ ನಡೆಯುತ್ತಿರುವ ಪಕ್ಷಗಳ ಚುನಾವಣೆಗಳಲ್ಲಿ ಅಭ್ಯರ್ಥಿಗಳಾಗಿ. ನಿಮಗೆ ಯಾವುದು ಪಕ್ಷದ ಸ್ಥಾನವಾದರೂ ಸಿಗುವ ಗ್ರಹಗತಿ ಚೆನ್ನಾಗಿದೆ. ಈ ಚುನಾವಣೆಗಳು ಇಪ್ಪತ್ತು ವರ್ಷಗಳಿಗೊಮ್ಮೆ ಗ್ರಹಗಳ ನಕ್ಷತ್ರ ಕಾಯಗಳ ಅಪೂರ್ವ ತಾಳಮೇಳಗಳಿಂದ ಆಗುತ್ತಿರುವ ಘಟನೆ. ಈ ಅಮೃತಗಳಿಗೆಯನ್ನು ವ್ಯರ್ಥಗೊಳಿಸಬೇಡಿ. ವಿದೇಶ ಸಂಸ್ಥೆಯ... ನೌಕರಿಯಿಂದ ಹೆಚ್ಚಿನ ಧನಾಗಮ... ಶನಿವಾರ ವಿದ್ಯಾಲಯದ ಕೆಲಸಗಳ... ಸಮಸ್ಯೆ ವೃಥಾ ಧನ ಖರ್ಚು.

ಸಿಂಹ

ನೀವು ಕೆಲಸ ಮಾಡುತ್ತಿರು... ಕಂಪನಿಗೆ ಕಂಟಕ ಕಾಲ, ಸರಕಾರ ಇದ... ಲಾಭದಿಂದ ನಡೆಯುತ್ತಿರುವುದರಿಂ... ಅದರ ಶೇರುಗಳನ್ನು ಮಾರಬೇಕೆಂದಿದ... ಮೃತ್ಯುಂಜಯ ಜಪ ಶಾಂತಿಯಿಂ... ಅನುಕೂಲ. ನಿವೇಶನ ವ್ಯವಹಾರದ... ವಿಘ್ನ. ಮದುವೆಯ ಯತ್ನ ಸುಗಮ...

ಕನ್ಯಾ

ನಿಮ್ಮ ಸರಕಾರಕ್ಕೆ ಹೊರಗಿನಿಂ... ಒಳಗಿನಿಂದ ಕಂಟಕ- ಹುಷಾರಾಗಿ... ಏನೂ ಹೇಳಿಕೆ ಕೊಡದಿರುವುದು ಒಳಿತು. ನಿಮ್ಮ ವಿರೋಧಿ ಬಣ... ನಾಯಕರ ಮೇಲೆ ಕಣ್ಣಿಡಿ. ಸಾಧ್ಯವಾದ... ಅವರಿಗೆ ಪಕ್ಷದ ಸ್ಥಾನಗಳನ್ನು ಅವಿರೋಧವಾಗಿ ಕೊಡಿಸಿ. ಕೋಪ... ಮಾತುಗಳಿಂದ ಸರಕಾರದ ಕೆಲಸಗಳ... ನಷ್ಟ. ಹೆಂಡತಿಯಿಂದ ಕಿರಿಕಿರಿ.

ತುಲಾ, ವೃಶ್ಚಿಕ, ಧನು ಇತ್ಯಾದಿ

ಮಳೆ ಇನ್ನೂ ದೂರವಾದ್ದರಿಂ... ದಿನದ ವಿದ್ಯುತ್ ಕಡಿತದಲ್ಲಿ ಹೆಚ್ಚಳ... ದರದಲ್ಲೂ ಹೆಚ್ಚಳ. ಜತೆಗೆ ಪೆಟ್ರೋಲ್... ಡೀಸೆಲ್, ಸೀಮೆಎಣ್ಣೆಗಳ ದರದ... ಏರಿಕೆಯ ಕಂಟಕ. ವಿದ್ಯುತ್ ಇದಾ... ಇಲ್ಲವೆ ಜನರೇಟರ್ ಇರುವ ಟಿ... ಅಂಗಡಿಗಳಲ್ಲಿ ಪೆಪ್ಸಿ ಇಂಡಿಪೆಂಡೆನ್ಸ್... ಕಪ್ ಕ್ರಿಕೆಟ್ ನೋಡುತ್ತಾ ಎಲ್ಲ... ಕಷ್ಟಗಳನ್ನು ಮರೆಯುವುದು ಒಳಿತು.

ಭೂಮಾಲಕರಿಗೆ ತಲೆಬಾಗಿ ಕೃಷಿಕೂಲಿಕಾರರ ಸಮಗ್ರ ಶಾಸನದಲ್ಲಿ ಇನ್ನಷ್ಟು ವಿಳಂಬ ಬೇಡ

- ಕೃಷಿ ಕಾರ್ಮಿಕರ ಎಚ್ಚರಿಕೆ

ಕೃಷಿ ಕಾರ್ಮಿಕರಿಗೆ ಸಮಗ್ರ ಕೇಂದ್ರೀಯ ಶಾಸನವನ್ನು ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲೇ ಅಂಗೀಕರಿಸಿ ತಮಗೆ ಮತ ಕೊಟ್ಟವರಿಗೆ ನೀಡಿದ ವಚನವನ್ನು ಪಾಲಿಸಬೇಕು ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಮುಖಂಡರು ಕೇಂದ್ರ ಕಾರ್ಮಿಕ ಮಂತ್ರಿ ಅರುಣಾಚಲಂರವರನ್ನು ಒತ್ತಾಯಿಸಿದ್ದಾರೆ.

ದೇಶದಲ್ಲಿ 90 ಕೋಟಿಗಿಂತಲೂ ಹೆಚ್ಚು ಕೃಷಿಕೂಲಿಕಾರರಿದ್ದಾರೆ. ಅವರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದವರು. ಸ್ವಾತಂತ್ರ್ಯದ 50 ವರ್ಷಗಳ ನಂತರವೂ ಅವರಿಗೆ ಮೂಲಭೂತ ಮಾನವ ಹಕ್ಕುಗಳನ್ನು ವಂಚಿಸಲಾಗುತ್ತಿದೆ ಎಂದು ಈ ಮುಖಂಡರು ಮಂತ್ರಿಗಳಿಗೆ ಹೇಳಿದರು.

ಮಂತ್ರಿಗಳಿಗೆ ನೀಡಿದ ಒಂದು ಪತ್ರದಲ್ಲಿ ಸಂಯುಕ್ತರಂಗ ತನ್ನ 'ಸಮಾನ ಕನಿಷ್ಠ ಕಾರ್ಯಕ್ರಮ'ದಲ್ಲಿ ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ಸಿಗುವಂತಾಗಲು, ಕೆಲಸದ ನ್ಯಾಯಪೂರ್ಣ ಪರಿಸ್ಥಿತಿ, ಗುಂಪು ವಿಮೆ, ಅಪಘಾತ ವಿಮೆ, ಹೆರಿಗೆ ರಜೆ ಮತ್ತಿತರ ಹಕ್ಕುಗಳು ಸಿಗುವಂತಾಗಲು ಇತಂಹ ಒಂದು ಶಾಸನವನ್ನು ಜಾರಿಗೆ ತರುವುದಾಗಿ ವಚನ ನೀಡಿರುವುದನ್ನು ನೆನಪಿಸಲಾಗಿದೆ.

ದೇವೇಗೌಡರ ಸರಕಾರದವರೆಗೂ ಹಲವು ಸರಕಾರಗಳು ಈ ಬಗ್ಗೆ ಮತ್ತೆ ಮತ್ತೆ ಭರವಸೆ ನೀಡಿದರೂ ಈ ಮಸೂದೆಯ... ಲೋಕಸಭೆಯ ಮುಂದಿಡಲು ಗಂಭೀರ... ಪ್ರಯತ್ನ ನಡೆಯಲಿಲ್ಲ. ಎಲ್ಲಾ ಸಂಗತಿಗಳ... ಬಹುಪಕ್ಷೀಯ ಸಮಾಲೋಚನೆಗಳ... ಇತ್ಯರ್ಥಮಾಡಲಾಗಿದೆ. ರಾಜ್ಯಗಳೊಂದಿ... ಇನ್ನಷ್ಟು ಸಮಾಲೋಚನೆಗಳ ಅಗತ್ಯವಿ... ಭೂಮಾಲಕ ಗುಂಪಿನ ಒತ್ತಡದಿಂದ ಇಂತ... ಮಸೂದೆಯನ್ನು ಅಂಗೀಕರಿಸುವ... ಮಾಡುತ್ತಿರುವ ವಿಳಂಬ ಖಂಡನೀಯ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಮುಖಂಡರು ಹೇಳಿದ್ದಾರೆ.

ಈ ದಿಕ್ಕಿನಲ್ಲಿ ಇನ್ನಷ್ಟು ವಿಳಂಬ ಮಾಡಿದರೆ ಮಾರ್ಚ್ 12 ರಂ... ದೇಶಾದ್ಯಂತ ನಡೆದ ಮತಪ್ರದರ್ಶನಗಳಿಗಿಂತ ಹೆಚ್ಚು ಸಮರಧೀರ ಕಾರ್ಯಾಚರಣೆಗ... ಇಳಿಯಬೇಕಾಗುತ್ತದೆ ಎಂದು ಎಚ್ಚರಿ... ಕೃಷಿ ಕಾರ್ಮಿಕರ ಮುಖಂಡರು ... ಅಧಿವೇಶನದಲ್ಲಾದರೂ ಈ ಶಾಸನ ಅಂಗೀಕಾರವಾಗುವಂತೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮಂತ್ರಿಗಳನ್ನು ಆಗ್ರಹಪಡಿಸಿದೆ.

ಮಂತ್ರಿಗಳಿಗೆ ಸಲ್ಲಿಸಿದ ಪತ್ರಕ್ಕೆ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಎ.ವಿಜಯರಾಘವನ್ ಹಾಗೂ ಜಂಟಿ ಕಾರ್ಯದರ್ಶಿಗಳಾದ ಸುನೀತ್ ಚೋಪ್ರಾ ಹಾಗೂ ಹನ್ನನ್ ಮೊಲ್ಲಾ ಸಹಿ ಹಾಕಿದ್ದಾರೆ. (ಐಎನ್‌ಎ...)

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು